ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ನೈಜ ಅಂಬೇಡ್ಕರರ ಅನ್ವೇಷಣೆಯಲ್ಲಿ

[illegible] 28, 2012 [illegible] 20 [illegible] 14/-





ಯಡ್ಡಿ-ಅನಂತ್ ರಾಜಿ

ಪಟ್ಟಕ್ಕೆ ಶೆಟ್ಟರ್

ಕಾವೇರಿ ಕಾಮಗಾರಿ

124 ಕೋಟಿ ಲೂಟಿ





ರಾಜಕೀಯದಲ್ಲಿ ನಟಿಯರು

'ಕೃಷ್ಣಾ ನದಿ ಇರೋದೆಲ್ಲಿ?'

ಅಲೆಮಾರಿ ಆರ್ಭಟ



ಇಂದು ಕರ್ನಾಟಕದಲ್ಲಿ ಅಂಬೇಡ್ಕರ್ ಅವರ ಆಶಯಗಳು ಮತ್ತು ಈ ದೇಶದ ಶೋಷಿತ ಜನತೆಯ ವಿಮೋಚನೆಗೆ ಅವರು ನೀಡಿದ ಕೊಡುಗೆಗಳ ಸುತ್ತ ಚರ್ಚೆ ಮತ್ತು ದಾಳಿಗಳು ಪ್ರಾರಂಭವಾಗಿವೆ. ಒಂದೆಡೆ ಬಲಪಂಥೀಯರು ಅಂಬೇಡ್ಕರ್ ಅವರ ಹೋರಾಟವನ್ನು ಮತ್ತು ಅವರ ಕೊಡುಗೆಗಳನ್ನು ಸಂಪೂರ್ಣ ಕಡೆಗಣಿಸುವ ಹೊಸ ಹುನ್ನಾರಗಳನ್ನು ನಡೆಸುತ್ತಿದ್ದಾರೆ. ಅದಕ್ಕೆ ಇತ್ತೀಚಿನ ಸೇರ್ಪಡೆ ಅಂಬೇಡ್ಕರ್ ಸಂವಿಧಾನದ ಕರಡನ್ನು ಕೂಡಾ ರಚಿಸಲಿಲ್ಲ. ಅದನ್ನು ರಚಿಸಿದ್ದು ಬೆನಗಲ್ ನರಸಿಂಹರಾವ್ ಎಂಬ ಅಸಂಬದ್ಧ ಸುಳ್ಳಿನ ದಾಳಿ. ಮತ್ತೊಂದೆಡೆ ಅಂಬೇಡ್ಕರ್ ವಾದಿಗಳು ಎನಿಸಿಕೊಂಡವರೂ ಸಹ ಅಂಬೇಡ್ಕರ್ ಅವರನ್ನು ಅವರು ಜೀವನದುದ್ದಕ್ಕೂ ಶೋಷಿತ ವಿಮೋಚನೆಗೆ ನಡೆಸಿದ ನಿರಂತರ ಪ್ರಯೋಗಗಳಲ್ಲಿ ಯಾವುದಾದರೂ ಒಂದಕ್ಕೆ ಸೀಮಿತಗೊಳಿಸಿ ಅವರ ಒಟ್ಟು ಕ್ರಾಂತಿಕಾರಿ ಅನ್ವೇಷಣೆಯ ಬದುಕನ್ನು ಕುಬ್ಜಗೊಳಿಸುತ್ತಿದ್ದಾರೆ.

ಇದು ಈಗ ಪ್ರಾರಂಭವಾಗಿರುವುದೇನೂ ಅಲ್ಲ. ದೇಶದ ಹಲವು ಕಡೆ ಅಂಬೇಡ್ಕರ್ ಅವರನ್ನು ತಮಗೆ ಬೇಕಾದ ಪ್ರತಿಮೆಗೆ ಕಟ್ಟಿಹಾಕುವ ಪಟ್ಟಭದ್ರ ಪ್ರಯತ್ನಗಳು ನಡೆಯುತ್ತಲೇ ಇವೆ. ಇದರ ಕುರಿತಾಗಿ ದೇಶದ ಖ್ಯಾತ ಚಿಂತಕ ಡಾ. ಆನಂದ್ ತೇಲ್‌ತುಂಬ್ಡೆಯರವರು ಅಂಬೇಡ್ಕರ್ ನಂತರದ ದಲಿತ ಚಳವಳಿಯಲ್ಲಿ ಮತ್ತು ಚಳವಳಿಗಾಗಿ ಅಂಬೇಡ್ಕರ್ ಎಂಬ ಮಹಾನ್ ಪ್ರಬಂಧವನ್ನು 1997ರ ಮಾರ್ಚ್ 27-28ರಂದು ಪುಣೆ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗವು ಆಯೋಜಿಸಿದ್ದ 'ಅಂಬೇಡ್ಕರ್ ನಂತರದ ದಲಿತ ಚಳವಳಿಗಳು' ಎಂಬ ವಿಚಾರಸಂಕಿರಣದಲ್ಲಿ ಮಂಡಿಸಿ ದ್ದರು. ಅದು ಇಂದಿಗೂ ಕನ್ನಡ ಓದುಗರಿಗೆ ಅರ್ಥಪೂರ್ಣ ಹೊಳಹನ್ನು ನೀಡಬಹುದು ಎಂಬ ಉದ್ದೇಶದಿಂದ ಈ ಬಾರಿಯ ಅಂಕಣದಲ್ಲಿ ಆ ಪ್ರಬಂಧದ ಸಂಕ್ಷಿಪ್ತ ಅನುವಾದವನ್ನು ಮಾಡಿದ್ದೇನೆ. ಇದರ ಸುತ್ತ ಕನ್ನಡದ ಎಲ್ಲಾ ಬಗೆಯ ಪ್ರಗತಿಪರರಲ್ಲಿ ಚರ್ಚೆ ನಡೆಯುವುದು ಒಂದು ಹೊಸ ಮಾರ್ಗದ ಶೋಧನೆಗೂ ಪೂರಕವಾಗ ಬಹುದೆಂಬ ಆಶಯ ನನ್ನದು.

ನೈಜ ಅಂಬೇಡ್ಕರರ ಅನ್ವೇಷಣೆಯಲ್ಲಿ...

ಅಂಬೇಡ್ಕರರ ನಂತರ ದಲಿತ ಚಳವಳಿ ಅಂಬೇಡ್ಕರರ ಸುತ್ತ ಕಟ್ಟಿಕೊಂಡಿರುವ ಪ್ರತಿಮೆಗಳು ಅಂಬೇಡ್ಕರರನ್ನು ಸಂವಿಧಾನದ ಕರ್ತೃವೆಂದೂ, ಪ್ರಸ್ತುತ ವ್ಯವಸ್ಥೆಗೆ ಕಾರಣೀಭೂತರೆಂದೂ, ಒಬ್ಬ ಬೋಧಿಸತ್ವನೆಂದೂ, ಒಬ್ಬ ಸಂವಿಧಾನವಾದಿಯೆಂದೂ, ಒಬ್ಬ ಅವಧೂತನೆಂದೂ, ಒಬ್ಬ ರಕ್ಷಕನೆಂದೂ, ಒಬ್ಬ ಉದಾರವಾದಿ ಪ್ರಜಾತಂತ್ರವಾದಿಯೆಂದೂ, ಒಬ್ಬ ದಲಿತರ ನಾಯಕನೆಂದೂ, ಒಬ್ಬ ಕಡು ಕಮ್ಯುನಿಸ್ಟ್ ವಿರೋಧಿಯೆಂದೂ, ಸುಧಾರಣಾವಾದದಲ್ಲಿ ನಂಬಿಕೆಯಿಟ್ಟಿದ್ದ ಮತ್ತು ಕ್ರಾಂತಿಗಳ ವಿರೋಧಿಯೆಂದೂ ಬಣ್ಣಿಸುತ್ತವೆ.

ಈ ಬಗೆಯಲ್ಲಿ ಅಂಬೇಡ್ಕರರ ಬಗ್ಗೆ ಇರುವ ಒಂದು ಪೆಟಿ-ಬೂರ್ಜ್ವಾ ಚಿತ್ರಣವೇ ಇಂದು ದಲಿತ ಚಳವಳಿಯನ್ನು ಆವರಿಸಿಕೊಂಡಿವೆ. ಈ ಬಗೆಯ ಬಣ್ಣನೆಗಳು ಅಂಬೇಡ್ಕರರೊಳಗಿದ್ದ, ಯಾವುದೇ ಬಗೆಯ ಶೋಷಣೆ, ಅನ್ಯಾಯ, ಕಪಟಗಳಿಲ್ಲದ ಮಾನವ ಸಮಾಜದ ಕನಸುಗಾರನನ್ನು ಕಟ್ಟಿಕೊಡಲು ವಿಫಲವಾಗುತ್ತವೆ.

ದಲಿತ ಚಳವಳಿಯ ಬಹಳಷ್ಟು ಅಧ್ಯಯನಗಳು ಅಂಬೇಡ್ಕರರನ್ನು ಒಬ್ಬ ಉದಾರವಾದಿ ಪ್ರಜಾತಂತ್ರವಾದಿಯೆಂದು ಚಿತ್ರಿಸುವ ಚೌಕಟ್ಟಿನಿಂದಲೇ ಪ್ರಭಾವಿತವಾಗಿವೆ. ಆದರೆ ಅದು ನಿಜವಾದ ಅಂಬೇಡ್ಕರರನ್ನು ಪ್ರತಿನಿಧಿಸುತ್ತದೆಯೆ? ಅದು ಅಂಬೇಡ್ಕರ್ ಚಳವಳಿಯ ನಿಜವಾದ ಅಂತಃಸತ್ವವನ್ನು ಹಿಡಿದಿಡುತ್ತದೆಯೇ? ಎಲ್ಲಕ್ಕಿಂತ ಹೆಚ್ಚಾಗಿ ದಲಿತರ ವಿಮೋಚನಾ ಚಳವಳಿಯಲ್ಲಿ ನಾವು ಅಸ್ತ್ರದಂತೆ ಬಳಸಬೇಕೆಂದಿರುವುದು ಅಂಬೇಡ್ಕರರ ಈ ಪ್ರತಿಮೆಯನ್ನೇ?

ಒಂದು ಸಾಮಾಜಿಕ ಸಮುದಾಯವಾಗಿ ದಲಿತರು ಈಗಲೂ ಅತ್ಯಂತ ಬಡವರ್ಗದವರು. ಅವರಲ್ಲಿ ಕೆಲವೇ ಕೆಲವರು ಮೀಸಲಾತಿ ಮತ್ತು ರಾಜಕೀಯ ಅವಕಾಶಗಳಂತಹ ಪ್ರಭುತ್ವ ನೀತಿಗಳಿಂದಾಗಿ ಬಡತನದ ಬಲೆಯಿಂದ ಮುಕ್ತರಾಗಿ ಹೇಳಿಕೊಳ್ಳಬಹುದಾದಷ್ಟು ಸಂಪನ್ನರಾಗಿದ್ದಾರೆ. ಆದರೆ ಸಾಮಾಜಿಕ ಸ್ತರದಲ್ಲಿ ಆರ್ಥಿಕ ಸ್ಥಾನಮಾನಗಳೇನೇ ಇದ್ದರೂ ಎಲ್ಲ ದಲಿತರು ಇನ್ನೂ ದಮನಕ್ಕೆ ಒಳಗಾಗಿಯೇ ಇದ್ದಾರೆ. ಈ ಸಾಮಾಜಿಕ ದಮನವು ಇನ್ನೂ ಗ್ರಾಮೀಣ ಪ್ರದೇಶದಲ್ಲಿ ಜೀವಂತವಾಗಿರುವ ಅತಿಕ್ರೂರ ಅಸ್ಪೃಶ್ಯತೆಯಂತ ಆಚರಣೆಗಳಿಂದ ಹಿಡಿದು ನಗರಜೀವನದ ಆಧುನಿಕ ಕ್ಷೇತ್ರಗಳಲ್ಲೂ ಕಂಡು ಬರುವ ಸೂಕ್ಷ್ಮ ಭೇದಭಾವಗಳವರೆಗೆ ಹರಡಿಕೊಂಡಿದೆ. ಕಳೆದ ಐದು ದಶಕಗಳ ಅಂಕಿಅಂಶಗಳು ತೋರಿಸಿಕೊಡುವಂತೆ ದಲಿತರ ಸ್ಥಿತಿಗತಿ ಎಲ್ಲಾ ಕ್ಷೇತ್ರಗಳಲ್ಲೂ ಮೊದಲಿಗಿಂತ ಸುಧಾರಿಸಿದ್ದರೂ ದಲಿತರು ಹಾಗೂ ದಲಿತೇತರ ನಡುವೆ ಇರುವ ಅಂತರ ಅದೇ ರೀತಿ ಇದೆ ಅಥವಾ ಇನ್ನಷ್ಟು ಹೆಚ್ಚಾಗಿದೆ. ದಲಿತರಲ್ಲಿ ಈಗಲೂ ಶೇ.75ರಷ್ಟು ಜನ ಭೂಮಿಗೇ ಅಂಟಿಕೊಂಡಿದ್ದಾರೆ. ಇವರಲ್ಲಿ ಶೇ.25ರಷ್ಟು ಸಣ್ಣ ಹಾಗೂ ಅತಿಸಣ್ಣ ರೈತಾಪಿಯಾಗಿದ್ದರೆ ಉಳಿದ ಶೇ.50ರಷ್ಟು ಭೂಹೀನ ಕೂಲಿಗಳೇ. ಒಟ್ಟಾರೆ ರೈತ ಕೂಲಿಗಳಲ್ಲಿ ದಲಿತರ ಪ್ರಮಾಣ ಹೆಚ್ಚುತ್ತಲೇ ಸಾಗಿದೆ. ನಗರ ಪ್ರದೇಶದಲ್ಲೂ ಅವರು ಹೆಚ್ಚಾಗಿ ಅಸಂಘಟಿತ ವಲಯಗಳಲ್ಲೇ ಕೆಲಸ ಮಾಡುತ್ತಾರೆ. ಅಲ್ಲಿನ ಕೆಲಸದ ವಾತಾವರಣವಂತೂ ಹಳ್ಳಿಗಾಡಿನ ಊಳಿಗಮಾನ್ಯ ಪರಿಸ್ಥಿತಿಯನ್ನೇ ನೆನಪಿಸುವಂತಿರುತ್ತದೆ. ಒಟ್ಟಾರೆ ದಲಿತರ ಜನಸಂಖ್ಯೆ 13.8 ಕೋಟಿಯಾಗಿದ್ದರೆ ಅದರಲ್ಲಿ ಕಸಗುಡಿಸುವ ಕೆಲಸವನ್ನೂ ಒಳಗೊಂಡಂತೆ ಸೇವಾಕ್ಷೇತ್ರಗಳಲ್ಲಿ ಮೀಸಲಾತಿಯಿಂದ ದೊರೆಯುವ ಉದ್ಯೋಗದ ಸಂಖ್ಯೆ 13 ಲಕ್ಷಗಳನ್ನು ದಾಟುವುದಿಲ್ಲ. ಇದು ಒಂದು ಪರ್ಸೆಂಟನಷ್ಟು ಆಗುವುದಿಲ್ಲ. ಈ ಅಂಕಿಅಂಶಗಳೂ ಸಹ ಸರಿಯಾದ ಚಿತ್ರಣವನ್ನೇನೂ ನೀಡುವುದಿಲ್ಲ. ಏಕೆಂದರೆ ಈ 13 ಲಕ್ಷದಷ್ಟು ಉದ್ಯೋಗಗಳಲ್ಲಿ ಹಲವಾರು ಸಾರ್ವಜನಿಕ ಉದ್ಯಮಗಳಲ್ಲಿರುವ ಗುಮಾಸ್ತ ರೀತಿಯ ಉದ್ಯೋಗಗಳನ್ನೂ ಸೇರಿಸಿ ಎ ಮತ್ತು ಬಿ ವರ್ಗದ ಉದ್ಯೋಗಗಳು ಕೇವಲ 72,212. ಆದರೆ ಚಪರಾಸಿ ಉದ್ಯೋಗಗಳ ಸಂಖ್ಯೆ 1,31,841!

ಹೊಸ ರಾಜಕೀಯ ಆರ್ಥಿಕ ವ್ಯವಸ್ಥೆ ಜಗತ್ತನ್ನೇ ಆವರಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ದಲಿತರ ವಿಮೋಚನಾ ಹೋರಾಟಗಳ ವ್ಯಾಕರಣ ದಲಿತರಿಗೆ ಈವರೆಗೆ ಪರಿಚಿತವಾಗಿರುವ ಭಾಷೆಗಿಂತ ಸಂಪೂರ್ಣ ಭಿನ್ನವಾಗಿರುತ್ತದೆ. ಈ ಘಾತುಕ ಶಕ್ತಿಗಳ ಆಕ್ರಮಣವನ್ನು ವಿಶ್ವದ ಎಲ್ಲಾ ದಮನಿತರು ಅರ್ಥಮಾಡಿಕೊಳ್ಳುತ್ತಿರುವ ಹೊತ್ತಿನಲ್ಲಿ ದಲಿತರು ತಮ್ಮನ್ನು ಅದರ ಭಾಗವಾಗಿ ಕಂಡುಕೊಳ್ಳದೇ ಹೋಗುವುದು ಮೂರ್ಖತನವಾಗುತ್ತದೆ. ಒಂದು ಸಾಮಾಜಿಕ ಘಟಕವಾಗಿ ದಲಿತರ ಬದುಕನ್ನು ದೇಶದ ಆರ್ಥಿಕತೆಯ ಸಂಘಟಿತ ಕ್ಷೇತ್ರಕ್ಕೆ ಸೇರಿಕೊಂಡು ಮಾಯವಾದ ಅಲ್ಪಸಂಖ್ಯಾತ ದಲಿತ ಸಮುದಾಯ ಪ್ರತಿನಿಧಿಸುವುದಿಲ್ಲ. ಬದಲಿಗೆ ಈಗಲೂ ಹಳ್ಳಿಗಳಲ್ಲೇ ಉಳಿದುಕೊಂಡಿರುವ ಮತ್ತು ನಗರದ ಅಸಂಘಟಿತ ಕ್ಷೇತ್ರಗಳಲ್ಲಿ ನಲುಗುತ್ತಿರುವ ದಲಿತರ ಬದುಕು ಅದರ ನಿಜವಾದ ಪ್ರತಿನಿಧಿ. ವಾಸ್ತವವಾಗಿ ತಮ್ಮ ವಿಮೋಚನೆ ಗಾಗಿ ಸಮರವನ್ನು ನಡೆಸುತ್ತಿರುವ ಈ ಸಮುದಾಯಕ್ಕೆ ಅಸ್ತ್ರಗಳ ಅಗತ್ಯವಿದೆ. ಈ ಸಮರವನ್ನು ಏಕಕಾಲದಲ್ಲಿ ಎರಡು ಅಂಗಣಗಳಲ್ಲಿ ನಡೆಸುವ ಅಗತ್ಯವಿದೆ-ಜಾತಿ ಮತ್ತು ವರ್ಗ. ಆದರೆ ಈ ಎರಡು ಅಂಶಗಳನ್ನು ಅತ್ಯಂತ ಸಂಕುಚಿತವಾಗಿ ಹಾಗೂ ವಿಭಾಗೀಕರಿಸಿ ಅರ್ಥೈಸಿಕೊಂಡಿರುವುದರಿಂದ ಒಂದನ್ನು ಹೊರತುಪಡಿಸಿ ಮತ್ತೊಂದನ್ನು ನೋಡುವ ಪ್ರವೃತ್ತಿ ಬೆಳೆದಿದೆ. ಆದರೆ ಇಂದಿಗೂ ದಲಿತರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಇತರೆ ಯಾವುದಕ್ಕಿಂತಲೂ ಅಂಬೇಡ್ಕರ್ ಉತ್ತಮವಾದ ಚೌಕಟ್ಟನ್ನು ಒದಗಿಸಿಕೊಡುವುದರಿಂದ ಹಾಗೂ ಅಂಬೇಡ್ಕರ್ ಈಗಲೂ ದಲಿತರ ಹೃದಯಗಳಲ್ಲಿ ಅಚಲವಾದ ಸ್ಥಾನವನ್ನು ಪಡೆದಿರುವುದರಿಂದ ಅಂಬೇಡ್ಕರ್‌ರ ಶಸ್ತ್ರಾಗಾರದಲ್ಲಿರುವ ಶಸ್ತ್ರಾಸ್ತ್ರಗಳಿಗೆ ಹಿಡಿದಿರುವ ತುಕ್ಕನ್ನು ತೊಳೆದು ಹರಿತಗೊಳಿಸುವ ಅಗತ್ಯವಿದೆ. ಬದಲಾದ ಸಂದರ್ಭದಲ್ಲಿ ಅದರ ಪರಿಣಾಮಕಾರಿಯಾದ ಬಳಕೆಗಾಗಿ ಅಗತ್ಯವಿರುವ ಪರಾಮರ್ಶೆಯನ್ನು ಮಾಡುವ ಹಾಗೂ ಮತ್ತಷ್ಟು ಪುಷ್ಟಿಗೊಳಿಸುವ ಅಗತ್ಯವಿರುತ್ತದೆ. ಬುದ್ಧನ ರೀತಿ ಅಂಬೇಡ್ಕರ್ ಸಹ ತಮ್ಮ ಕೈಯಲ್ಲೇ ಪುನರ್‌ನಿರ್ವಚನಕ್ಕೆ ಒಳಪಡುವ ಅಗತ್ಯವಿದೆ. ನಮ್ಮನ್ನು ಲೂಟಿ ಹೊಡೆಯುತ್ತಿರುವ ದರೋಡೆಕೋರರ ಬಳಿ ಸಣ್ಣಪುಟ್ಟ ಉಪಕಾರಕ್ಕಾಗಿ ಭಿಕ್ಷೆ ಬೇಡದೆ ಇಡೀ ಪ್ರಪಂಚವನ್ನೇ ತಮ್ಮದೆಂದು ಹಕ್ಕಿನಿಂದ ಪ್ರತಿಪಾದಿಸುವಂತೆ ಜನತೆಯನ್ನು ಸ್ಫೂರ್ತಿಗೊಳಿಸುವ ರೀತಿಯಲ್ಲಿ ಕ್ರಾಂತಿಕಾರಿ ಅಂಬೇಡ್ಕರ್‌ರನ್ನು ಜಾನಪದ



ಶಿವಸುಂದರ್

ಚಾರ್ವಾಕ

ಅಂಬೇಡ್ಕರ್‌ರ ಜಾಗದಲ್ಲಿ ಪ್ರತಿಷ್ಠಾಪಿಸಬೇಕಿದೆ. ಎದುರಿಗಿರುವ ಸತ್ಯವನ್ನು ಕಾಣಬಲ್ಲ ಶಕ್ತಿ ಇರುವ ಪ್ರತಿಯೊಬ್ಬರೂ ಈ ಕರ್ತವ್ಯವನ್ನು ಈಡೇರಿಸಲು ಕೊಡುಗೆಗಳನ್ನು ನೀಡಬೇಕಿದೆ. ಏಕೆಂದರೆ ಅಂಬೇಡ್ಕರ್‌ರನ್ನು ಈ ರೀತಿಯಲ್ಲಿ ಪುನರ್ ನಿರ್ವಚನ ಮಾಡಿಕೊಳ್ಳದಿದ್ದರೆ ಅಂಬೇಡ್ಕರ್ ದೇವಶಿಲೆಯಾಗಬಹುದೇ ವಿನಃ ವಿಮೋಚನೆ ಮಾಡುವಲ್ಲಿ ವಿಫಲವಾಗುತ್ತಾರೆ. ಪಟ್ಟಭದ್ರ ಹಿತಾಸಕ್ತಿಗಳು ಅವರನ್ನು ಅತಿ ಎತ್ತರದ ಪೀಠದಲ್ಲಿ ಕುಳ್ಳಿರಿಸಬಹುದು. ಆದರೆ ಅಂಬೇಡ್ಕರ್ ಎಲ್ಲಿ ಅತ್ಯಂತ ಅಗತ್ಯವಿದೆಯೋ ಅಲ್ಲಿಗೆ ಮುಟ್ಟಲಾಗದೆ ಇತಿಹಾಸದ ವಿಪರ್ಯಾಸಗಳಲ್ಲಿ ಒಂದಾಗಿಬಿಡಬಹುದು.

ಅಂಬೇಡ್ಕರರ ಪುನರ್ನಿರ್ವಚನ:

ವಿದ್ವಾಂಸರು ಅಂಬೇಡ್ಕರರ ಚಿಂತನೆಯನ್ನು ಬೇರೆ ರೀತಿಯಲ್ಲಿ ಮುಂದಿಟ್ಟಿದ್ದಾರೆ. ಕೆಲವರು ಅವುಗ ಸುಪರಿಚಿತ ಅಕೆಡೆಮಿಕ್ ಶಾಖೆಗಳಾದ ಸಾಮಾ ರಾಜಕೀಯ, ಧಾರ್ಮಿಕ ಎಂಬಿತ್ಯಾದಿಗಳಾಗಿ ವಿಂಗಡಿಸಿ ಇನ್ನೊಂದು ವಿಧಾನವನ್ನು ಜೀವನಕಥನ ವಿಧಾನವೆ ಹೇಳಿಬಿಡಬಹುದು. ಮೊದಲನೆ ವಿಧಾನದಲ್ಲಿ



ಸಮಸ್ಯೆಯೆಂದರೆ ಅದು ಅಂಬೇಡ್ಕರ್‌ರ ಚಿಂತನೆಯ ಅಕೆಡೆಮಿಕ್ ಶಿಸ್ತುಗಳಲ್ಲಿ ಕೃತಕವಾಗಿ ವಿಭಾಗೀಕರಿಸಿಬಿಡು ಎರಡನೆಯ ಪದ್ಧತಿ ಕಥನ ಮಾದರಿಯಲ್ಲಿ ವೈಭವೀಕರ ನೆಲೆಯಲ್ಲಿ ನಡೆಯುತ್ತಾ ಯಾವುದೇ ವಿಮರ್ಶೆ-ವಿಶ್ಲೇ ನಡೆಸುವುದಿಲ್ಲ. ಹೀಗಾಗಿ ಅವೆರಡೂ ವಿಧಾನಗಳೂ ಒ ಸಮಗ್ರ ಚಿಂತನಾ ವಿಧಾನದ ಪ್ರಮುಖ ಅಂಶಗಳ ಲೋಕದೃಷ್ಟಿ ಮತ್ತು ಭವಿಷ್ಯದ ಕಾಣ್ಕೆಗಳನ್ನು ಹಿಡಿದಿಡು ವಿಫಲವಾಗುತ್ತವೆ.

ಅಂಬೇಡ್ಕರ್: ಬದ್ಧತೆ ಮತ್ತು ತೊಡಕುಗಳು

ಬಾಬಾಸಾಹೇಬ್ ಅಂಬೇಡ್ಕರ್‌ರವರ ವಿಷಯ ಅವರೊಂದು ಪ್ರತಿಮೆಯಾಗಿಬಿಡುವುದು ಅನಿವಾರ್ಯ ಆಗಿತ್ತು. ಅವರ ಉನ್ನತ ಸ್ಥಾನ-ಮಾನ, ತನ್ನ ಜನರ ಅವರಿಗೆ ಇದ್ದ ಬದ್ಧತೆ, ಅವರಿದ್ದ ಚಾರಿತ್ರಿಕ ಸನ್ನಿ ಜನತೆಯ ಅನಕ್ಷರತೆ ಹಾಗೂ ಕಡಿಮೆ ಮಟ್ಟದ ರಾಜಕೀ ತಿಳಿವಳಿಕೆ, ಒಳಗಿನ ಹಾಗೂ ಹೊರಗಿನ ಜನರ ಪಟ್ಟ ಹಿತಾಸಕ್ತಿಗಳಂತ ಸಂಗತಿಗಳೇ ಇದಕ್ಕೆ ಕಾರಣ. ಸಮ ಇರುವುದು ಪ್ರತಿಮೀಕರಣದಲ್ಲಲ್ಲ. ಬದಲಿಗೆ ಅದರ ಬ ಪುನರುತ್ಪಾದನೆಯಲ್ಲಿ. ಆದರೆ ಇಲ್ಲಿಯೂ ಒಂದು ಪ್ರಶ್ನೆಯ ಕೇಳಿಕೊಳ್ಳಬಹುದು. ಅಂಬೇಡ್ಕರ್‌ರನ್ನು ಕೇವಲ ಒ ಪ್ರತಿಮೆಯಾಗಿ ಗ್ರಹಿಸಬಹುದೇ? ಅಂಬೇಡ್ಕ ಶತಮಾನೋತ್ಸವ ಸಂದರ್ಭದಲ್ಲಿ ಪ್ರೊ.ಉಪೇಂದ್ರ ಭಕ್ಷಿಯ ತಮ್ಮ ಒಂದು ಲೇಖನದಲ್ಲಿ ಪ್ರಶ್ನಿಸಿದಂತೆ ಹಲ ಅಂಬೇಡ್ಕರ್‌ಗಳಿರುವುದರಿಂದ ನಾವು ಯಾವ ಅಂಬೇ ಅವರನ್ನು ಸ್ಮರಿಸುತಿದ್ದೇವೆ? ಪ್ರೊ. ಭಕ್ಷಿಯವರು ಕೇಳಿದಾಗ ಅವರ ಮನಸ್ಸಿನಲ್ಲಿ ಹಲವು ರೀತಿಯ ವಿಂಗಡಿಸಬಹುದಾದ ಅಂಬೇಡ್ಕರ್‌ರ ವ್ಯಕ್ತಿತ್ವವಿತ್ತು, ಅವುಗಳಲ್ಲಿ ಕೆಲವ ಕಾಲಾನುಕ್ರಮವಾಗಿ ವಿಂಗಡಿಸ ಬಹುದು. ಉದಾಹರಣೆಗೆ 194 ಮುಂಚಿನ ಅಪ್ರತಿಮ ವಿದ್ಯ ಹೊಂದಿದ್ದ ತನ್ನ ಜನರ ವಿಮೋಚನೆಗಾಗಿ ಒಳಗೂಹೊರ ಹೋರಾಡುತ್ತಿದ್ದ ಅಸ್ಪೃಶ್ಯ ಯುವ ಅಂಬೇಡ್ಕರ್‌ಗ ವೈಸ್‌ರಾಯರ ಆಡಳಿತ ಸಮಿತಿಯ ಸದಸ್ಯರಾಗಿದ್ದು ಆನ ನೆಹರೂ ಅವರ ಕ್ಯಾಬಿನೆಟ್‌ನಲ್ಲಿ ಕಾನೂನು ಮಂತ್ರಿಯ ಅಂಬೇಡ್ಕರ್‌ಗೂ, ಅದಕ್ಕೂ ಮುಂಚೆ ಸಂವಿಧಾನದ ಕ ರಚನಾ ಸಮಿತಿಯ ಅಧ್ಯಕ್ಷ ನಾಗಿದ್ದ ಮತ್ತು ಅನಂತ ವರುಷಗಳಲ್ಲಿ ಬೌದ್ಧ ಧರ್ಮದ ಜೊತೆಗೆ ಸಂಪೂರ್ಣ ಗುರುತಿಸಿಕೊಂಡು ಒಂದು ರೀತಿಯಲ್ಲಿ ಸಂಪೂರ್ಣ ತನ್ನನ್ನು ತಾನೆ ಸ್ಪಿರಿಚುಯಲ್ ಆಗಿಸಿಕೊಂಡ ಅಂಬೇಡ್ಕರ್

▶

ನೋ ಕಾಮೆಂಟ್ಸ್

"ವಿಧಾನಸಭಾ ಚುನಾವಣೆಯ ಮುನ್ನ ಆರು ತಿಂಗಳ ಕಾಲ ತಲಾ 10 ಕೋಟಿ ರೂಪಾಯಿಗಳನ್ನು ಬಿಜೆಪಿ ಪಕ್ಷ ಸಂಘಟನೆಗೆ ನೀಡಿದ್ದೆವು. ಚುನಾವಣೆಯ ನಂತರ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಬಿ.ಎಸ್. ಯಡಿಯೂರಪ್ಪನವರಿಗೆ 260 ಕೋಟಿ ರೂಪಾಯಿಗಳನ್ನು ನೀಡಿದ್ದೆವು."

- ಬಿ.ಎಸ್. ರಾಮುಲು

"ಗಣಿ ಉದ್ಯಮದ ಕಾರಣದಿಂದ ರಾಜ್ಯದಲ್ಲಿ ಇಂದಿಗೂ ಪ್ರಾಕೃತಿಕ ಸಂಪನ್ಮೂಲದ ಲೂಟಿ ಮುನ್ನಡೆಯುತ್ತಿದೆ. ಬಳ್ಳಾರಿ ಜಿಲ್ಲೆಯ ಅಮೂಲ್ಯ ಪರಿಸರ ಹಾನಿಗೊಳಗಾಗಿದೆ. ಅಷ್ಟೂ ಸಾಲದು ಎಂಬಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ಈಗ ಪಶ್ಚಿಮಘಟ್ಟ ಪ್ರದೇಶದಲ್ಲೂ ಗಣಿಗಾರಿಕೆಯ ಪ್ರಸ್ತಾವನೆ ಸಲ್ಲಿಸಿರುವುದು ರಾಜ್ಯದಲ್ಲಿ ಪೂರ್ಣ ಪ್ರಮಾಣದ ಪರಿಸರ ವಿನಾಶಕ್ಕೆ ಮುನ್ನುಡಿ."

- ಯಲ್ಲಪ್ಪ ರೆಡ್ಡಿ

"ಕರ್ನಾಟಕ ರಾಜ್ಯ ಸರ್ಕಾರ ಈಗಲೂ ರಾಜ್ಯದಲ್ಲಿ ಮಲಹೊರುವ ಪದ್ಧತಿ ಇಲ್ಲವೇ ಇಲ್ಲವೆಂದು ವಾದಿಸಿಕೊಂಡು ಬಂದಿದೆ. ಆದರೆ 2011ರ ಸೆನ್ಸಸ್‌ನಲ್ಲಿ ಜನರು ಕೊಟ್ಟಿರುವ ಮಾಹಿತಿಗಳಿಂದ ನಮೂದಾಗಿರುವ ಸಂಗತಿಯೆಂದರೆ ರಾಜ್ಯದಲ್ಲಿರುವ 1.31 ಕೋಟಿ ಮನೆಗಳಲ್ಲಿ 0.1ರಷ್ಟು ಮನೆಗಳು ಅಂದರೆ 13,000ದಷ್ಟು ಮನೆಗಳಲ್ಲಿ ಈಗಲೂ ಮನುಷ್ಯರೇ ಮಲವನ್ನು ಎತ್ತಿ ಹೊರಹಾಕುತ್ತಿದ್ದಾರೆ. ಹಾಗೆಯೇ ಇನ್ನೂ 26,000 ಮನೆಗಳಲ್ಲಿ ಪ್ರಾಣಿಗಳು ಎತ್ತಿಹಾಕುತ್ತವೆ ಎಂದು ದಾಖಲಾಗಿದ್ದರೂ ಅದರ ಅರ್ಥ ಮನುಷ್ಯರೇ ಎಂದಾಗುತ್ತದೆ. ಹೀಗಾಗಿ ಕರ್ನಾಟಕದಲ್ಲಿ ಸರ್ಕಾರ ಏನೇ ಹೇಳಿದರೂ ಅತ್ಯಂತ ಹೀನಾಯವಾದ ಮಲಹೊರುವ ಪದ್ಧತಿ ಜೀವಂತವಾಗಿದೆ ಎಂಬುದು ಸ್ಪಷ್ಟವಾಗುತ್ತದೆ."

- ಪತ್ರಿಕಾ ವರದಿ


ನಂಬಿದ್ರೆನಂಬಿ ಬಿಟ್ರೆಬಿಡಿ

"ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಹೆಚ್ಚು ಹೆಚ್ಚು ಕನ್ನಡ ಚಿತ್ರಗಳ ಪ್ರದರ್ಶನ ಹಾಗೂ ಕನ್ನಡ ಚಿತ್ರರಂಗದ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವೆ."

- ತಾರಾ



ನಿಮ್ಮ ಆರ್ಥಿಕ ದೃಷ್ಟಿಕೋನ ಯಾರ ರಾಜಕೀಯ ಲಾಭಕ್ಕೆ?



"ನಾನು ಮಂಡಿಸಿರುವ ಬಜೆಟ ಆರ್ಥಿಕ ದೃಷ್ಟಿಕೋನವನ್ನು ಹೊಂದಿದೆಯ ವಿನಃ ರಾಜಕೀಯ ಲಾಭದಿಂದ ಕೂಡಿಲ ನಾನು ನನ್ನ ಕರ್ತವ್ಯವನ್ನು ಪ್ರಾಮಾಣಿಕವಾ ನಿಭಾಯಿಸಿದ್ದೇನೆ. ಅದಕ್ಕಾಗಿ ನಾನು ಯಾ ದೇವರಿಗೂ ಹೆದರಬೇಕಿಲ್ಲ."

- ದಿನೇಶ್ ತ್ರಿವೇದಿ, ರೈಲ್ವೆ ಸಚಿ

ಜಾತಿಯನ್ನು ಮೀರಲಾಗದವರು ಮನುಷ್ಯರಲ್ಲ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ


ಜಾತಿ ಎಂಬ ದುಷ್ಟ ವ್ಯವಸ್ಥೆ ನಮ್ಮ ಸಮಾಜದಲ್ಲಿ ಷ್ಟು ಆಳವಾಗಿ ಬೇರು ಬಿಟ್ಟಿದೆ ಎಂದರೆ ಈ ವ್ಯವಸ್ಥೆ ನ್ನು 'ಕಾಪಾಡಲು' ತಂದೆಯಾದವನು ತಾನು ಹೆತ್ತ ಗಳನ್ನೇ ನೇಣಿಗೆ ಬಿಗಿಯುತ್ತಾನೆ, ತಮ್ಮನಾದವನು ತನ್ನ ಹುಟ್ಟಿದ ಅಕ್ಕನ ಕತ್ತು ಹಿಸುಕಿ ಸಾಯಿಸುತ್ತಾನೆ....

ಳೆದ ನವೆಂಬರ್‌ನಲ್ಲಿ ಮಂಡ್ಯ ಜಿಲ್ಲೆಯ ಸುವರ್ಣ ಬ ಯುವತಿ ದಲಿತನೊಬ್ಬನನ್ನು ಪ್ರೀತಿಸಿದ್ದಕ್ಕೆ ತನ್ನ ಪ್ಪ ಮತ್ತು ಸಹೋದರರಿಂದ ಕೊಲೆಯಾಗಿದ್ದು ಇನ್ನೂ ಮ್ಮ ನೆನಪಿನಲ್ಲಿ ಹಸಿಯಾಗಿರುವಾಗಲೇ ಮೊನ್ನೆ ್ಯಸೂರಿನಲ್ಲಿ ಸ್ಮೃತಿ ಎಂಬ ಮತ್ತೋರ್ವ ಯುವತಿ ದಲಿತ ಬ್ಬನನ್ನು ಮದುವೆಯಾದದ್ದಕ್ಕೆ ತನ್ನ ತಮ್ಮನ ಕೈಯಿಂದಲೇ ವನ್ನಪ್ಪಿದ್ದಾಳೆ. ಇದು ರಾಜ್ಯದ ಪ್ರಜ್ಞಾವಂತರನ್ನು ಲುಗಾಡಿಸಿದೆ...

ಜಾತಿ, ಅದರೊಂದಿಗೆ ಬೆಸೆದುಕೊಂಡಿರುವ ಶ್ರೇಷ್ಠ-ಕೀಳು ಬ ಭೇದ ಭಾವ, ಸ್ಪೃಶ್ಯ-ಅಸ್ಪೃಶ್ಯ ಎಂಬ ವಿಭಜನೆ ಮತ್ತು ನಮ್ಮ ಸಮಾಜವನ್ನು ಅದೆಷ್ಟು ಅಮಾನವೀಯವಾಗಿ ೆ ಎಂದರೆ ಸುವರ್ಣಳ ತಂದೆ ಮತ್ತು ಅಣ್ಣತಮ್ಮಂದಿರಿಗೆ ತೆಯ ಪ್ರಾಣಕ್ಕಿಂತ ಪುರೋಹಿತಶಾಹಿಗಳು ನಮ್ಮ ಮಾಜದ ಮೇಲೆ ಹೇರಿರುವ ಸಾಮಾಜಿಕ ಮಾನದಂಡಗಳೇ ಮುಖ್ಯವಾಗುತ್ತವೆ. ಹೆತ್ತ ಕರುಳನ್ನೇ ಕೊಂದರೂ ಸೈ ದರಿಂದಾಗಿ ಜೈಲು ಪಾಲಾದರೂ ಸೈ, ಆದರೆ ಜಾತಿಯನ್ನು



ಸ್ಮೃತಿ



ಸುದೀಪ್

ಬಿಟ್ಟುಕೊಡುವುದಿಲ್ಲ ಎನ್ನುವ ಜನರು ಯಾವ ರೀತಿಯಲ್ಲೂ ಮನುಷ್ಯರು ಎನಿಸಿಕೊಳ್ಳಲಾರರು.

ಮೊನ್ನೆ ಅಮಾನುಷವಾಗಿ ಸಾವನ್ನಪ್ಪಿದ ಸ್ಮೃತಿ ಬಗ್ಗೆ ತ್ರಿಕೆಗಳಲ್ಲಿ ಪ್ರಕಟಗೊಂಡ ಸಂಗತಿಗಳನ್ನು ನನ್ನ ಮುಂದೆ ಟ್ಟುಕೊಂಡು ಯೋಚಿಸಿದೆ.

ಸ್ಮೃತಿ ವಿದ್ಯಾವಂತೆ. ಎಂಎ ಮಾಡಿ ಮಹಿಳಾವಾದಿಗಳಾದ ಬಾನು ಮುಷ್ತಾಕ್ ಮತ್ತು ಬಿ.ಟಿ. ಲಲಿತಾ ನಾಯಕ್ ರ ಬರಹಗಳ ತೌಲನಿಕ ಅಧ್ಯಯನ ಮಾಡಿ ಪಿಎಚ್‌ಡಿ ಯಲು ಸಿದ್ಧತೆ ನಡೆಸುತ್ತಿದ್ದವಳು. ಕನ್ನಡದ ಸಹಾಯಕ ಧ್ಯಾಪಕಿಯಾಗಿದ್ದ ಸ್ಮೃತಿ ತನ್ನ ಕಾಲ ಮೇಲೆ ನಿಂತು ಅನ್ನವನ್ನು ಸಂಪಾದಿಸುತ್ತಿದ್ದವಳು. ಕಾಲೇಜಿನಲ್ಲಿದ್ದಾಗ ಚಿತನಾದ ಸುದೀಪ್ ಕುಮಾರ್ ಎಂಬಾತನನ್ನು ತಿಸಿದವಳು. ತಾನು ಲಿಂಗಾಯತ ಜಾತಿಯಲ್ಲಿ ಹುಟ್ಟಿ ದಲಿತನಾದ ಸುದೀಪ್‌ನನ್ನು ಮೆಚ್ಚಿ ಆತನ ಕೈಹಿಡಿಯು ್ಪಿ ಜಾತ್ಯತೀತ ನಿಲುವನ್ನೂ, ಪ್ರಗತಿಪರ ಧೋರಣೆಯನ್ನೂ, ನವೀಯತೆಯನ್ನೂ ಮೈಗೂಡಿಸಿಕೊಂಡಿದ್ದವಳು ಸ್ಮೃತಿ.

ಆಕೆಗೆ ಗೊತ್ತಿತ್ತು, ತಾನು ಪ್ರೀತಿಸುತ್ತಿರುವ ಸುದೀಪ್‌ನನ್ನು ಮನೆಯವರು ಒಪ್ಪುವುದಿಲ್ಲವೆಂದು. ಅದಕ್ಕೆ ಕಾರಣ ಕುರೂಪಿ, ಅಂಗವಿಕಲ ಅಥವಾ ದುಷ್ಟ ಬುದ್ಧಿಯವನು ಆಗಿದ್ದುದೂ ಅಲ್ಲ, ಯಾಕೆಂದರೆ ಸುದೀಪ್ ಎಲ್ಲ ತಿಯಲ್ಲೂ ಆಕೆಗೆ ಸೂಕ್ತವಾದ ಯುವಕ. ಆತ ಸಾಮಾನ್ಯ ಲೀಸ್ ಪೇದೆಯ ಮಗನಾಗಿದ್ದರೂ ಕಷ್ಟ ಪಟ್ಟು ಓದಿ, ಎಚ್‌ಡಿ ಪಡೆದು ತುಮಕೂರು ವಿವಿಯಲ್ಲಿ ದೈಹಿಕ ಣದ ನಿರ್ದೇಶಕನಾಗಿರುವಾತ. ಆದರೆ ಸ್ಮೃತಿಯ ಹೋದರರ ಕಣ್ಣಲ್ಲಿ ಆಕೆಯ ಕೈಹಿಡಿಯಲು ಸುದೀಪ್ ಕ್ತ ವ್ಯಕ್ತಿ ಆಗಿರಲಿಲ್ಲ, ಯಾಕೆಂದರೆ ತಮ್ಮ 'ಮೇಲುವರ್ಗ'ದ ಗಾಯತ ಜಾತಿಗಿಂತ 'ಕೆಳವರ್ಗ'ದ ದಲಿತ ಜಾತಿಯಲ್ಲಿ ಟ್ಟಿದವನು ಸುದೀಪ್.

ತನ್ನ ಮತ್ತು ತಾನು ಪ್ರೀತಿಸಿರುವ ಯುವಕನ ನಡುವಿನ ಸಂಗತಿಯೇ ತನ್ನ ಮನೆಯವರ ವಿರೋಧಕ್ಕೆ ಣವಾಗಿದೆ ಎಂದು ಸ್ಮೃತಿಗೆ ಗೊತ್ತಿತ್ತು, ಆದರೆ ಸ್ಮೃತಿ ತಹ ಹೆಣ್ಣು ಮಗಳೆಂದರೆ ತನ್ನ ತಾಯಿ, ಅಣ್ಣತಮ್ಮಂದಿ ಆ ಕಾರಣಕ್ಕೆ ಆಕೆ ಧಿಕ್ಕರಿಸಲೂ ಇಲ್ಲ, ತಿರಸ್ಕರಿಸಲೂ ಬದಲಾಗಿ ತನ್ನಲ್ಲಿದ್ದ ಮಾನವೀಯತೆಯನ್ನು ಅವರಲ್ಲೂ ಡಿಸಲು ಪ್ರಯತ್ನಿಸಿದಳು. ಪ್ರೀತಿಯ ಪಾಠಗಳನ್ನು ಲ್ಲರಿಗೆ ಹೇಳಿಕೊಡಲು ನೋಡಿದಳು.

ಆಕೆಯ ಇಂತಹ ಪ್ರಯತ್ನಗಳ ನಡುವೆಯೂ ಅವಳ ಯವರು ಆಕೆಯನ್ನು ತಮ್ಮ ಜಾತಿಯವನಿಗೆ ಕೊಟ್ಟು ವೆ ಮಾಡಲು ಮುಂದಾದಾಗ, ಅವರ ಅಂತಹ ಯತ್ನವನ್ನು ವಿಫಲಗೊಳಿಸಲು ಗುಟ್ಟಾಗಿ ಸುದೀಪ್‌ನನ್ನು ಆಕೆ ಕಾನೂನು ಸಮ್ಮತವಾಗಿಯೇ ಮದುವೆಯಾದಳು. ಅದೊಂದು ರೀತಿಯಲ್ಲಿ ಸ್ಮೃತಿ ತನ್ನ ಮನೆಯವರಿಗೆ ಕೊಟ್ಟ **fait accompli.** ಅಂದರೆ ತಾನು ಮದುವೆಯಾಗಿರುವುದರಿಂದ ಅದನ್ನು ಕುರಿತು ಹೆಚ್ಚಿನ ಚರ್ಚೆ ಅಗತ್ಯವಿಲ್ಲ ಎಂಬ ನಿರ್ಧಾರ.

ಸ್ಮೃತಿ ಮತ್ತು ಸುದೀಪ್ ಗುಟ್ಟಾಗಿ ಮದುವೆಯಾದ ನಂತರವೂ ಆಕೆ ಮನೆ ಬಿಟ್ಟು ತನ್ನ ಗಂಡ ಇದ್ದಲ್ಲಿಗೆ ಓಡಿಹೋಗಲಿಲ್ಲ, ಬದಲಾಗಿ ಆಕೆ ತನ್ನವರ ಮನಸ್ಸನ್ನು ಬದಲಾಯಿಸಲು, ಅವರ ಒಪ್ಪಿಗೆ ಪಡೆಯಲು ಪ್ರಯತ್ನಿಸುತ್ತಲೇ ಇದ್ದಳು. ಕೊನೆಗೊಂದು ದಿನ ಬೇರೆ ದಾರಿ ಕಾಣದೆ ತಾನು ಆಗಲೇ ಮದುವೆ ಆಗಿರುವ ವಿಷಯವನ್ನು ತನ್ನ ಮನೆಯವರಿಗೆ ತಿಳಿಸಿದಳು. ಆಗ ವಿಧಿ ಇಲ್ಲದೆ ಆಕೆಯ ಅಣ್ಣ ದಿನೇಶ್ ಮತ್ತು ತಾಯಿ ಪದ್ಮಮ್ಮ ಒಪ್ಪಿಕೊಳ್ಳಬೇಕಾಯಿತು. ಆದರೆ ಆಕೆಯ ತಮ್ಮ ಮಹದೇವನಿಗೆ ಅದನ್ನು ಸಹಿಸಲಾಗಲಿಲ್ಲ.

ಈ ಮಹಾದೇವ ಅಪ್ಪಟ ಉಂಡಾಡಿಗುಂಡ ಎನಿಸುತ್ತದೆ. ಈತನಿಗೆ ಯಾವುದೇ ಉದ್ಯೋಗ ಇದ್ದಂತ ಕಾಣಿಸುವುದಿಲ್ಲ, ಮನೆಯಲ್ಲಿ ಎಲ್ಲರಿಗಿಂತ ಕಿರಿಯವನಾಗಿದ್ದರಿಂದ ಆತನನ್ನು ಎಲ್ಲರೂ ಮುದ್ದು ಮಾಡಿ ಹಾಳುಮಾಡಿರಬಹುದು. ಸ್ಮೃತಿ ಕೂಡ ತಾನು ದುಡಿದಿದ್ದ ಹಣದಲ್ಲಿ ತನ್ನ ತಮ್ಮ ಮಹದೇವನಿಗೆ ಬೈಕ್ ಕೊಡಿಸಿದ್ದಳು. ಅಷ್ಟೇ ಅಲ್ಲ ಸುದೀಪ್ ಕೂಡ ಆತನಿಗೆ ಒಂದು ಮೊಬೈಲ್ ಕೊಡಿಸಿದ್ದ.

ಮಹದೇವನ ಕೈಯಲ್ಲಿ ಕೆಲಸವಿಲ್ಲ, ಜೇಬಲ್ಲಿ ಕಾಸಿಲ್ಲ, ಆದರೆ ತಲೆಯಲ್ಲಿ ಮಾತ್ರ ಜಾತಿ ಎಂಬ ಭೂತ ತುಂಬಿ ತುಳುಕುತ್ತಿತ್ತು. ಇಂತಹ ಮಹದೇವ ತನ್ನ ಅಕ್ಕ ದಲಿತ ಸುದೀಪನನ್ನು ತ್ಯಜಿಸಬೇಕೆಂದು ಒತ್ತಾಯ ಮಾಡುತ್ತಲೇ ಇದ್ದ. ಆ ನಿಟ್ಟಿನಲ್ಲಿ ಮೂರು ದಿನಗಳ ಕಾಲ ಆಕೆಯ ಮನೆಗೆ ಬಂದು ಆಕೆಗೆ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಕೊಡಲಾರಂಭಿಸಿದ. ಆಗ ಸ್ಮೃತಿ ಆತನ ವಿರುದ್ಧ ಪೊಲೀಸರಿಗೆ ದೂರು ಕೊಡಬಹುದಿತ್ತು, ಗಂಡ ಸುದೀಪ್ ಇದ್ದಲ್ಲಿಗೆ ಹೋಗಿ ರಕ್ಷಣೆ ಪಡೆಯಬಹುದಿತ್ತು, ಎಲ್ಲವೂ ತಣ್ಣಗಾದ ನಂತರ ವಾಪಸ್ ತನ್ನ ಬಾಡಿಗೆ ಮನೆಗೆ ಬರಬಹುದಿತ್ತು.

ಸ್ಮೃತಿ ಅದ್ಯಾವುದನ್ನೂ ಮಾಡಲಿಲ್ಲ. ಆ ಕಾರಣಕ್ಕೇ ಕುಡಿದು ಚಿತ್ತಾಗಿದ್ದ ಸಹೋದರ ಮಹಾದೇವನ ಹೊಡೆತಕ್ಕೆ ಗುರಿಯಾದಳು. ಆತ ಅದೆಷ್ಟು ಬಲವಾಗಿ ಆಕೆಗೆ ಹೊಡೆದನೆಂದರೆ ಆಕೆಯ ಮೂಗು ಮತ್ತು ಕಿವಿಯಿಂದ ರಕ್ತಸುರಿಯಲಾರಂಭಿಸಿತು. ತನ್ನ ಜೊತೆಗೆ ಹುಟ್ಟಿದ ಅಕ್ಕನಿಗೆ ತಾನು ಕೊಡುತ್ತಿರುವ ನೋವನ್ನು ನೋಡಿಯಾದರೂ ಮಹದೇವನ ಜಾತಿ ಬುದ್ಧಿಗೆ ಶಾಂತಿ ಸಿಗಲಿಲ್ಲ, ಆತ ಕೊನೆಗೆ ಆಕೆಯ ಕತ್ತನ್ನು ಹಿಸುಕಿ ಆಕೆಯ ಪ್ರಾಣವನ್ನೇ ತೆಗೆದುಕೊಂಡುಬಿಟ್ಟ....

ಈಗ ಮಹದೇವ ಪರಾರಿ ಆಗಿದ್ದಾನೆ. ಆತನನ್ನು ಸದ್ಯದಲ್ಲೇ ಪೊಲೀಸರು ಬಂಧಿಸುತ್ತಾರೆ. ಅವನಿಗೆ ನ್ಯಾಯಾಲಯ ತಕ್ಕ ಶಿಕ್ಷೆಯನ್ನೂ ಕೊಡುತ್ತದೆ....

ಆದರೆ ಜಾತಿ ಎಂಬ ಮಾನವ ನಿರ್ಮಿತ ದುಷ್ಟ ವ್ಯವಸ್ಥೆಯನ್ನು ಮೀರಿ ನಮ್ಮ ಜನ ಮನುಷ್ಯರಾಗುವುದು ಎಂದು? ಜಾತಿ ಎಂಬ ಕಲ್ಪಿತ ಗಡಿಗಳಿಗಿಂತ ನಮ್ಮವರ ಪ್ರಾಣ, ಬದುಕು, ಕನಸುಗಳು ಮುಖ್ಯ ಎಂಬ ಚಿಂತನೆ ನಮ್ಮ ಸಮಾಜದ ಭಾಗವಾಗುವುದು ಎಂದು? ಜಾತಿ ಹೆಸರಲ್ಲಿ ನಡೆಯುವ ಕೊಲೆಗಳಿಗೆ 'ಮರ್ಯಾದಾ ಹತ್ಯೆ' ಎಂಬ ಬಿರುದು ಸಿಗದಂತಾಗುವುದು ಎಂದು?

ಸ್ಮೃತಿ ಮತ್ತು ಸುವರ್ಣ ತರಹದ ಯುವತಿಯರು ತಮಗಿಂತ 'ಕೆಳವರ್ಗ'ದವರನ್ನು ಪ್ರೀತಿಸಿದ್ದಕ್ಕೆ ತಮ್ಮ ಪ್ರಾಣವನ್ನೇ ಕಳೆದುಕೊಳ್ಳದೆ ಎಲ್ಲರಂತೆ ನೆಮ್ಮದಿಯ ಜೀವನ ಸಾಗಿಸುವಂತಹ ಸಮಾಜ ನಮ್ಮಲ್ಲಿ ನಿರ್ಮಾಣವಾಗುವುದು ಎಂದು?

****

ಆತ ಯೋಧನಲ್ಲ, ತನ್ನ ಜನರ ಪರವಾಗಿ ಹೋರಾಟದಲ್ಲಿ ತೊಡಗಿದವನಲ್ಲ, ವೈರಿಗಳನ್ನು ಮುಗಿಸಲು ಬಂದೂಕು ಕೈಗೆತ್ತಿಕೊಂಡವನಲ್ಲ.... ಆತ ಏನನ್ನೂ ಅರಿಯದ 12 ವರ್ಷದ ಬಾಲಕ. ಆದರೂ ಆತನ ಎದೆಗೆ ಐದು ಗುಂಡುಗಳನ್ನು ಹಾರಿಸಿ ಅವನ ಪ್ರಾಣವನ್ನೇ ಸೈನಿಕರು ತೆಗೆದುಕೊಂಡರು. ಅವರ ಈ ಅಮಾನುಷ ಕೃತ್ಯಕ್ಕೆ ಕಾರಣ ಆ ನಿಷ್ಪಾಪಿ ಬಾಲಕನು ಪ್ರಭಾಕರನ್ ಎಂಬ ಶ್ರೀಲಂಕಾದ ತಮಿಳರ ನಾಯಕನ ಪುತ್ರನಾಗಿದ್ದ ಎಂಬುದು.

ನಿನ್ನೆ ದಿನ (ಬುಧವಾರ) ಬ್ರಿಟನ್ನಿನ ಚಾನೆಲ್ 4ನಲ್ಲಿ 'ಶ್ರೀಲಂಕಾಸ್ ಕಿಲ್ಲಿಂಗ್ ಫೀಲ್ಡ್ಸ್- ವಾರ್ ಕ್ರೈಮ್ಸ್ ಅನ್‌ಪನಿಶ್ಡ್' ಎಂಬ ಕಾರ್ಯಕ್ರಮ ಪ್ರಸಾರಗೊಂಡಿತು. ಆ ಕಾರ್ಯಕ್ರಮದಲ್ಲಿ ಹೇಗೆ ಶ್ರೀಲಂಕಾದ ಸೈನಿಕರು ಬಾಲಚಂದ್ರನ್ ಎಂಬ ಈ ಬಾಲಕನನ್ನು ಕೊಂದರು ಎಂಬುದನ್ನು ಫೋಟೋ ಮತ್ತು ವೀಡಿಯೋ ಸಮೇತ ತೋರಿಸಿದರು. ಅದು ಕಟುಕರ ಮನಸ್ಸನ್ನೂ ತಾಗುವಂತಹ ದೃಶ್ಯಗಳು.

ಅದು 2009ರ ಮೇ ತಿಂಗಳು. ತಮಿಳರ ಹಕ್ಕುಗಳಿಗಾಗಿ ಹಲವಾರು ದಶಕಗಳಿಂದ ಹೋರಾಟ ಮಾಡುತ್ತಾ ಬಂದಿದ್ದ ಎಲ್‌ಟಿಟಿಇ ವಿರುದ್ಧ ಶ್ರೀಲಂಕಾ ಸೇನೆ ನಡೆಸಿದ್ದ ಯುದ್ಧದ ಅಂತಿಮ ದಿನಗಳು. ಶ್ರೀಲಂಕಾದ ಸೇನೆ ಆ ಸಮರದ ಒಂದೊಂದೇ ಹಂತವನ್ನು ಗೆಲ್ಲುತ್ತಿದ್ದರಿಂದ ಎಲ್‌ಟಿಟಿಇ ಸೋಲಿನ ಅಂಚಿನಲ್ಲಿತ್ತು, ಆಗ ಶ್ರೀಲಂಕಾದ ಸೈನಿಕರ ಕೈಗೆ ಬಾಲಚಂದ್ರನ್ ಮತ್ತವನ ಐವರು ಅಂಗರಕ್ಷಕರು ನಂತಿಕಾದಲ್ ಎಂಬಲ್ಲಿ ಸಿಕ್ಕಿಬಿದ್ದರು. ಅಂತರರಾಷ್ಟ್ರೀಯ ನಿಯಮಗಳ ಪ್ರಕಾರ ಯುದ್ಧದಲ್ಲಿ ಸಿಕ್ಕಿಬಿದ್ದ ವೈರಿ ತಂಡದವರನ್ನು ಕೊಲ್ಲುವಂತಿಲ್ಲ, ಬದಲಾಗಿ ಅವರನ್ನು ಬಂಧಿಸಬೇಕು. ಆದರೆ ಅಷ್ಟುಹೊತ್ತಿಗಾಗಲೇ ಕಂಡಕಂಡ ಸಾವಿರಾರು ತಮಿಳರನ್ನು ನಿರ್ದಾಕ್ಷಿಣ್ಯವಾಗಿ ಸಾಯಿಸುತ್ತಾ ಬಂದಿದ್ದ ಶ್ರೀಲಂಕಾದ ಸೈನಿಕರ ರಕ್ತದಾಹ ಇನ್ನೂ ಇಂಗಿರಲಿಲ್ಲ, ಆದ್ದರಿಂದ ಅವರೇನು ಮಾಡಿದರು ಗೊತ್ತಾ?

ಮೊದಲು ಬಾಲಕ ಬಾಲಚಂದ್ರನ್ ಐವರು ಅಂಗರಕ್ಷಕರ ಕಣ್ಣು ಮತ್ತು ಕೈಗಳನ್ನು ಕಟ್ಟಿಹಾಕಿದರು. ಅನಂತರ ಆ ಚಿಕ್ಕ ಹುಡುಗನ ಕಣ್ಣೆದುರಿಗೇ ಗುಂಡು ಹಾರಿಸಿ ಅವರನ್ನೆಲ್ಲ ಕೊಂದು ಹಾಕಿದರು. ಕೊನೆಗೆ ಆ ಬಾಲಕ ಮೈಮೇಲಿನ ಶರ್ಟನ್ನು ತೆಗೆಸಿ ಆತನ ಎದೆಗೆ ಒಂದು ಗುಂಡು ಹಾರಿಸಿದರು. ಅವನ ಪ್ರಾಣ ಪಕ್ಷಿ ಹಾರಿಹೋಗಿ ಅವನ ದೇಹ ಹಿಂದಕ್ಕೆ ಚಿಮ್ಮಿ ಬಿದ್ದ ನಂತರವೂ ಸುಮ್ಮನಾಗದ ಸೈನಿಕರು ಇನ್ನೂ ನಾಲ್ಕು ಗುಂಡುಗಳನ್ನು ಆತನ ಎದೆಗೆ ಹಾರಿಸಿದರು. ಅಷ್ಟೂ ಸಾಲದೆಂಬಂತೆ ತಮ್ಮ ಈ ಘನಂದಾರಿ ಕೃತ್ಯವನ್ನು ತಮ್ಮ ಕ್ಯಾಮೆರಾಗಳಲ್ಲಿ ಸೆರೆಹಿಡಿದರು...



ಬಾಲಚಂದ್ರ ಪ್ರಭಾಕರನ್

ಆ ದೃಶ್ಯಗಳು ಅದು ಹೇಗೋ ಬ್ರಿಟನ್ನಿನ ಸಾಕ್ಷ್ಯಚಿತ್ರಗಳ ನಿರ್ದೇಶಕ ಕಲ್ಲಂ ಮಕ್ರೇ ಎಂಬುವವರ ಕೈ ಸೇರಿತು. ಅವರು ಆ ವೀಡಿಯೋ ಮತ್ತು ಫೋಟೋಗಳನ್ನು ಫೊರೆನ್ಸಿಕ್ ತಜ್ಞ ಪ್ರೊಫೆಸರ್ ಡೆರ್ರಿಕ್ ಪೌಂಡರ್ ಎಂಬುವವರಿಗೆ ತೋರಿಸಿದರು. ಅದನ್ನು ಸೂಕ್ಷ್ಮವಾಗಿ ಪರೀಕ್ಷಿಸಿದ ಪೌಂಡರ್ ಅವರು ಹೇಳುವ ಪ್ರಕಾರ "ಗುಂಡುಗಳು ಈ ಬಾಲಕನ ದೇಹವನ್ನು ಪ್ರವೇಶಿಸಿರುವ ರೀತಿಯನ್ನು ನೋಡಿದರೆ ಆತನ ಪ್ರಾಣವನ್ನು ತೆಗೆದುಕೊಂಡ ಬಂದೂಕು ಆತನ ಎದೆಯಿಂದ ಕೇವಲ ಎರಡು ಅಥವಾ ಮೂರು ಅಡಿ ದೂರದಲ್ಲಿತ್ತು ಮತ್ತು ಆತ ಕೈಚಾಚಿದ್ದರೆ ಆ ಬಂದೂಕು ಅವನ ಕೈಗೆಟುಕುವಂತಿತ್ತು, ಹಾಗೆಯೇ ಮೊದಲ ಗುಂಡು ಅವನ ದೇಹವನ್ನು ಪ್ರವೇಶಿಸಿದ ನಂತರ ಯಾರೋ ಆತನ ಮೃತದೇಹದ ಮೇಲೆ ನಿಂತು ಇನ್ನೂ ನಾಲ್ಕು ಗುಂಡುಗಳನ್ನು ಹಾರಿಸಿರುವುದು ಸ್ಪಷ್ಟವಾಗುತ್ತದೆ. ಆದ್ದರಿಂದ ಬಾಲಚಂದ್ರನ್ ಸಾವು ನಿರ್ದಿಷ್ಟವಾಗಿ ಒಂದು ಕಗ್ಗೊಲೆ ಎಂಬುದು ಗೊತ್ತಾಗುತ್ತದೆ."

ಎಲ್‌ಟಿಟಿಇ ವಿರುದ್ಧದ ಶ್ರೀಲಂಕಾ ಸೈನ್ಯದ ಯುದ್ಧದಲ್ಲಿ ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರವೇ ಸುಮಾರು 40 ಸಾವಿರ ಅಮಾಯಕ ನಾಗರಿಕರನ್ನು ಕೊಲ್ಲಲಾಯಿತು. ಲೆಕ್ಕವಿಲ್ಲದಷ್ಟು ಮಹಿಳೆಯರ ಮೇಲೆ ಸೈನಿಕರು ಅತ್ಯಾಚಾರ ನಡೆಸಿದ ನಂತರ ಅವರನ್ನು ಕೊಂದುಹಾಕಿದರು. ಸಾವಿರಾರು ಪುರುಷರನ್ನು ನಗ್ನಗೊಳಿಸಿ ತಮಾಷೆಗೆಂಬಂತೆ ಸುಟ್ಟುಹಾಕಿದರು. ಇಂತಹ ಬಹಳಷ್ಟು ಕೊಲೆಗಳನ್ನು ಸೈನಿಕರೇ ತಮ್ಮ ಕ್ಯಾಮೆರಾಗಳಲ್ಲಿ, ಮೊಬೈಲ್ ಫೋನ್‌ಗಳಲ್ಲಿ ಸೆರೆಹಿಡಿದಿದ್ದರಲ್ಲದೆ ಅವು ಈಗ ಒಂದೊಂದಾಗಿ ಬಹಿರಂಗಗೊಳ್ಳುತ್ತಿವೆ. ಅಂತಹವುಗಳಲ್ಲಿ ಬಾಲಕ ಬಾಲಚಂದ್ರನ್‌ನ ಕಗ್ಗೊಲೆಯ ದೃಶ್ಯವು ಇತ್ತೀಚೆಗೆ ಹೊರಬಂದಿದೆಯಷ್ಟೇ.

ಶ್ರೀಲಂಕಾದ ಅಧ್ಯಕ್ಷ ಮಹಿಂದ ರಾಜಪಕ್ಸೆ ಮತ್ತು ಆತನ ಸಹೋದರ ಹಾಗು ರಕ್ಷಣಾ ಮಂತ್ರಿಯಾದ ಗೋಟಬಯ ರಾಜಪಕ್ಸೆ ಅವರ ನೇತೃತ್ವದಲ್ಲೇ ಶ್ರೀಲಂಕಾದ ಸೈನಿಕರು ಇಂತಹ ಕಗ್ಗೊಲೆಗಳನ್ನು ಮಾಡಿದ್ದರೂ ಇವತ್ತಿಗೂ ಅವರಿಬ್ಬರ ವಿರುದ್ಧ ಯಾವ ಕ್ರಮವನ್ನೂ ಯಾರಿಂದಲೂ ಜಾರಿಗೊಳಿಸಲಾಗಿಲ್ಲ, ಅಷ್ಟೇ ಅಲ್ಲ ಆಗಿನ ಇಬ್ಬರು ಹಿರಿಯ ಸೈನ್ಯಾಧಿಕಾರಿಗಳಿಗೆ ಈಗ ರಾಜತಾಂತ್ರಿಕರ ಹುದ್ದೆಗಳನ್ನು ನೀಡುವ ಮೂಲಕ ಅವರಿಗೆ ಎಲ್ಲ ರೀತಿಯ ಕಾನೂನುಗಳಿಂದ ರಕ್ಷಣೆ ನೀಡಲಾಗಿದೆ.


ಅಮಾಯಕರನ್ನು ಕೊಂದದ್ದಕ್ಕೆ ಶ್ರೀಲಂಕಾ ಸರ್ಕಾರದ ವಿರುದ್ಧ ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರಮ ತೆಗೆದುಕೊಳ್ಳುವಂತೆ ಅಮೆರಿಕದ ಸರ್ಕಾರ ವಿಶ್ವಸಂಸ್ಥೆಯ ಮಾನವಹಕ್ಕುಗಳ ಸಮಿತಿಯ ಮುಂದೆ ಒಂದು ಅರ್ಜಿಯನ್ನು ಸಲ್ಲಿಸಿದೆ. ಈ ಅರ್ಜಿಗೆ ಹಲವಾರು ದೇಶಗಳು ತಮ್ಮ ಬೆಂಬಲವನ್ನು ಸೂಚಿಸಿದ್ದು ಇನ್ನು ಕೆಲವೇ ದಿನಗಳಲ್ಲಿ ಮಾನವಹಕ್ಕು ಸಮಿತಿ ಅದನ್ನು ಕೈಗೆತ್ತಿಕೊಳ್ಳಲಿದೆ. ಈ ಅರ್ಜಿಗೆ ಭಾರತ ಕೂಡ ತನ್ನ ಬೆಂಬಲವನ್ನು ಸೂಚಿಸಬೇಕೆಂದು ತಮಿಳುನಾಡಿನ ಪಕ್ಷಗಳು ಮೊನ್ನೆ ಸಂಸತ್ತಿನಲ್ಲಿ ಒತ್ತಾಯ ಮಾಡಿದವು.

ಆದರೆ ಭಾರತ ಸರ್ಕಾರ ಮಾತ್ರ ಇನ್ನೂ ಮೀನಾಮೇಷ ಎಣಿಸುತ್ತಿದೆ. ಇಮತ್ತು ಶ್ರೀಲಂಕಾ ತನಗೆ ಪಾಕಿಸ್ತಾನ, ಚೀನಾ ಮತ್ತು ರಷ್ಯಾದ ಬೆಂಬಲವಿದೆ ಎಂದು ಹೂಂಕರಿಸುತ್ತಿರುವುದು ಭಾರತದ ಕೇಂದ್ರ ಸರ್ಕಾರದ ತಲೆ ಕೆಡಿಸಿದೆ. ಆದ್ದರಿಂದ ಆ ದ್ವೀಪ ರಾಷ್ಟ್ರದ ಮೇಲೆ ತನ್ನ ಪ್ರಭಾವವನ್ನು ಕಡಿಮೆ ಮಾಡಿಕೊಳ್ಳುವ ಇಚ್ಛೆ ಭಾರತ ಸರ್ಕಾರಕ್ಕೆ ಇಲ್ಲ.

ಆದರೆ ರಾಜಕೀಯ ಲಾಭ-ನಷ್ಟದ ಹೊರತಾಗಿ ಮಾನವ ಹಕ್ಕುಗಳ ಬಗ್ಗೆ ಯೋಚಿಸುವಷ್ಟು ಸೂಕ್ಷ್ಮತೆ ನಮ್ಮ ನಾಯಕರಿಗೆ ಬೇಕಿದೆ. ಅಮಾಯಕ ಬಾಲಕ ಬಾಲಚಂದ್ರನ್‌ನನ್ನು ಅಮಾನುಷವಾಗಿ ಕೊಂದ ಚಿತ್ರವಾದರೂ ಅವರ ಮನಸ್ಸನ್ನು ಕರಗಿಸಲಿ....

ಉತ್ತರ ಕನ್ನಡ: ಅಧಿಕ ಪ್ರಸಂಗಿ ಅಸ್ನೋಟಿಕರ್ ಮಾಡಿದ ಅನಾಹುತ!

ಕರ್ನಾಟಕದಲ್ಲೀಗ ಅಕ್ಷರಶಃ ಅರಾಜಕತೆ! ತುಟ್ಟರ-ಕಟ್ಟ ತರುಕರದೇ ದರ್ಬಾರು!! ಭ್ರಷ್ಟರು-ಭಂಡರು-ಬಫೂನ್‌ಗಳು-ಬೇಕಲ್ಲೇ ಬೆತ್ತಲಾಗುವ ಬೇವರ್ಸಿಗಳೇ ರಾಜ್ಯಭಾರ ಮಾಡುತ್ತಿದ್ದಾರೆ. ಒಂದು ಕಡೆ ಹಸಿ-ಹಸೀ ಚಪಲಿಗ ಯಡ್ಡಿ, ಶೋಭಕ್ಕ, ಸವದಿ, ನಿರಾಣಿ, ಪಾಟೀಲ, ಪಾಲೆಮಾರ್, ರೇಣುಕಾ, ಹಾಲಪ್ಪಾದಿಗಳಿದ್ದಾರೆ. ಮತ್ತೊಂದೆಡೆ ಬಕಾಸುರ ವಂಶದ ರೆಡ್ಡಿ, ರಾಮಚಂದ್ರಗೌಡ, ಯೋಗೇಶಿ, ಕಟ್ಟಾನೇ ಮುಂತಾದ ಕೆಟ್ಟ ಖದೀಮರಿದ್ದಾರೆ. ಈ ಪಾಪಿಗಳಲ್ಲಿ ಕನಿಷ್ಠ ಪಾಪಪ್ರಜ್ಞೆಯಾಗಲಿ ನಾಚಿಕೆಯಾಗಲಿ ಇಲ್ಲ. ತಮ್ಮ 'ತಾರಾತಿಗಡಿ'ಯನ್ನೇ ರಾಷ್ಟ್ರೀಯತೆ-ಸಂಸ್ಕೃತಿ ಎಂಬಂತೆ ಈ ಚಡ್ಡಿಚೋರರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಬಿಜೆಪಿಯ ಈ ಉಂಡಾಡಿ ಫ್ರುಂಡ ಮಂತ್ರಿ-ಶಾಸಕರ ಸಾಲಲ್ಲಿ ಕಾರವಾರದ ಶಾಸಕ ಕಂ ಆಪರೇಷನ್ ಕಮಲದ ಸಿಜರೀನ್ ಸಚಿವ ಆನಂದ್ ಅಸ್ನೋಟಿಕರ್ ಅದೆಂದೋ ಸೇರಿಹೋಗಿದ್ದಾನೆ!



ಅಸ್ನೋಟಿಕರ್‌ನ ಬುರ್ನಾಸ್ ಭಾನ್ಗಡಿಗಳು ರಾಜ್ಯಮಟ್ಟದಲ್ಲಿ ಅಷ್ಟು ಸುದ್ದಿ ಮಾಡಿಲ್ಲ; ಜಿಲ್ಲೆಯ ದಶದಿಕ್ಕಿಗೆ ಮಾತ್ರ ಆತನ ಖಯಾಲಿಗಳ ಅಸಹ್ಯ ಸದ್ದು ದೊಡ್ಡದಾಗೇ ಮೊಳಗುತ್ತಿದೆ! ಮೊದಲ ಸಲ ಶಾಸಕನಾಗುವ ಮುಹೂರ್ತದಲ್ಲೇ ಈತ ಅರೆಸಾಬಿ-ಅರೆಹಿಂದೂ ಹುಡುಗಿಯೊಬ್ಬಳ ದಿಕ್ಕುತಪ್ಪಿಸಿ ದಕ್ಕಿಸಿಕೊಂಡಿದ್ದ ರಂಗು-ರಂಗಿನ ಪುರಾಣ ಕಾರವಾರ-ಅಂಕೋಲೆಯಲ್ಲಿ ಜನಜನಿತ ಆಗಿತ್ತು. ಬಜಾಜ್ ವಿಮಾ ಕಂಪನಿಯ ಏಜೆಂಟ್ ಆಗಿದ್ದ ಆಕೆಗೆ ದೊಡ್ಡ ಮೊತ್ತದ ಪಾಲಿಸಿ ಕೊಡುವ ಆಸೆ ಹುಟ್ಟಿಸಿ ಅಸ್ನೋಟಿಕರ್ ಪಳಗಿಸಿಕೊಂಡಿದ್ದನಂತೆ. ಮಂತ್ರಿಯಾದ ಮೇಲೆ ಅಧಿಕಾರ ಬಲದಿಂದ ಆತನ ಲೀಲಾವಿನೋದಗಳ ಹಾವಳಿಯೇ ಎದ್ದಿತ್ತು!

ಕಾರವಾರಕ್ಕೆ ಎಸಿಯಾಗಿ ಬಂದಿದ್ದ ಐಎಎಸ್ ಹುಡುಗಿಯೊಬ್ಬಳೊಂದಿಗೆ ಬಹಿರಂಗವಾಗೇ ಆತ ಅಗತ್ಯಕ್ಕಿಂತ ಜಾಸ್ತಿಯೇ ಸ್ನೇಹ-ಸಲುಗೆಯಿಂದ ವರ್ತಿಸುತ್ತಿದ್ದುದು ಗುಸು-ಗುಸು ಎಬ್ಬಿಸಿತ್ತು. ಈ ಸಂಬಂಧ ಅದ್ಯೆಗಿತ್ತೆಂದರೆ, ಮಂತ್ರಿಜೀ ಎಸಿ ಸಾಹೇಬ್ತಿಯನ್ನು ಮದುವೆ ಆಗ್ತಾರೆನ್ನುವಷ್ಟು ಅತಿರೇಕಕ್ಕೆ ಹೋಗಿತ್ತು! ಅಂಕೋಲೆಯ 'ಹನಿಬೀಚ್'ನಲ್ಲಿ ಸಂಜೆಯಾಗುತ್ತಲೇ ಸಚಿವರು ಇನ್ನೊಬ್ಬ ಸ್ಥಳೀಯ ವಿಚ್ಛೇದಿತೆ ಜೊತೆ ವಿಹರಿಸುವುದು ಟಾಕ್ ಆಫ್ ದಿ ಡಿಸ್ಟ್ರಿಕ್ಟ್ ಆಗಿತ್ತು. ಗಂಡನ ಈ ಹಗ್ಗ ಕಡಿಯುವ ಚಾಳಿಯಿಂದ ರೋಸತ್ತ ಮಂತ್ರಿಗಳ ಅಧಿಕೃತ ಮಡದಿ ತವರಿಗೆ ಓಡಿಹೋಗಿದ್ದು, ತಾಯಿ ಬಾಂಬೆಗೆ ಹೋಗಿದ್ದು, ಆನಂತರ 'ರಾಜಿ' ಸಂಧಾನವಾಗಿದ್ದೆಲ್ಲ ಇವತ್ತಿಗೂ ಕಾರವಾರ-ಅಂಕೋಲೆಯಲ್ಲಿ ಎಲ್ಲರ ಬಾಯಲ್ಲೂ ಇದೆ.

ಮಂತ್ರಿ ಅಸ್ನೋಟಿಕರ್ ಅಂಥಾ ದರ್ಬಾರು, ಜನ ದ್ರೋಹ, ದುರಹಂಕಾರ, ದೋ ನಂಬರ್ ದಂಧೆಗಳು, ದಾದಾಗಿರಿ, ಕಾಗೇರಿ ಜೊತೆ ಕೋಳಿಕಾಳಗ, ಅಶ್ಲೀಲ ರಾಜಕಾರಣ, ಮಸಾಜ್‌ಗೆ ವಿದೇಶಕ್ಕೆ ಹೋಗೋದಿದೆಯಲ್ಲ, ಅದೇ ಮತ್ತೊಂದು ರೋಚಕ ಪುರಾಣ! ಇಂಥ ಅಸಡ್ಡಳ ಅಸ್ನೋಟಿಕರ್ ಈಗ ಸರ್ಕಾರಿ ಬಸ್ ಅಕ್ರಮವಾಗಿ ಚಲಾಯಿಸಿದ್ದಲ್ಲದೆ, ಆಕ್ಸಿಡೆಂಟೂ ಮಾಡಿ ಕುಖ್ಯಾತನಾಗಿ ಹೋಗಿದ್ದಾನೆ. ಕಾರವಾರಿಗರ ನಸೀಬು ಗಟ್ಟಿಯಿತ್ತು, ಸ್ವಲ್ಪ ಹೆಚ್ಚುಕಮ್ಮಿಯಾಗಿದ್ದರೆ ಕಾರವಾರದ ಸುಭಾಸ್ ಸರ್ಕಲ್‌ನಲ್ಲಿ ಫ್ರುಂಡ ಮಂತ್ರಿಯ ಹುಚ್ಚು ಹುಕ್ಕಿಗೆ ದೊಡ್ಡ ಮಾರಣಹೋಮವೇ ಆಗುತ್ತಿತ್ತು!

ಅದೊಂದು ಕೆಎಸ್‌ಆರ್‌ಟಿಸಿ ಕಾರ್ಯಕ್ರಮ; ಕಾರವಾರದಿಂದ ಹಾಸನ-ಹುಬ್ಬಳ್ಳಿ-ಮಣಿಪಾಲಕ್ಕೆ ಹೋಗುವ ಹೊಸ ಬಸ್ ಸೇವೆಯ ಉದ್ಘಾಟನಾ ಸಮಾರಂಭವದು. ಕಾರವಾರದಲ್ಲಿ ಮುನ್ಸಿಪಾಲಿಟಿ ಗಟಾರ-ಕಕ್ಕಸು ಉದ್ಘಾಟನೆಗೂ ತನ್ನನ್ನೇ ಕರೆಯಬೇಕೆಂದು ಚಂಡಿಹಿಡಿಯುವ ಮಂತ್ರಿ ಅಸ್ನೋಟಿಕರ್‌ನನ್ನು ಈ ಬಸ್ ಸೇವಾ ಕಾರ್ಯಕ್ರಮಕ್ಕೂ ಸಹಜವಾಗೇ ವಾಯವ್ಯ ರಸ್ತೆ ಸಾರಿಗೆ ನಿಗಮದ ಅಧಿಕಾರಿಗಳು ಕರೆದಿದ್ದರು. ಅಸ್ನೋಟಿಕರ್ ಜೊತೆ ಆತನ ಪಕ್ಕಾ ಬೆಂಬಲಿಗ-ಗಂಡಾಗುಂಡಿ ಗುರು ಗಣಪತಿ ಉಳ್ವೇಕರ್ ಎಂಬ ನಗರಸಭಾಧ್ಯಕ್ಷ, ತಾಪಂ ಅಧ್ಯಕ್ಷೆ, ಒಂದಿಷ್ಟು ಹಿಂಬಾಲಕ ಹರಾಮಿಗಳು ರಿಬ್ಬನ್ ಕಟ್ ಮಾಡಿ, ಬಂದಿದ್ದರು. ಅಸ್ನೋಟಿಕರ್ ಹೊಸ ಬಸ್‌ಗಳಿಗೆ ಪೂಜೆ ಮಾಡಿ, ಹಸಿರು ನಿಶಾನೆ ತೋರಿಸಿದರು.

ಆದರೆ ಈ ತ್ರಿವಿಧ ಸಂಪ್ರದಾಯದಿಂದ ಬಸ್ ಚಾಲನೆ ಉದ್ಘಾಟಿಸಿದರೂ ಪಿರ್ಕೀಸ್ ಮಂತ್ರಿ ಅಸ್ನೋಟಿಕರ್‌ಗೆ ಅದ್ಯಾಕೋ ಸಮಾಧಾನ ಆಗಲಿಲ್ಲ; ತಾನೇ ಸ್ಟೇಯರಿಂಗ್ ಹಿಡಿದು ಬಸ್ ಬಿಟ್ಟು ಚಾಲನೆ ಕೊಡುವ ತಲುಬು ಬಂದುಬಿಡಬೇಕಾ ಈ ಅಡ್ನಾಡಿ ಮಂತ್ರಿ ಮಹೋದಯನಿಗೆ. ಸೀದಾ ಡ್ರೈವರ್ ಕ್ಯಾಬಿನ್‌ಗೆ ನುಗ್ಗಿದ ಮಂತ್ರಿಜೀ ಅಧಿಕೃತ ಚಾಲಕನನ್ನು ಸೀಟಿನಿಂದ ಎಬ್ಬಿಸಿ ತಾನೇ ಕುಂತುಬಿಟ್ಟ. ಹೆವಿ ವೆಹಿಕಲ್ (ಭಾರೀ ವಾಹನ) ಎಂದೂ ಓಡಿಸದ, ಆ ಲೈಸೆನ್ಸ್ ಕೂಡ ಇಲ್ಲದ ಅಸ್ನೋಟಿಕರ್ ಜನದಟ್ಟಣೆಯ ಬಸ್ ನಿಲ್ದಾಣದಿಂದ ಬಸ್ ಹೊರಡಿಸಿಯೇ ಬಿಟ್ಟ! ಡ್ರೈವರ್ ಮಂತ್ರಿಗೆ ನಿಧಾನ ಓಡಿಸುವಂತೆ, ಕ್ಲಚ್, ಗಿಯರ್, ಎಕ್ಸಲರೇಟರ್ ಆಪರೇಟ್ ಮಾಡುವ ವಿಧಾನದ ಬಗ್ಗೆ ಹೇಳುತ್ತಲೇ ಇದ್ದರು.

ನೋಡು-ನೋಡುತ್ತಿದ್ದಂತೆಯೇ ಅಸ್ನೋಟಿಕರ್ ಯರ್‍ರಾಬಿರ್‍ರಿಯಾಗಿ ಬಸ್ ಅನ್ನು ಸುಮಾರು ನೂರು ಮೀಟರ್ ಓಡಿಸಿಕೊಂಡು ಬಂದ. ಆತನ ಅನಾಹುತಕಾರಿ ಡ್ರೈವಿಂಗ್ ಸ್ಟೈಲಿಗೆ ಜೊತೆಯಲ್ಲಿದ್ದ ಮಾಧ್ಯಮದವರು, ಜನಪ್ರತಿನಿಧಿಗಳು, ಅಧಿಕಾರಿಗಳೆಲ್ಲ ಹೆದರಿ ಕಂಗಾಲಾಗಿ ಹೋದರು. ಅಸ್ನೋಟಿಕರ್‌ಗೆ ಬಸ್ ಮೇಲೆ ನಿಯಂತ್ರಣವೇ ಇರಲಿಲ್ಲ. ಆತ ಏನಾದರೂ ಅವಘಢ ಮಾಡುತ್ತಾನೆಂದು ರಸ್ತೆಯಲ್ಲಿದ್ದ ಜನರೂ ಬೆಚ್ಚಿಬಿದ್ದು ನೋಡುತ್ತಿದ್ದರು. ಆಚೀಚೆಯ ಜನ ಈ ಸರ್ಕಾರಿ ಬಸ್ ಡ್ರೈವರ್ ಕುಡಿದ ಅಮಲಲ್ಲಿ ಬೇಕಾಬಿಟ್ಟಿಯಾಗಿ ಬಸ್ ಓಡಿಸುತ್ತಿದ್ದಾನೆಂದು ಶಾಪ ಹಾಕಹತ್ತಿದ್ದರು. ಅವರಿಗೆ ಸಾಕ್ಷಾತ್ ಕಾರವಾರದ ಮಂತ್ರಿ ಮಾಂಡಲೀಕನೇ ಆ ಸರ್ಕಾರಿ ಬಸ್ ಚಲಾಯಿಸುತ್ತಿದ್ದನೆಂಬುದು ಗೊತ್ತಿರಲಿಲ್ಲ ಪಾಪ.

ಅಂತೂ ಸುಭಾಸ್ ಸರ್ಕಲ್ ಬರುವ ಹೊತ್ತಿಗೆ ಆನಂತ್ ಅಸ್ನೋಟಿಕರ್‌ನ ಬಸ್‌ನ ಮೂತಿ ಗೂಡ್ಸ್ ರಿಕ್ಷಾವೊಂದಕ್ಕೆ ತಿಕ್ಕಿಕೊಂಡೇ ಹೋಯ್ತು. ಬಡಪಾಯಿ ರಿಕ್ಷಾಕ್ಕೆ ಒಂದಿಷ್ಟು ಡ್ಯಾಮೇಜು ಆಯ್ತು. ಜನ ಕೆಎಸ್‌ಆರ್‌ಟಿಸಿ ಡ್ರೈವರ್‌ಗೆ ನಾಲ್ಕು ಒದೆ ಹಾಕಲು ಜಮಾಯಿಸಿದರು. ಅಷ್ಟರಲ್ಲಿ ಬಸ್‌ನ ಅಧಿಕೃತ ಡ್ರೈವರ್ ಬಸ್ ಅನ್ನು ನಿಯಂತ್ರಣಕ್ಕೆ ತಂದು ನಿಲ್ಲಿಸಲು ಮಂತ್ರಿಗೆ ನೆರವಾದರು. ಬಸ್ ಅಲ್ಲೇ 'ಗಕ್' ಅಂತ ನಿಂತಿತು. ಬಸ್ ನಿಲ್ದಾಣ-ಸುಭಾಸ್ ಸರ್ಕಲ್‌ವರೆಗಿನ ವ್ಯಾಪ್ತಿಯಲ್ಲಿದ್ದ ಜನರ-ವಾಹನಗಳ ಅದೃಷ್ಟ ಚೆನ್ನಾಗಿತ್ತು. ದೊಡ್ಡ ಅನಾಹುತವೇನೂ ಆಗಲಿಲ್ಲ. ಅಲ್ಲೇ ಬಸ್‌ನಿಂದ ಜಿಗಿದ ಅಸ್ನೋಟಿಕರ್ ತನ್ನ ಗೂಟದ ಕಾರು ತರಿಸಿ ಜಾಗ ಖಾಲಿ ಮಾಡಿದ.

ಹೋಗುವಾಗ ಅಧಿಕಾರಿಗಳನ್ನೆಲ್ಲ ಕರೆದು "ಕೆ... ಆಗದಂತೆ ನೋಡಿಕೊಳ್ಳಿ ರಿಕ್ಷಾಕ್ಕಾದ ಹಾನಿಯ ವೆಚ್ಚ ನಾ... ಕೊಡುತ್ತೇನೆ. 'ಪ್ರಕರಣ' ಸುಖಾಂತ್ಯಗೊಳಿಸಿ" ಎಂದು ಆ... ನೀಡಿ ಹೋದರು ಮಂತ್ರಿ ಮಾನ್ಯರು! ಆದರೆ ಅದಾಗ... ಮಂತ್ರಿಯ ಮಸ್ತಿಯಿಂದ ಹೊಟ್ಟೆಪಾಡಿಗೆ ಲಗೇಜ್ ರಿ... ಓಡಿಸುವ ಬಡವನಿಗೆ ಹಾನಿಯಾಗಿತ್ತು, ಅಷ್ಟೇ ಅ... ಸರ್ಕಾರದ ಬಸ್ಸಿಗೂ ಜಖಂ ಆಗಿತ್ತು. ಕೆಎಸ್‌ಆರ್‌ಟಿ... ಸುಮಾರು 25,000 ಲಾಸ್ ಮಂತ್ರಿಯ ಮೋಜಿನ ಬ... ಚಾಲನೆಯಿಂದಾಗಿತ್ತು. ಈ ಮಂತ್ರಿಯ 'ಜಾತಕ' ಬ... ಸ್ಥಳೀಯ ರಿಕ್ಷಾದವನೇನೋ ಕೇಸು-ಕಂಪ್ಲೇಂಟು ಎಂದ್ಕೆಳ... ಸಿಕ್ಕಷ್ಟು ಮಂತ್ರಿ 'ಪರಿಹಾರ' ಪಡೆದು ತೆಪ್ಪಗಾದ.


ಆದರೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು 'ಪ್ರಕರ... ಗಂಭೀರವಾಗೇ ಪರಿಗಣಿಸಿದ್ದರು. ಮಂತ್ರಿಗೆ ಬಸ್ ಓಡಿಸ... ಅವಕಾಶ ನೀಡಿದ ತಪ್ಪಿಗೆ ಕಾರವಾರ ಎನ್‌ಡಬ... ಕೆಎಸ್‌ಆರ್‌ಟಿಸಿ ಡಿಪ್ಪೋ ಮ್ಯಾನೇಜರ್ ಬಾನಾವಳಿ... ಎಂಬ ಪಾಪದ ಪ್ರಾಣಿಗೆ ವಿವರಣೆ ಕೇಳಿ ಕೆಎಸ್‌ಆರ್‌ಟಿ... ವ್ಯವಸ್ಥಾಪಕ ನಿರ್ದೇಶಕ ಹೇಮರಾಜ್ ನೋಟಿಸ್ ಜಾ... ಮಾಡಿಬಿಟ್ಟರು. ಇದರಿಂದ ಡಿಪ್ಪೋ ಮ್ಯಾನೇಜರ್‌ಗಿ... ಹೆಚ್ಚು ಹೌಹಾರಿದ್ದು ಅಧಿಕಪ್ರಸಂಗಿ ಮಂತ್ರಿ ಅಸ್ನೋಟಿಕ... ತಕ್ಷಣ ಎಚ್ಚೆತ್ತ ಅಸ್ನೋಟಿಕರ್ ತನ್ನ ಅಧಿಕಾರದ 'ದಂ... ಬಳಸಿ ಡಿಪ್ಪೋ ಮ್ಯಾನೇಜರ್‌ಗೆ ಕೊಡಲಾಗಿದ್ದ ನೋಟೀಸ... ಕಿಮ್ಮತ್ತಿಲ್ಲದಂತೆ ಮಾಡಿದರು. ರಾತ್ರಿ ಬೆಳಗಾಗುವುದರ... ಕೇಸ್ ಖುಲಾಸ್ ಆಯ್ತು!

ಕೆಎಸ್‌ಆರ್‌ಟಿಸಿ ಎಂಡಿ ಹೇಮರಾಜ್ ಮತ್ತು ಶಿರಸಿ... ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾ... ಗದ್ದಿನಕೇರಿ ಎಂಬ ಹೇತ್ಲಾಂಡಿಗಳೇನೋ ಮಂತ್ರಿಯ 'ಮಾ... ಮುಚ್ಚಲು ತಿಪ್ಪೆ ಸಾರಿಸಿದ್ದಾರೆ. ಆದರೆ ಅವಾಂತರಕಾ... ಅಸ್ನೋಟಿಕರ್ ಅಕ್ಷಮ್ಯ ಅಪರಾಧ ಮಾಡಿರುವುದು ಮಾ... ಈಗ ಜಗಜ್ಜಾಹೀರಾಗಿ ಹೋಗಿದೆ! 1988 ರ ಭಾರತೀ... ಮೋಟಾರು ವಾಹನ ಕಾಯ್ದೆಯ ಸೆಕ್ಷನ್-3 ರ ಪ್ರಕಾ... ಭಾರೀ ವಾಹನ ಓಡಿಸಲು ಕಡ್ಡಾಯವಾಗಿ ಪರವಾನ... ಬೇಕೇಬೇಕು. ಅದರಲ್ಲೂ ಪ್ರಯಾಣಿಕರ ವಾಹನವ... ಅಸ್ನೋಟಿಕರ್‌ನಂಥ ತಲೆತಿರುಕ ಓಡಿಸುವಂತೆಯೇ ಇಲ್ಲ... ಪ್ರಯಾಣಿಕರ ವಾಹನ ಚಲಾಯಿಸಲು ಅಧಿಕೃತ ಬ್ಯಾ... ಬೇರೆ ಬೇಕು. ಅಸ್ನೋಟಿಕರ್ ಬುದ್ಧಿಪೂರ್ವಕವಾ... ಅಧಿಕಾರದ ಮದದಲ್ಲಿ ಇದನ್ನೆಲ್ಲ ಉಲ್ಲಂಘಿಸಿದ್ದಾನೆ. ... ಅಪರಾಧಕ್ಕೆ ಶಿಕ್ಷೆ ಎಷ್ಟಿದೆ ಗೊತ್ತಾ? ಬರೋಬ್ಬರಿ ಆ... ತಿಂಗಳು ಸಜೆ-ದಂಡ ವಿಧಿಸುವ ಅವಕಾಶ ಕಾನೂನಿನಲ್ಲಿ... ಹಲವು ಸಾವು-ನೋವು ಮಾಡುವ ಅಚಾತುಯ... ಪ್ರಜ್ಞಾಪೂರ್ವಕ ವಾಗೇ ಮಾಡಿದ ಭಂಡ ಅಸ್ನೋಟಿಕರ್‌ನ... ಕಾನೂನಿನ ಕೈಗೆ ಕೊಡುವ ತಾಕತ್ತು ಯಾರಿಗಿ... ಉಪಮುಖ್ಯಮಂತ್ರಿಯಾಗುವ ಹಪಾಹಪಿಯಲ್ಲಿ ಯ... ಸೆರಗಿಡಿದು ಓಡಾಡುತ್ತಿರುವ ಸಾರಿಗೆ ಮಂತ್ರಿ ಅಶೋಕ... ಇದೆಲ್ಲ ಅರ್ಥವಾಗುವ ಸಾಧ್ಯತೆಯೇ ಇಲ್ಲ ಬಿಡಿ.

ಇಂಥ ಕಾನೂನು ಭಂಜಕ-ಜನಪೀಡಕ ಕಿರಾತಕ... ಬಿಜೆಪಿ ಸರ್ಕಾರ ನಡೆಸುತ್ತಿರುವುದರಿಂದ ಅಸ್ನೋಟಿಕ... ಸೇಫ್! ಅಸಹಾಯಕ ಜನರ ಮಾನ-ಪ್ರಾಣಕ್ಕೆ ಮಾ... ಅಪಾಯ!! ಕಾರವಾರಿಗರಿಗೆ ಶನಿಯಂತೆ ಕಾಡುತ್ತಿರು... ಅಸ್ನೋಟಿಕರ್‌ನ ತೆವಲು-ತೀಟೆಯ ತರಲೆಯಿಂದ ಸ... ಕ್ಕಂತೂ ಮುಕ್ತಿ ಇಲ್ಲದಂತಾಗಿದೆ......

• ನಹು...







ರಂಗಾದ ನಟಿಯರ ರಾಂಗು ಉತ್ತರ


ಡೈಲಾಗಿನಂತೆ ಭಾಷಣಗಳನ್ನು ಉರು ಹೊಡೆದು ಮಾತಾಡುವ ಈ ನಟಿಮಣಿಯರಿಗೆ ದಿಢೀರನೆ ರಾಜ್ಯ ಮತ್ತು ರಾಷ್ಟ್ರದ ಬಗ್ಗೆ ಒಂದಿಷ್ಟು ಪ್ರಶ್ನೆಗಳನ್ನು ಕೇಳಿದರೆ ಹೇಗೆ ಉತ್ತರಿಸುತ್ತಾರೆ ಎಂಬ ಕುತೂಹಲದಿಂದ ಕಾರ್ಯಾಚರಣೆಗಿಳಿದಾಗ...

ದಂಡಿದಂಡಿಯಾಗಿ ಕನ್ನಡದ ಸಿನಿಮಾ ನಟಿಯರು ಈಗ ರಾಜಕೀಯ ...ವೇಶಿಸುತ್ತಿದ್ದಾರೆ. ಸಂಭಾವನೆ ಕೊಡದ ನಿರ್ಮಾಪಕರ ಕೊರಳಪಟ್ಟಿ ...ತಿಯುತ್ತಿದ್ದ, ಇಷ್ಟು ಕೊಟ್ಟರೆ ನಟಿಸುತ್ತೀನಿ ಎಂದು ಹಠ ...ತಿಯುತ್ತಿದ್ದ ನಟಿಯರಿಗೆ ಇದ್ದಕ್ಕಿದ್ದ ಹಾಗೆ ರಾಜಕೀಯದ ಬಗ್ಗೆ ...ವ್ಯಾಮೋಹ ಹುಟ್ಟಿಕೊಂಡಿರುವುದು ಯಾಕೆ? ...ವೆಲ್ಲರಿ ಅಂಗಡಿಗಳನ್ನು, ಶಾಪಿಂಗ್ ...ಾಲ್‌ಗಳನ್ನು ಉದ್ಘಾಟಿಸಲೂ, ಚಪ್ಪಲಿ ...ಹೀರಾತಲ್ಲಿ ಕಾಣಿಸಿಕೊಳ್ಳಲೂ ಲಕ್ಷ ... ಸಂಭಾವನೆ ಮತ್ತು ಗಿಫ್ಟುಗಳನ್ನು ...ರೀಕ್ಷಿಸುವ ನಟಿಯರಿಗೆ ಅದ್ಯಾವಾಗ ...ಮಾಜ ಸೇವೆ ಮಾಡುವ ...ಮೋದು ತಗುಲಿಕೊಂಡಿತೋ ...ತ್ತಿಲ್ಲ.

... ನಟಿ ರಮ್ಯಾ ಕಾಂಗ್ರೆಸ್ ...ರಿದ್ದೇ ತಡ ಈಗ ಕನ್ನಡ ...ತ್ರರಂಗದ ಸೇರು, ಪಾವು, ...ತಾಕಿಗಳೆಲ್ಲಾ ...ದೊಂದು ಪಕ್ಷದ ...ಗಲೇರಿ ...ರುತ್ತಿವೆ. ...ದಿಷ್ಟು ಜನ ...ಾಕ್ಕಾಗಿ ...ಜಕೀಯ ...ಗಳಿಗೆ ಬಿಕರಿಯಾದರೆ ...ನ್ನ ಕೆಲವು ನಿವೃತ್ತ ...ಯರು 'ನಾವೂ ಜಯಲಲಿತಾ ... ಸಿಎಮ್ಮಾಗಬಹುದು' ಎಂಬ ...ಕರ ಕನಸು ಕಾಣುತ್ತಿದ್ದಾರೆ.

... ಬಿಜೆಪಿ ಅಧಿಕಾರಕ್ಕೆ ಬಂದ ...ದಿಂದ ಅತ್ತೂ ಕರೆದ ತಾರಾ ಈಗ ...ಮಾ ಅಕಾಡೆಮಿಯ ಅಧ್ಯಕ್ಷ ...ದಿಯನ್ನು ಪಡೆದಿದ್ದಾರೆ. ಗ್ಲಾಮರ್ ... ಪೂಜಾ ಗಾಂಧಿ ಜಾತ್ಯತೀತ ...ಜನತಾದಳದ ತೆನೆ ಭಾರವನ್ನು ತಲೆ ...ಲೆ ಹೊರಿಸಿಕೊಂಡಿದ್ದಾಳೆ. ರಕ್ಷಿತಾ ...ಸಗಿನ ಉರುಬಿಸಿಲಿನ ದಗೆ ...ಯಲಾರದೆ ಕೈಯಲ್ಲಿ ಫ್ಯಾನು ...ಡಿದು ಗಾಳಿ ಬೀಸಿಕೊಳ್ಳುತ್ತಿದ್ದಾಳೆ. ...ಂಬೆಗೆ ಹೋಗಿ ಬೆಂಗಳೂರಿಗೆ ...ಪಸ್ ಬಂದಿರುವ ಭಾವನಾ ಈಗ ...ಂಗ್ರೆಸ್‌ನವರೊಂದಿಗೆ ಕೈ ...ಲಾಯಿಸಿದ್ದಾಳೆ. ಇನ್ನೂ ಮಹಾನ್ ...ದ್ಧಿವಂತೆಯಂತೆ ಪೋಸು ಕೊಡುವ ...ಟಕಾ ಬಂಡಿ' ಮಾಳವಿಕಾ ಜೆಡಿಎಸ್ಸು ...ರಿದ್ದಾಳೆ.

... ಡೈಲಾಗಿನಂತೆ ಭಾಷಣಗಳನ್ನು ಉರು ...ಡೆದು ಮಾತಾಡುವ ಈ ...ಮಣಿಯರಿಗೆ ದಿಢೀರನೆ ರಾಜ್ಯ ಮತ್ತು ...ಷ್ಟ್ರದ ಬಗ್ಗೆ ಒಂದಿಷ್ಟು ಪ್ರಶ್ನೆಗಳನ್ನು ಕೇಳಿದರೆ ...ಗೆ ಉತ್ತರಿಸುತ್ತಾರೆ ಎಂಬ ಕುತೂಹಲದಿಂದ ...ರ್ಯಾಚರಣೆಗಿಳಿದಾಗ...



ರಾಜಕೀಯಕ್ಕೆ ಲಾಯಕ್ಕಾ?

ಪೂಜಾ ಗಾಂಧಿ

- ಜಾತ್ಯತೀತ ಪದದ ಅರ್ಥ ಏನು?

* ವಾಟ್ ವಾಟ್ ವಾಟ್... ಜಾತೀ ತೀತಾ ಎಲ್ಲಾ ಏನೂ ಇಲ್ಲ.. ಎಲ್ಲಾರೂ ಒಂದೇ ಅಷ್ಟೇ!

- ಕರ್ನಾಟಕದಲ್ಲಿ ಎಷ್ಟು ಜಿಲ್ಲೆಗಳಿವೆ?

* ನಂಗೂ ಗೊತ್ತು.. ಇಪ್ಪತ್ತೆಂಟು.

- ಮಹಾತ್ಮ ಗಾಂಧಿ ಪ್ರಧಾನ ಮಂತ್ರಿ ಆಗಿದ್ದು ಯಾವಾಗ?

* ರಾಂಗ್ ಕೊಶ್ಚನ್ ಕೇಳಿ ನನ್ನ ಬಕ್ರಾ ಮಾಡ್ಬೇಡಿ.... ಮಹಾತ್ಮ ಗಾಂಧಿ ಪ್ರೈಮಿನಿಸ್ಟರ್ ಆಗಿರ್ಲೇ ಇಲ್ಲ... ಹಾ!

- ರಾಹುಲ್ ಗಾಂಧಿ ಮಹಾತ್ಮ ಗಾಂಧಿಗೆ ಏನಾಗಬೇಕು?

* ಏನೂ ಆಗಬೇಕಿಲ್ಲ, ಗಾಂಧೀಜಿ ಫಾದರ್ ಆಫ್ ದಿ ನೇಷನ್ ಅಷ್ಟೇ...

- ಈಗ ಬದುಕಿರುವ ರಾಷ್ಟ್ರ ಕವಿಯ ಹೆಸರೇನು?

* ಗೊತ್ತಿಲ್ಲ.

- ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅಂದರೆ ಯಾರು?

* ಅವ್ರು ಒಬ್ಬ ಪೊಯೆಟ್ ತಾನೆ? ನಾನು ತುಮಕೂರಲ್ಲಿ ಫಂಕ್ಷನ್‌ಗೆ ಹೋಗಿದ್ದೆ. ಅಲ್ಲಿ ಅವರ ಬಗ್ಗೆ ಮಾತಾಡ್ತಿದ್ರು...

- ಕನ್ನಡದ ಆಸ್ತಿ ಎಂದು ಯಾರನ್ನು ಕರೆಯುತ್ತಾರೆ?

* ಡಾ. ರಾಜ್ ಕುಮಾರ್.

- ವಿಧಾನಸೌಧ ಕಟ್ಟಿಸಿದ್ದು ಯಾರು?

* ಈಗ ಬೆಳಗಾಂ ಹತ್ರನೂ ಕಟ್ತಾ ಇದಾರೆ. ಗೌರ್ಮೆಂಟ್‌ನವರೇ ಕಟ್ಟಿರಬಹುದು.

- ಜ್ಞಾನಪೀಠ ಪಡೆದಿರುವ ಕನ್ನಡಿಗರು ಯಾರ್‍ಯಾರು?

* ನೀವು ಬೇಕು ಅಂತಲೇ ನಂಗೆ ಟಫ್ ಆಗಿರೋ ಪ್ರಶ್ನೆಗಳನ್ನ ಕೇಳ್ತಾ ಇದೀರ... ನಂಗೊತ್ತಿಲ್ಲ.

- ಕಾವೇರಿ ನದಿಯ ಉಗಮಸ್ಥಾನ ಎಲ್ಲಿದೆ?

* ಕರ್ನಾಟಕದಲ್ಲಿ.. ಐ ಥಿಂಕ್ ಕೊಡಗು.. ರೈಟ್?

- ನಮ್ಮ ಸಂವಿಧಾನದ ಕರ್ತೃ ಯಾರು?

* ಡಾ. ಅಂಬೇಡ್ಕರ್ ತಾನೆ?

- 12ನೇ ಶತಮಾನದ ಸಾಮಾಜಿಕ ಸುಧಾರಕರ ಹೆಸರೇನು?

* ಹಾ... ತಿಳ್ಕೊಂಡು ಹೇಳ್ತೀನಿ.

- 2ಜಿ ಎಂದರೇನು? ಅದು ಯಾಕೆ ಸುದ್ದಿಯಲ್ಲಿದೆ?

* 2ಜಿ ಅಂದ್ರೆ ಸ್ಕ್ಯಾಮ್ ಇಸ್ ಇಟ್ ನಾಟ್? ತಮಿಳುನಾಡಿನ ಕೆಲವೊಬ್ಬರು ಅದರಲ್ಲಿ ಇನ್‌ವಾಲ್ವ್ ಆಗಿದಾರೆ. ಕನಿಮೊಳಿ ಅಂತಾ ಒಂದು ಲೇಡಿ ಹೆಸ್ರು ಬಂದಿದೆಯಲ್ಲಾ...

- ಉತ್ತರ ಪ್ರದೇಶದಲ್ಲಿ ಮೊನ್ನೆ ಗೆದ್ದಿರುವ ಪಕ್ಷ ಯಾವುದು?

* ಅಖಿಲೇಶ್ ಯಾದವ್, ಸಮಾಜವಾದಿ ಪಾರ್ಟಿ.

- ಬಿಎಸ್‌ಪಿ ಪಕ್ಷವನ್ನು ಸ್ಥಾಪಿಸಿದವರು ಯಾರು?

* ನಂಗೊತ್ತು... ಮಾಯಾವತಿ ತಾನೆ?!

- ಯುಪಿಎ, ಎನ್‌ಡಿಎ ಎಂದರೇನು?

* ಅದೇನೋ ಅಲಯನ್ಸ್ ಅಂತ ನಂಗೊತ್ತು, ಸರಿಯಾಗಿ ನೆನಪಾಗ್ತಿಲ್ಲ!

- ಪ್ರಿಯಾಂಕಾ ಗಾಂಧಿ ಯಾವ ಕ್ಷೇತ್ರದಿಂದ ಸಂಸದೆಯಾಗಿದ್ದಾರೆ?

* ಅಮೇಠಿ ಇರಬಹುದು.

- ಕೃಷ್ಣಾ ನದಿ ಅರಬ್ಬೀಸಮುದ್ರ ಸೇರುತ್ತಾ? ಬಂಗಾಳಕೊಲ್ಲಿ ಸೇರುತ್ತಾ?

* ಕೃಷ್ಣಾ ನದಿ ಇರೋದೆಲ್ಲಿ?

- ರಾಷ್ಟ್ರಧ್ವಜದಲ್ಲಿ ಮೇಲೆ ಇರುವ ಬಣ್ಣ ಯಾವುದು?

* ಸಾಫ್ರನ್.

- ರಾಷ್ಟ್ರೀಯ ಪಕ್ಷಿ ಮತ್ತು ಪ್ರಾಣಿ ಯಾವುದು?

* ನಂಗೆ ಇಷ್ಟೂ ಗೊತ್ತಿಲ್ಲ ಅಂತ ಅನ್ಕೋಬೇಡಿ. ನಾನು ಇದನ್ನೆಲ್ಲಾ ಓದಿದ್ದೀನಿ. ನ್ಯಾಷನಲ್ ಬರ್ಡ್ ಪೀಕಾಕ್, ಅನಿಮಲ್ ಟೈಗರ್..!

ನನ್ನ ಲೈಫ್‌ನಲ್ಲಿ ಇಂಥ ಇಂಟರ್‌ವ್ಯೂ ಯಾರೂ ಮಾಡಿರಲಿಲ್ಲ. ಆದರೆ ನಂಗೆ ನೀವು ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡದಿದ್ದರೂ ಈ ಕಾನ್ಸೆಪ್ಟ್ ತುಂಬಾ ಚೆನ್ನಾಗಿದೆ. ಎಷ್ಟೊಂದು ತಿಳ್ಕೊಳ್ಳೋದಿದೆ ಅನ್ನಿಸ್ತಿದೆ. ನಾನು ಕೂಡಾ ಇತ್ತೀಚೆಗೆ ತುಂಬಾ ವಿಚಾರಗಳನ್ನು ತಿಳಿದುಕೊಳ್ಳೊ ಪ್ರಯತ್ನ ಮಾಡ್ತಿದ್ದೀನಿ. ಕನ್ನಡವನ್ನು ಸ್ಪಷ್ಟವಾಗಿ ಮಾತಾಡೋದನ್ನ, ಹೊಸ ಹೊಸ ಪದಗಳನ್ನು ಬಳಸೋದನ್ನು ಕಲಿತಿದ್ದೀನಿ...

ತಾರಾ



- ಕರ್ನಾಟಕದಲ್ಲಿ ಎಷ್ಟು ಜಿಲ್ಲೆಗಳಿವೆ?

ಏನಪ್ಪಾ ನಾನೇನು ಸವೆಂತ್ ಸ್ಟಾಂಡರ್ಡ್ ಸ್ಟೂಡೆಂಟಾ?... ಮುಂದಿನ ಪ್ರಶ್ನೆ ಕೇಳು...

- ಸದನದಲ್ಲಿ ಬ್ಲೂಫಿಲಂ ನೋಡಿದ ಶಾಸಕರ ಹೆಸರೇನು? ಅವರು ಯಾವ ಪಕ್ಷಕ್ಕೆ ಸೇರಿದವರು?

ಒಂದ್ ನಿಮಿಷ ಇರು... ಇನ್ನೊಂದು ಲೈನ್‌ನಲ್ಲಿದ್ದೀನಿ.. ಮಾತಾಡಿಬಿಟ್ಟು ಮತ್ತೆ ಕಾಲ್ ಮಾಡ್ತೀನಿ!

ರಕ್ಷಿತಾ



- ರಕ್ಷಿತಾ ಅವರೇ ನಿಮ್ಮನ್ನ ಒಂದಿಷ್ಟು ಪ್ರಶ್ನೆ ಕೇಳೋದಿತ್ತು..

ಓಹ್ ಸಾರಿ... ನಾನು ಈಗಷ್ಟೇ ಗದಗ್‌ನಿಂದ ಹುಬ್ಬಳ್ಳಿಗೆ ಬಂದಿದೀನಿ. ಬಿಸಿಲಿಗೆ ಸಿಕ್ಕಾಪಟ್ಟೆ ಟಯರ್ಡ್ ಆಗ್ಬಿಟ್ಟಿದ್ದೀನಿ.. ನಾಳೆ ನೀವು ಕೇಳೋ ಎಲ್ಲಾ ಪ್ರಶ್ನೆಗೂ ಉತ್ತರ ಕೊಡ್ತೀನಿ..

ಭಾವನಾ



ಅರ್ಧ ಗಂಟೆ ಬಿಟ್ಟು ಕಾಲ್ ಮಾಡಿ. ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಡ್ತೀನಿ.. (ಅರ್ಧ ಗಂಟೆಯ ನಂತರ...)

- ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದ್ದು ಯಾವಾಗ ಮತ್ತು ಯಾರು?

ಇದೇನಿದು ಐಕ್ಯೂ ಟೆಸ್ಟ್ ಮಾಡ್ತಿದೀರಾ? ನಾನು ಹೇಳಿದ ಉತ್ತರಗಳನ್ನ ಪ್ರಿಂಟ್ ಮಾಡ್ತೀರಾ? ನೀವು ನನ್ನ ಜನರಲ್ ನಾಲೆಡ್ಜ್ ಟೆಸ್ಟ್ ಮಾಡಿದರೆ ಪಬ್ಲಿಕ್‌ನವರು ತಪ್ಪಾಗಿ ಭಾವಿಸ್ತಾರೆ. ಕೆಲವು ಸಲ ಟೀವಿ ಚಾನೆಲ್‌ಗಳವರು ಹೀಗೆ ಮಾಡ್ತಾರೆ. ಅದನ್ನ ನಾನು ಎಂಟರ್‌ಟೈನ್ ಮಾಡಲ್ಲ, ಅದು ಬಿಟ್ಟು ಬೇರೆ ಏನಾದ್ರೂ ಕೇಳಿ ಆನ್ಸರ್ ಮಾಡ್ತೀನಿ.

ಭಾವನಾಗೆ ಕೇಳಿದ ಮೊದಲ ಪ್ರಶ್ನೆಗೇ ಆಕೆಯ ಬಳಿ ಉತ್ತರವಿಲ್ಲದ್ದರಿಂದ ಪ್ರಶ್ನಿಸಿದವರಿಗೇ ಬೋಧನೆ ನೀಡಿ ಸುಮ್ಮನಾದರು.

• ಅರುಣ್


ಡೀಕೇಶಿ ಬಯೋಡಾಟಾ

ಕನಕಪುರ ತಾಲ್ಲೂಕಿನ ದೊಡ್ಡಾಲಹಳ್ಳಿಯ ಕೆಂಪೇಗೌಡ ಎಂಬ ಸಾಮಾನ್ಯ ರೈತನ ಮಗನಾಗಿ ಹುಟ್ಟಿದ ಡಿ.ಕೆ.ಶಿವಕುಮಾರ್ ಇಂದು ಕರ್ನಾಟಕದ ಅತ್ಯಂತ ಶ್ರೀಮಂತ ರಾಜಕಾರಣಿಗಳಲ್ಲೊಬ್ಬ. ರಾಜಕೀಯ ಕ್ಷೇತ್ರಕ್ಕೆ ಬರುವ ಮುಂಚೆ ಸನ್ಮಾನ್ಯರು ಯಾವ ವೃತ್ತಿಯನ್ನು ಕೈಗೊಂಡಿದ್ದರು? ಕಾಡು ಸಚಿವ ಯೋಗೇಶ್ವರ್ ಹೇಳುವಂತೆ 'ಕೊತ್ವಾಲ್ ರಾಮಚಂದ್ರನೆಂಬ ರೌಡಿಗೆ ಕಾಫಿ, ಟೀ ಸಪ್ಲೈ ಮಾಡುವುದು, ಹಾಗೆ ಬಿಡುವಿನ ವೇಳೆಯಲ್ಲಿ ಆ ರೌಡಿಯ ಕಾಲು ಒತ್ತುವುದೇ ಕಾಯಕವಾಗಿತ್ತು.' ಆ ನಂತರ ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟ ಮಾನ್ಯರು ನಾಗಾಲೋಟದಲ್ಲಿ ಅಭಿವೃದ್ಧಿ ಸಾಧಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಆತ ಘೋಷಿಸಿದ ಅಧಿಕೃತ ಆಸ್ತಿಯ ಮೊತ್ತ 76 ಕೋಟಿ 69 ಲಕ್ಷಗಳು! ರಾಜಕಾರಣಿಗಳು ಅಧಿಕೃತವಾಗಿ ಘೋಷಿಸುವ ಆಸ್ತಿಗಿಂತ ಹತ್ತಾರು ಪಟ್ಟು ಆಸ್ತಿಗಳನ್ನು ಹೊಂದಿರುತ್ತಾರೆಂಬುದು ಇಂದು ಶಾಲಾ ಬಾಲಕರಿಗೂ ಗೊತ್ತಿದೆ, ಆ ಮಾತು ಬೇರೆ.

ಐದು ಬಾರಿ ಶಾಸಕನಾಗಿ ಆಯ್ಕೆಯಾಗಿರುವ ಈ ಮಹಾಶಯ ಕೆಲವು ಬಾರಿ ಮಂತ್ರಿಯಾಗಿಯೂ ತಮ್ಮ ಅಭಿವೃದ್ಧಿಗಾಗಿ ಸಾಕಷ್ಟು ದುಡಿದಿದ್ದಾನೆ. ಬಂಗಾರಪ್ಪನಿಗೆ ಹತ್ತಿರವಾಗಿ ಬಂದೀಖಾನೆ ಸಚಿವನಾದ. ನಂತರ ಮುಖ್ಯಮಂತ್ರಿಯಾಗಿದ್ದ ಎಸ್ಸೆಮ್ ಕೃಷ್ಣರಿಗೆ ಅತಿಯಾಗಿ ಸಹಕರಿಸಿದ ಪರಿಣಾಮವಾಗಿ, ಸಹಕಾರಿ ಸಚಿವನೂ ಆಗಿದ್ದ. ಬೆಂಗಳೂರು ಬೃಹತ್ ಬೆಂಗಳೂರಾಗಿ ಬೆಳೆಯುತ್ತಿದ್ದುದನ್ನು ಅರಿತು ನಗರಾಭಿವೃದ್ಧಿ ಸಚಿವರಾದ ಸನ್ಮಾನ್ಯರು ಯಥೇಚ್ಛ ಅಭಿವೃದ್ಧಿ ಸಾಧಿಸಿರುವುದು ನಮ್ಮೆಲ್ಲರ ಕಣ್ಣಮುಂದೆಯೇ ಇದೆ. ಅವುಗಳಲ್ಲಿ ಬೆನ್ನಿಗಾನಹಳ್ಳಿಯ ಅಭಿವೃದ್ಧಿ ಯೋಜನೆಯೂ ಒಂದು.

ಬೆಂಗಳೂರು - ಮೈಸೂರು ಪ್ರಾಂತ್ಯದಲ್ಲಿ ರೈತರ ಪಾಲಿಗೆ ಹೆಮ್ಮಾರಿಯಾಗಿರುವ ಅಶೋಕ್ ಖೇಣಿಗೂ ಇವರು ಆಪ್ತರು. ಖೇಣಿಯ ಯೋಜನೆಯ ಅನುಷ್ಠಾನಕ್ಕಾಗಿಯೇ ಬಿಎಮ್ಐಸಿ ಯೋಜನಾ ಪ್ರಾಧಿಕಾರವೊಂದು ರಚಿತವಾಗಿದೆ. ಡೀಕೇಶಿ ಆ ರೈತ ವಿರೋಧಿ ಪ್ರಾಧಿಕಾರದ ಅಧ್ಯಕ್ಷ ಸೀಟಿನಲ್ಲೂ ಕುಳಿತಿದ್ದರು. ರೈತರ ಮಂಡೆಬೋಳಿಸಿ ಖೇಣಿ ಲಪಟಾಯಿಸಿರುವ ಭೂಮಿಯ ಆಜುಬಾಜಿನಲ್ಲಿ ಡೀಕೇಶಿಯೂ ಜಮೀನು ಖರೀದಿಸಿದ್ದಾನೆ.

ಡೀಕೇಶಿ ಕೇವಲ ಭೂಕಬಳಿಕೆ ವಿಷಯದಲ್ಲಿ ಮಾತ್ರ ತೊಡಗಿಸಿಕೊಂಡಿಲ್ಲ, ಆತನದು ಒಂಥರಾ ಬಹುಮುಖ ಪ್ರತಿಭೆ. ಆದ್ದರಿಂದ ಯಾವುದೋ ಒಂದು ಕ್ಷೇತ್ರಕ್ಕೆ ಸೀಮಿತಗೊಂಡವನಲ್ಲ, ಕನಕಪುರದ ಕುಖ್ಯಾತ ಕಲ್ಲುಗಣಿಗಾರಿಕೆಯ ಅಕ್ರಮ ಸಾಮ್ರಾಜ್ಯಕ್ಕೆ ಡೀಕೇಶಿಯೇ ಅಧಿಪತಿ.



ಈ ಬಗ್ಗೆ ನೇರವಾಗಿ ಆರೋಪಿಸಿರುವ ಕಾಡು ಸಚಿವ ಯೋಗೇಶಿ ತನಿಖೆಗೆ ಆದೇಶಿಸಿರುವುದು ಈಗ ಹಳೆಯ ಸುದ್ದಿ. ಡೀಕೇಶಿ ಮತ್ತು ಆತನ ಸೋದರರ ಒಡೆತನದಲ್ಲಿ ಅಥವಾ ಪಾರ್ಟನರ್‌ಶಿಪ್‌ನಲ್ಲಿ ವಿಕ್ಟರಿ ಎಕ್ಸ್‌ಪೋರ್ಟ್, ಇಂಡಿಯನ್ ರಾಕ್ಸ್, ವ್ಯಾಲೀಶ್, ಸುಪ್ರಿ ಗ್ರಾನೈಟ್ಸ್, ಸ್ಕಂಧ ಎಂಟರ್‌ಪ್ರೈಸಸ್, ನೆಟ್‌ಪ್ರಾಜೆಕ್ಟ್ ಸಲ್ಯೂಷನ್ ಮುಂತಾದ ಹಲವಾರು ಕಂಪನಿಗಳಿವೆ ಹಾಗೂ ಕೆಲವು ಬೇನಾಮಿ ಕಂಪನಿಗಳ ಹೆಸರಿನಲ್ಲಿ ಕಲ್ಲನ್ನು ವಿದೇಶಗಳಿಗೆ ಮಾರಿ ಭಾರೀ ಪ್ರಮಾಣದಲ್ಲಿ ತೆರಿಗೆ ವಂಚಿಸಿದ್ದಾನೆಂದು ಯೋಗೇಶಿ ಅಂಡ್ ಕಂಪನಿ ಆರೋಪಿಸುತ್ತಿದ್ದು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸದ್ಯದಲ್ಲೇ ಬಿಡುಗಡೆ ಮಾಡುವುದಾಗಿ ತಿಳಿಸಿದ್ದಾರೆ.

ಹೀಗೇ ಮುಂದುವರೆದ ಡೀಕೇಶಿ ಪರಾಕ್ರಮ ಬೆಂಗಳೂರು ನಗರವನ್ನು ಸುತ್ತುವರೆದಿದೆ. ಈತ ಆಯಕಟ್ಟಿನ ಪ್ರದೇಶಗಳಲ್ಲಿ ಭೂಮಿಯನ್ನು ಗಳಿಸಿರುವುದು ಮಾತ್ರವಲ್ಲದೆ ಹಲವು ಕಮರ್ಷಿಯಲ್ ಕಾಂಪ್ಲೆಕ್ಸ್‌ಗಳನ್ನು ಹೊಂದಿದ್ದಾನೆ.

ಶಿಕ್ಷಣವೇ ಶಕ್ತಿ ಶಿಕ್ಷಣದಿಂದಲೇ ಅಭಿವೃದ್ಧಿ ಅಂತ ಅಂಬೇಡ್ಕರ್, ಗಾಂಧೀಜಿಯಂತಹ ಪುಣ್ಯಾತ್ಮರು ಹೇಳಿದ ಮಾತನ್ನು ಡೀಕೇಶಿ ವೇದವಾಕ್ಯದಂತೆ ಪರಿಪಾಲಿಸಿ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾನೆ. ಆದರೆ ಏನೋ ಎಡವಟ್ಟಾಗಿ ಸ್ವಲ್ಪ ಕನ್‌ಫ್ಯೂಶನ್ ಆಗಿಬಿಟ್ಟಿದೆ ಅಷ್ಟೆ. ಆ ಪುಣ್ಯಾತ್ಮರು ಹೇಳಿದ್ದು ದೇಶದ ಅಭಿವೃದ್ಧಿ ಬಗ್ಗೆ, ಈ ಪಾಪಾತ್ಮ ಅನ್ವಯ ಮಾಡಿದ್ದು ತನ್ನ ಸ್ವಂತ ಅಭಿವೃದ್ಧಿಗೆ. ಅಷ್ಟೆ ವ್ಯತ್ಯಾಸ!

ಹೀಗಾಗಿ ಇಂದು ಆತ ಇಂಜಿನಿಯರಿಂಗ್ ಕಾಲೇಜು, ನರ್ಸಿಂಗ್ ಕಾಲೇಜುಗಳನ್ನೂ ಒಳಗೊಂಡು ಹಲವಾರು ಪ್ರತಿಷ್ಠಿತ ಶಾಲೆಗಳನ್ನು ಒಳಗೊಂಡಂತೆ ನಾನಾ ವಿದ್ಯಾಸಂಸ್ಥೆಗಳ ಒಡೆಯ.

ಈ ನೆಲದ ಕಾನೂನು ಕಟ್ಟುನಿಟ್ಟಾಗಿ ಜಾರಿಯಾಗಿ ಡೀಕೇಶಿ ಎಂಬ ಬಹುಮುಖ ಪ್ರತಿಭೆ ಜೈಲುಪಾಲಾದರೆ ಆತನ ಸಾಮ್ರಾಜ್ಯದ ಗತಿ ಅಧೋಗತಿಯೇ ಸರಿ! ✽

ಡೀಕೇಶಿ-ಯಡ್ಡಿ ಜೋಡಿಗೆ ಡಿನೋಟಿಫಿಕೇಷನ್ ಉರುಳು

ಕರ್ನಾಟಕದ ಇತಿಹಾಸದಲ್ಲಿ ಇದು ಮತ್ತೊಂದು ಹೊಸ ದಾಖಲೆಯ ಕೇಸು. ಒಂದೇ ಕೇಸಿನಲ್ಲಿ ಮುಖ್ಯಮಂತ್ರಿ ಮತ್ತು ವಿರೋಧ ಪಕ್ಷದ ನಾಯಕರಿಬ್ಬರೂ ಆರೋಪಿಗಳು! ಕರ್ನಾಟಕದ ರಾಜಕೀಯದಲ್ಲೇ ಅಭೂತಪೂರ್ವವಾದ ಈ ಕೇಸಿನಲ್ಲಿ ಒಂದು ಖತರ್‌ನಾಕ್ ರಾಜಕೀಯ ಜೋಡಿಯ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ. ಈ ಜೋಡಿ ಬೇರೆ ಯಾರೂ ಅಲ್ಲ, ರಾಜ್ಯದ ಮುಖ್ಯಮಂತ್ರಿಯಾಗಿದ್ದ ಯಡೂರಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್‌ನ ಪ್ರಥಮ ದರ್ಜೆ ನಾಯಕ ಹಾಗೂ ಮಾಜಿ ಮಂತ್ರಿ ಹಾಗೂ ಹಾಲಿ ಶಾಸಕ ಡೀಕೇಶಿ.


ಇತ್ತೀಚೆಗೆ ಡೀಕೇಶಿ - ಯೋಗೇಶಿ ಬೀದಿ ಕಚ್ಚಾಟದಲ್ಲಿ ತೊಡಗಿ ಪರಸ್ಪರರ ಯೋಗ್ಯತೆಯನ್ನು ನಾಡಜನರ ಮುಂದೆ ಬಿಡಿಬಿಡಿಯಾಗಿ ಬಿಡಿಸಿಟ್ಟಿದ್ದು, ಒಬ್ಬರನ್ನೊಬ್ಬರು ಹಣಿಯಲು ಏನೆಲ್ಲಾ ಕಸರತ್ತು ಮಾಡಿದ್ದು ನಮಗೆಲ್ಲಾ ಗೊತ್ತು. ಹೀಗಿದ್ದಾಗಲೇ ಯೋಗೇಶಿ ಮೇಲೆ ಬರೋಬ್ಬರಿ 14 ಕೇಸು ಬಿದ್ದಿರುವುದರಿಂದ ಆತನ ಕಾಟ ಹೇಗೋ ತಪ್ಪುತ್ತೆ ಅಂತ ಡೀಕೇಶಿ ನಿಟ್ಟುಸಿರು ಬಿಡುತ್ತಿದ್ದ. ಆದರೆ ಡೀಕೇಶಿ ಮಾಡಿರುವ ಎಲ್ಲಾ ಪಾಪಗಳಿಂದ ವಿಮುಕ್ತಿ ಪಡೆಯುವುದು ಅಷ್ಟು ಸುಲಭವೇ? ಖಂಡಿತ ಇಲ್ಲ. ಅಷ್ಟರಲ್ಲೇ ಟಿಜೆ ಅಬ್ರಹಾಂ ಎಂಬುವವರು ಹಾಕಿರುವ ಡೀನೋಟಿಫಿಕೇಶನ್ ಕೇಸೊಂದರಲ್ಲಿ ಸಿಲುಕಿರುವ ಡೀಕೇಶಿ ಏದುಸಿರು ಬಿಡುತ್ತಿದ್ದಾನೆ.

ಇದು ಡೀಕೇಶಿ ಕತೆಯಾದರೆ ಯಡ್ಡಿ ಕತೆಯೂ ಇದಕ್ಕಿಂತ ಭಿನ್ನವೇನಿಲ್ಲ. ಇತ್ತೀಚಿನ ಹೈಕೋರ್ಟ್ ತೀರ್ಪನ್ನು ಕೈಲಿ ಹಿಡಿದುಕೊಂಡು ಇನ್ನೇನು ನಾನೇ ಮುಖ್ಯಮಂತ್ರಿಯೆಂದು ಓಡಾಡುತ್ತಿದ್ದ ಯಡ್ಡಿಯ ಕೊರಳಿಗೆ ಮತ್ತೊಂದು ಡೀನೋಟಿಫಿಕೇಶನ್ ಉರುಳು ಬಿದ್ದಿದೆ. ಈ ಇಬ್ಬರು ದಗಾ ದೋಸ್ತಿಗಳ ಮೇಲೆ ಬಿದ್ದಿರುವುದು ಅದೇ ಬೆನ್ನಿಗಾನಹಳ್ಳಿ ಡೀನೋಟಿಫಿಕೇಶನ್ ಹಗರಣಕ್ಕೆ ಸಂಬಂಧಿಸಿದ್ದು. ಲೋಕಾಯುಕ್ತ ಪೊಲೀಸರು ಸರಿಯಾದ ದಿಕ್ಕಿನಲ್ಲಿ ಕೆಲಸ ಮಾಡಿದರೆ ಡೀಕೇಶಿ-ಯಡ್ಡಿ ಜೋಡಿ ಪರಪ್ಪನ ಅಗ್ರಹಾರ ಸೇರಿ ಆಡಳಿತ ಪಕ್ಷ, ವಿರೋಧ ಪಕ್ಷ ಎಂಬ ಭೇದಭಾವ ಅಳಿಸಿ ಹೊಸ ದಾಖಲೆ ನಿರ್ಮಿಸಲಿದ್ದಾರೆ.

ಬೆಂಗಳೂರಿನ ರಿಯಲ್‌ಎಸ್ಟೇಟ್ ಏರುತ್ತಿದ್ದಂತೆ ಮಂತ್ರಿ ಮಹೋದಯರೆಲ್ಲಾ ಮುಗಿಬಿದ್ದಿದ್ದು ಸರ್ಕಾರಿ ಭೂಮಿ, ಗೋಮಾಳ, ಕೆರೆ ಅಂಗಳ ಅಥವಾ ಅಮಾಯಕ ರೈತರ ಭೂಮಿಗಳ ಮೇಲೆ. ಇಂಥಾ ಅಭಿವೃದ್ಧಿಶೀಲ ರಾಜಕಾರಣಿಗಳ ಅಗ್ರಸಾಲಿನಲ್ಲಿ ಡಿಕೇಶಿ ಕೂಡ ಒಬ್ಬ. ಹೀಗೆ ಆತುರಾತುರವಾಗಿ ನುಂಗಬಾರದ್ದನ್ನೆಲ್ಲಾ ನುಂಗಿದ್ದ ಡೀಕೇಶಿ ಗಂಟಲಲ್ಲಿ ನಾಲ್ಕೂವರೆ ಎಕರೆಯ ಭೂಮಿಯ ತುಂಡೊಂದು ಸಿಕ್ಕಿಬಿದ್ದು ಭಾರೀ ಫಜೀತಿಗಿಟ್ಟುಕೊಂಡಿದೆ.

ಎಂಥವರನ್ನೂ ದಂಗುಬಡಿಸುವಂಥ ಈ ಕೇಸಿನ ವಿವರಗಳನ್ನು ನೋಡೋಣ.

ಇತ್ತೀಚೆಗೆ ಉದ್ಘಾಟನೆಯಾದ ಮೆಟ್ರೋ ರೈಲು ನಿಲ್ದಾಣದ ಅಕ್ಕಪಕ್ಕ ರಿಯಲ್‌ಎಸ್ಟೇಟ್‌ನ ಭರಾಟೆ ಜೋರು. ಅಭಿವೃದ್ಧಿಶೀಲ ರಾಜಕಾರಣಿಯಾದ ಡೀಕೇಶಿ ಬಹಳ ದೂರದೃಷ್ಟಿಯಿಂದ ನಗರದ ಬೆನ್ನಿಗಾನಹಳ್ಳಿ ನಿಲ್ದಾಣದ ಸಮೀಪದಲ್ಲಿ ಜಮೀನೊಂದನ್ನು 2003ರಲ್ಲೇ ಖರೀದಿಸಿದ್ದಾರೆ. ಆಗ ಅವರು ನಗರಾಭಿವೃದ್ಧಿ ಸಚಿವರಾಗಿದ್ದರು. ಹೀಗೆ ಈತನ ವಶಕ್ಕೆ ಬಂದ 4 ಎಕರೆ 20 ಗುಂಟೆ ಭೂಮಿ 1984ರಲ್ಲೇ 'ಎನ್‌ಜಿಇಎಫ್ ಪೂರ್ವ ಬಡಾವಣೆ'ಗಾಗಿ ಬಿಡಿಎ ಸ್ವಾಧೀನಪಡಿಸಿಕೊಂಡಿತ್ತು, ಆ ನಂತರ 18-12-1986ರಂದು ಗೆಜೆಟ್ ಸಂಖ್ಯೆ ಎಚ್‌ಯುಡಿ 368 ಎಮ್‌ಎನ್‌ಎಕ್ಸ್ 1986 ರಂತೆ ಅಂತಿಮ ಅಧಿಸೂಚನೆ ಹೊರಡಿಸಿತ್ತು.



ಕಾನೂನಿನ ಪ್ರಕಾರ ಹೀಗೆ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಯಾವುದೇ ಭೂಮಿಯನ್ನು ಮಾರುವುದಾಗಲಿ, ಕೊಳ್ಳುವುದಾಗಲಿ ಮಾಡುವಂತಿಲ್ಲ. ಒಂದುವೇಳೆ ಹಾಗೇನಾದರೂ ಮಾರಾಟ ಮಾಡಿದ್ದೇ ಆದರೆ ಅದು ಊರ್ಜಿತವಾಗುವುದಿಲ್ಲ. ಇಂಥಾ ಕೇಸುಗಳಲ್ಲಿ ಸುಪ್ರೀಂಕೋರ್ಟ್ ಸ್ಪಷ್ಟವಾದ ತೀರ್ಪು ನೀಡಿದೆ. ಅಲ್ಲದೆ ಕರ್ನಾಟಕ ಭೂಮಿ ವರ್ಗಾವಣೆ ತಡೆ ಕಾಯಿದೆ-1991 ರ ಪ್ರಕಾರ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟ ಜಮೀನನ್ನು ಮಾರುವುದಾಗಲಿ ಕೊಳ್ಳುವುದಾಗಲಿ ಕಾನೂನುಬಾಹಿರ. ಆ ಕಾಯಿದೆಯ 9 ನೇ ಸೆಕ್ಷನ್ ಪ್ರಕಾರ ಈ ಕಾಯಿದೆ ಉಲ್ಲಂಘನೆಗೆ ಮೂರು ವರ್ಷ ಜೈಲು ಮತ್ತು ದಂಡ ವಿಧಿಸಲು ಅವಕಾಶವಿದೆ. ಹಾಗಾದರೆ ನಗರಾಭಿವೃದ್ಧಿ ಸಚಿವನಾಗಿದ್ದ ಡೀಕೇಶಿಗೆ ಇದೆಲ್ಲಾ ತಿಳಿದಿರಲಿಲ್ಲವೆ? ಖಂಡಿತಾ ತಿಳಿದಿತ್ತು, ಇಷ್ಟೆಲ್ಲಾ ತಿಳಿದ ನಂತರವೇ ಆ ಭೂಮಿಯನ್ನು ಆರಿಸಿಕೊಂಡಿದ್ದು. ಯಾಕೆಂದರೆ 2003 ರಲ್ಲಿ 1.62 ಕೋಟಿಗೆ ಖರೀದಿಸಿದ ಸದರಿ ಭೂಮಿಯ ಮಾರುಕಟ್ಟೆ ಬೆಲೆ ಈಗ ಸುಮಾರು 40 ಕೋಟಿ! ಇಂಥಾ ಭೂಮಿಯನ್ನು ಕಾನೂನುಬಾಹಿರವಾಗಿ ಡೀನೋಟಿಫೈ ಮಾಡಿಸಿಕೊಳ್ಳುವ ತಾಕತ್ತು ಇದ್ದಿದ್ದರಿಂದಲೇ ಈ ಭೂಮಿಗೆ ಆತ ಕೈಹಾಕಿದ್ದು.

ಈ ಹಗರಣ ಕೇವಲ ಡೀಕೇಶಿಯ ಯೋಗ್ಯತೆಯನ್ನು ಮಾತ್ರ ಬಚ್ಚಿಡುತ್ತಿಲ್ಲ, ಅದಕ್ಕಿಂತಲೂ ಹೆಚ್ಚಾಗಿ ಇದು ಮೂರೂಬಿಟ್ಟ ಬಿಜೆಪಿಯ ನೀತಿಗೆ ಒಂದ[...] ಅಪ್ಪಟ ನಿದರ್ಶನ. ಈ ಜಮೀನನ್ನು 2003ರಲ್ಲಿ ಕೊಂಡುಕೊಂಡಾಗ ಡೀಕೇ[...] ಸ್ವತಃ ಸಚಿವನಾಗಿದ್ದ, ಮೇಲಾಗಿ ಸಿಎಮ್ ಎಸ್ಸೆಮ್ ಕೃಷ್ಣರಿಗೆ ಪರಮಾ[...] ಬೇರೆ. ಆದರೂ ಎಸ್ಸೆಮ್ ಕೃಷ್ಣ ಈ ಭೂಮಿಯನ್ನು ಡೀನೋಟಿಫೈ ಮಾಡು[...] ಧೈರ್ಯ ಮಾಡಲಿಲ್ಲ, ನಂತರ ಮುಖ್ಯಮಂತ್ರಿಯಾ[...] ಧರಂಸಿಂಗ್ ಕೂಡ ಹಿಂದೇಟು ಹಾಕಿದ್ದರು. [...] ನಂತರ ಅಧಿಕಾರಕ್ಕೆ ಬಂದ ಕುಮಾರಸ್ವಾಮಿಗ[...] ಡೀಕೇಶಿಗೂ ಇದ್ದ ಹಗೆತನದ ಕಾರಣದಿಂದ ಡೀಕೇ[...] ಫೈಲ್ ಹಿಡಿದು ಹೋಗುವುದು ದೂರ[...] ಮಾತಾಯಿತು. ಹೀಗೆ ಡೀಕೇಶಿ ಒಳ್ಳೇಕಾಲ ಬರ[...] ಅಂತ ಕಾಯುತ್ತಲೇ ಇದ್ದ. ಡೀಕೇಶಿ ಪಾಲಿಗೆ ಅಂ[...] ಒಳ್ಳೇಕಾಲ ಬಂದೇಬಿಟ್ಟಿತು.

ಹೇಳಿಕೇಳಿ ದೋಚುವ ದಂಧೆಯಲ್ಲಿ ಹಿಂದಿ[...] ಎಲ್ಲಾ ದಾಖಲೆಗಳನ್ನು ಹೇಳಹೆಸರಿಲ್ಲದೆ ಮುರಿದ[...] ಹಾಕಿದ ಹೆಗ್ಗಳಿಕೆ ಬಿಜೆಪಿ ಸರ್ಕಾರದ್ದು. 5[...] ವರ್ಷಗಳ ಕಾಲ ಆಳಿದ ಕಾಂಗ್ರೆಸ್ಸಿಗರು ನಿ[...] ಮೊನ್ನೆ ಅಧಿಕಾರಕ್ಕೆ ಬಂದ ಕೇಸರಿ ಕೂಟದವ[...] ಸಾವಿರಾರು ಕೋಟಿಗಳನ್ನು ಬಾಚುತ್ತಿರುವುದನ[...] ಕಂಡು ದಂಗಾಗಿಹೋಗಿದ್ದಾರೆ. ತಮ್ಮ ಹಿಂದು[...] ಯನ್ನು ವಿಧಿಯಿಲ್ಲದೆ ಒಪ್ಪಿಕೊಂಡು ಜೋಲುಮೋ[...] ಹಾಕಿ ಅಡ್ಡಾಡುತ್ತಿದ್ದಾರೆ. ಆದರೆ ಇಂಥಾ ಪ್ರತಿಕೂ[...] ಪರಿಸ್ಥಿತಿಯಲ್ಲೂ ಡೀಕೇಶಿ ಮಾತ್ರ ಕೈಕಟ್ಟಿ ಕೂರಲಿಲ್ಲ. ಯಾವ ಪಾತ್ರೆಯಾದರೇನ[...] ತಮ್ಮ ಬೇಳೆ ಬೆಂದರೆ ಸಾಕು ಎಂಬುದು ಆತನ ನೀತಿ. ಇಂಥಾ ಯಡ್ಡಿ-ಡೀಕೇ[...] ಎಂಬ ದಗಾಕೋರರಿಬ್ಬರು ಯಾವ ಒಳ ಒಪ್ಪಂದಗಳನ್ನು ಕುದುರಿಸಿಕೊಂಡರೋ[...] ದೇವರೇ ಬಲ್ಲ. ಅಂತೂ ಡೀಕೇಶಿ ಜಮೀನಿಗೆ ಸತ್ತ ಮಾಜಿ ಮಾಲಿಕ[...] ಹೆಸರಿನಲ್ಲಿ ಯಡ್ಡಿ ಡೀನೋಟಿಫೈ ಮಾಡಿಕೊಟ್ಟಿದ್ದಾನೆ. ಹೀಗಾಗಿ ಸದ್ಯದ[...] ಈ ದಗಾದೋಸ್ತಿಗಳು ಜಂಟಿ-ಜೈಲು ಯಾತ್ರೆ ಕೈಗೊಳ್ಳುವ ವಿಪು[...] ಅವಕಾಶಗಳು ತೆರೆದುಕೊಂಡಿವೆ. ಪರಪ್ಪನ ಅಗ್ರಹಾರದಲ್ಲಿ ಇವರಿಬ್ಬರಿಗ[...] ಒಂದೇ ಕೋಣೆ ಸಿಕ್ಕರೆ ಕಷ್ಟಸುಖ ಹಂಚಿಕೊಳ್ಳೋಕಾದರೂ ಅನುಕೂ[...] ಆಗುತ್ತೆ.

ಶುಭಸ್ಯ ಶೀಘ್ರಂ ಅಂತ ನಾವೆಲ್ಲಾ ಆಶೀರ್ವದಿಸೋಣ.

✽ ದೊಡ್ಡಿಪಾಳ್ಯ ನರಸಿಂಹಮೂರ್ತಿ

ರೂಮ್‌ಮೇಟ್‌ಗಳ ಫೈಟ್



ಟಿ.ಜೆ.ಅಬ್ರಹಾಂ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ಹೂಡುವುದು ಹಾಗೂ ಇನ್ನಿತರ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿ. ಆದರೆ ವಿಪರ್ಯಾಸ ನೋಡಿ. ಈ ಅಬ್ರಹಾಂ ಮತ್ತು ಡೀಕೇಶಿ ಒಂದೇ ರೂಮಿನ ಸಹಪಾಠಿಗಳು. 1980ರ ದಶಕದಲ್ಲಿ ಬೆಂಗಳೂರಿನ ಹೆಸರಾಂತ ಆರ್.ಸಿ.ಕಾಲೇಜಿನಲ್ಲಿ ಪದವಿ ಶಿಕ್ಷಣ ಪಡೆದಿದ್ದರು. ಅಷ್ಟು ಮಾತ್ರವಲ್ಲ, ಈ ಇಬ್ಬರೂ ಕೂಡ ಕಾಲೇಜಿನಲ್ಲಿ ವಿದ್ಯಾರ್ಥಿ ನಾಯಕರಾಗಿದ್ದರು. ಅಬ್ರಹಾಂ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಆಗಿದ್ದರೆ, ಡಿ.ಕೆ.ಶಿವಕುಮಾರ್ ಸಹ ಅದೇ ಸಂದರ್ಭದಲ್ಲಿ ವಿದ್ಯಾರ್ಥಿ ನಾಯಕ ಆಗಿದ್ದರು. ಆದರೆ ಈ ಕೇಸಿನಲ್ಲಿ ಈ 'ಹಳೆಯ ಮಿತ್ರರು' ಈಗ ಅರ್ಜಿದಾರ ಮತ್ತು ಆರೋಪಿತರ ಸ್ಥಾನದಲ್ಲಿದ್ದಾರೆ. ಅಬ್ರಹಾಂ ಬಿಎಸ್‌ಪಿ ಟಿಕೆಟ್‌ನಿಂದ ವಿಧಾನ ಸಭೆಗೆ ಸ್ಪರ್ಧಿಸಿದ್ದರು. ಅಬ್ರಹಾಂ ಈ ಹಿಂದೆ ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಮ್.ಕೃಷ್ಣ ಧರಂಸಿಂಗ್ ಮತ್ತು ಎಚ್.ಡಿ. ಕುಮಾರಸ್ವಾಮಿ ಮುಂತಾದ ಬಿಜೆಪಿಯೇತರ ಮುಖ್ಯಮಂತ್ರಿಗಳ ವಿರುದ್ಧ ಭ್ರಷ್ಟಾಚಾರ ವಿರೋಧಿ ಕಾಯ್ದೆಯಡಿ ಮೊಕದ್ದಮೆ ಹೂಡಿದ್ದಾರೆ. ಸದರಿ ಕೇಸಿನಲ್ಲೂ ಸಹ ಅವರು ಅರ್ಜಿ ಸಲ್ಲಿಸಿದ್ದು ಡೀಕೇಶಿ ಒಬ್ಬರ ವಿರುದ್ಧವೇ. ಆದರೆ ಈ ಕೇಸಿನ ವಿಚಾರಣೆ ಕೈಗೆತ್ತಿಕೊಂಡ ಲೋಕಾಯುಕ್ತ ವಿಶೇಷ ಕೋರ್ಟ್‌ನ ನ್ಯಾಯಮೂರ್ತಿ ಎನ್.ಕೆ.ಸುಧೀಂದ್ರರಾವ್ ಅವರು ಒಂದು ಸ್ವಾಯೋಚಿತವಾದ ಪ್ರಶ್ನೆಯನ್ನೆತ್ತಿದರು. ವಾಸ್ತವದಲ್ಲಿ ಕಾನೂನುಬಾಹಿರವಾಗಿ ಈ ಡೀನೋಟಿಫಿಕೇಶನ್ ಮಾಡಿದ್ದು ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ, ಡೀಕೇಶಿ ವಿನಿದ್ದರೂ ಅರ್ಜಿದಾರನಷ್ಟೆ, ಹೀಗಿದ್ದರೂ ಯಡ್ಯೂರಪ್ಪನ ಹೆಸರನ್ನು ಏಕೆ ಕೈಬಿಡಲಾಗಿದೆ ಎಂಬುದು ಅವರ ಸಾತ್ವಿಕ ಪ್ರಶ್ನೆ. ನ್ಯಾಯಾಧೀಶರ ಇಂಥಾ ತೀಕ್ಷ್ಣವಾದ ಪ್ರಶ್ನೆಯ ನಂತರ ಅರ್ಜಿದಾರರಾದ ಅಬ್ರಹಾಂ ಯಡಿಯೂರಪ್ಪನನ್ನು ಆರೋಪಿ ನಂ.2 ಎಂಬುದಾಗಿ ಸೇರ್ಪಡೆ ಮಾಡಿದ್ದಾರೆ. ಹೀಗೇಕಾಯಿತು ಎಂಬುದನ್ನು ಅಬ್ರಹಾಂ ಅವರೇ ಹೇಳಬೇಕು.

ಸತ್ತವರ ಹೆಸರಿನಲ್ಲಿ ಸಮಾರಾಧನೆ

ರಾಜ್ಯದಲ್ಲಿ ಇದುವರೆಗೂ ಹಲವಾರು ಡಿನೋಟಿಫಿಕೇಷನ್‌ಗಳು ನಡೆದಿವೆ. ಆದರೆ ಯಡ್ಡಿ-ಡೀಕೇ[...] ದಗಾ ದೋಸ್ತಿ ನಡೆಸಿದ ಸದರಿ ಡೀನೋಟಿಫಿಕೇಶನ್‌ಗೆ ಪರಿಪಾಟಿಯಾದ ಅವ್ಯವಹಾರ ಮತ್ತೊಂದಿ[...] ಯಾಕೆಂದರೆ ಇದು ನಡೆದಿದ್ದು ಸತ್ತು ಸ್ವರ್ಗ ಸೇರಿರುವ ಒಬ್ಬ ವ್ಯಕ್ತಿಯ ಹೆಸರಿನಲ್ಲಿ!!


ಡೀಕೇಶಿ ಈ ಜಮೀನನ್ನು ಬಿ.ಕೆ.ಶ್ರೀನಿವಾಸನ್ ಎಂಬುವವರಿಂದ 2003ರಲ್ಲಿ ಖರೀದಿಸಿದರ[...] ಆಗಲೇ 82 ವರ್ಷದ ವಯೋವೃದ್ಧರಾಗಿದ್ದ ಶ್ರೀನಿವಾಸನ್ ಮರುವರ್ಷ ಅಂದರೆ 2004 ರಲ್ಲಿ ತೀರಿಕೊಂಡರು. ವಿಷಯ ಹೀಗಿರುವಾಗ ಮಾನ್ಯ ಅಭಿವೃದ್ಧಿ ಪ್ರಿಯ ಯಡ್ಡಿ ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ, ಸತ್ತ ವ್ಯಕ್ತಿಯ ಹೆಸರಿನಲ್ಲಿ 13-05-2010 ರಂದು ಡೀನೋಟಿಫಿಕೇಶನ್ ಆದೇ[ಶ] ಹೊರಡಿಸಿದ್ದಾನೆ. ಈ ಸಂಬಂಧ ಸರ್ಕಾರಿ ಗೆಜೆಟ್‌ನಲ್ಲೂ ಪ್ರಕಟವಾಗಿದೆ. ಜಮೀನಿನ ಮಾಲೀಕನಾ[...] ಡೀಕೇಶಿ ಹೆಸರಿನಲ್ಲಿ ಈ ಅವ್ಯವಹಾರ ನಡೆದರೆ ತಮ್ಮಿಬ್ಬರ ಒಳ ಒಪ್ಪಂದದ ಗುಟ್ಟು ರಟ್ಟಾಗುವುದೆಂದ[...] 6 ವರ್ಷದ ಹಿಂದೆ ತೀರಿಕೊಂಡ ಮಾಜಿ ಮಾಲಿಕನ ಹೆಸರಿನಲ್ಲಿ ಈ ದಂಧೆ ನಡೆದಿದೆ. ಎಲ[...] ಬಹಿರಂಗವಾದ ನಂತರ 'ಈ ಜಮೀನು 20 ವರ್ಷಗಳ ಹಿಂದೆಯೇ ಡೀನೋಟಿಫೈ ಆಗಿತ್ತು' ಎಂಬ ಹಸಿಹಸಿ ಸುಳ್ಳು ಹೇಳಿ ಮತದಾರರ ಮತ್ತು ನ್ಯಾಯಾಲಯದ ದಿಕ್ಕು ತಪ್ಪಿಸಲು ಡೀಕೇಶಿ ಹೆಣಗುತ್ತಿದ್ದಾನೆ. ಆದರೆ 'ಹುರುಳಿ ಹೊಲದಲ್ಲಿ ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸಿದ ಕಳ್ಳನಂತೆ' ಡೀಕೇಶಿ ಪರಿಸ್ಥಿತಿ ಮತ್ತಷ್ಟು ನಗೆಪಾಟಲಿಗೆ ಗುರಿಯಾಗಿದೆ. ರಾಜ್ಯವನ್ನಾಳುತ್ತಿರುವ ಇಂಥಾ ದಗಾ ದೋಸ್ತಿಗಳಿಗೆ ಯಾವ [...] ಕೊಡುವುದು ಸೂಕ್ತ?

ಬೊಮ್ಮಾಯಿ-ಸಿ.ಎಂ. ಜಂಟಿ ಕುಮ್ಮಕ್ಕು


ಕಟ್ಟೆಪುರದ ಕಾವೇರಿ ಕಾಮಗಾರಿ ಡಕಾಯಿತಿ

ಭೂಹೀನ ದಲಿತರು ಕಾವೇರಿಗಾಗಿ ಬೀದಿಗಿಳಿದರೆ ಫಲಾನುಭವಿ ಪುಂಡರು ಕಂಟ್ರಾಕ್ಟರ್ ಪರವಹಿಸಿ ದಾಳಿಗಿಳಿಯುತ್ತಾರೆ. ಪೊಲೀಸರು, ಸರ್ಕಾರ ಕಂಟ್ರಾಕ್ಟರ್ ಪರವಾಗೇ ನಿಷ್ಕ್ರಿಯರಾಗುತ್ತಾರೆ. ನೀರಾವರಿ ಮಂತ್ರಿಗೆ ಜಾಣ ನಿದ್ದೆಯಾದರೆ ಮುಖ್ಯಮಂತ್ರಿಗೆ ಅದೆಂಥದೋ ಕುರುಡು. 124 ಕೋಟಿ ರೂಪಾಯಿಗಳ ಕಾವೇರಿ ಕಾಮಗಾರಿ ಹಗರಣದಲ್ಲಿ ಆರೆಸ್ಸೆಸ್, ಬಿಜೆಪಿ ಇಲಾಖಾ ಇಂಜಿನಿಯರ್‌ಗಳು, ಮಂತ್ರಿ, ಮುಖ್ಯಮಂತ್ರಿ ಎಲ್ಲರೂ ಸಮಾನ ಭಾಗಿದಾರರು!

• ರಾ. ಸೋಮನಾಥ್



ಬಸವರಾಜ್ ಬೊಮ್ಮಾಯಿ



ಇತ್ತ ರಾಜಧಾನಿಯಲ್ಲಿ ಯಡ್ಡಿ-ಸದಾನಂದ ಗೌಡರ ಯುದ್ಧ ಕುರ್ಚಿ ಕಾಳಗ ತಾರಕಕ್ಕೇರಿರುವಾಗಲೇ ಅತ್ತ ಅರಕಲಗೂಡಿನ ರೈತರು ಬೀದಿಗಿಳಿದಿದ್ದಾರೆ. ಒಂದೆಡೆ ಕಾವೇರಿ ನದಿಯ ಜಲಗರ್ಭಕ್ಕೇ ಕನ್ನಹಾಕಿ ಪ್ರತಿನಿತ್ಯ ಲೋಡುಗಟ್ಟಲೆ ಮರಳು ದೋಚುವ ಮಾಫಿಯಾದ ಅಟ್ಟಹಾಸ, ಇನ್ನೊಂದೆಡೆ ಸಹಸ್ರಾರು ಎಕರೆಗಳಿಗೆ ನೀರುಣಿಸುವ ಕಾಮಗಾರಿ ಕರ್ಮಕಾಂಡ, ಮಗದೊಂದೆಡೆ ...ರೀ ನೀರಾವರಿ ಮಂತ್ರಿ ಬೊಮ್ಮಾಯಿಯ ಲಂಚದಾಹ,



ಹಲ್ಲೆಗೀಡಾದ ದಲಿತ ನಾಯಕ ರಾಜಶೇಖರ್

...ತ್ತೊಂದೆಡೆ ಇದೆಲ್ಲಕ್ಕೂ ಕಾರಣಕರ್ತನಾದವನ ಜೊತೆ ಮುಖ್ಯಮಂತ್ರಿಯ ಸಖ್ಯ ಮತ್ತು ಬೀದಿಗಿಳಿದ ಅರಕಲಗೂಡಿನ ರೈತರ ಅನಾಥ ಆರ್ತನಾದ-ಎಲ್ಲಾ ...ರಿಬಿಟ್ಟರೆ ಅದು 124 ಕೋಟಿ ರೂಪಾಯಿಗಳ ಹಗಲು ದರೋಡೆಯ ಕತೆಯಾಗುತ್ತದೆ.

ಮುಖ್ಯಮಂತ್ರಿ ಸದಾನಂದ ಗೌಡರು ಬರಗಾಲ ಮತ್ತು ರೈತ ಕಾಳಜಿ ಬಗ್ಗೆ ಪುಟಗಟ್ಟಲೆ ಜಾಹೀರಾತು, ಪುಗಸಟ್ಟೆ ಭಾಷಣ ಮಾಡುತ್ತಲೇ ಇದ್ದಾರೆ. ಆದರೆ ವಾಸ್ತವದಲ್ಲಿ ಬಿಜೆಪಿಯ ರೈತ ಕಾಳಜಿಯ ಅಸಲಿಯತ್ತೇ ಬೇರೆಯಿದೆ. ...ದಕ್ಕೆ ಹಾಸನ ಜಿಲ್ಲೆ ಅರಕಲಗೂಡಿನಲ್ಲಿ ಕಾವೇರಿ ನದಿಗೆ ಕಟ್ಟಿದ ಕಟ್ಟೆಪುರ ಅಣೆಕಟ್ಟೆಯ ದುರಂತವೊಂದೇ ಸಾಕು.


ಅರಕಲಗೂಡು ತಾಲ್ಲೂಕು ರಾಮನಾಥಪುರ ಹೋಬಳಿಯ ಕಟ್ಟೆಪುರದಲ್ಲಿ ಕಾವೇರಿ ನದಿಗೊಂದು ಅಣೆಕಟ್ಟೆಯಿದೆ. ಅದು ಇವತ್ತಿಗೆ ನೂರು ವರ್ಷಗಳ ಹಿಂದೆ ಮೈಸೂರು ರಾಜರು ನಿರ್ಮಿಸಿದ ಕಾವೇರಿಯ ಮೊದಲ ಅಣೆಕಟ್ಟು, ಅದಕ್ಕೆ ಕೃಷ್ಣರಾಜ ಅಣೆಕಟ್ಟೆಯೆನ್ನುತ್ತಾರೆ. ಇದರ ಎಡದಂಡೆ ಹೆಚ್ಚೂಕಮ್ಮಿ 40 ಕಿ.ಮೀ. ಉದ್ದಕ್ಕೆ ಮೈಸೂರು ಜಿಲ್ಲೆಯ ಕೆ.ಆರ್. ನಗರದ ಚುಂಚನಕಟ್ಟೆಯ ...ನಕ ಹರಿಯುತ್ತದೆ. ಬಲದಂಡೆ ಸರಿಸುಮಾರು 80 ಕಿ.ಮೀ.ವರೆಗೆ ಕೆ.ಆರ್. ನಗರದ ಸಾಲಿಗ್ರಾಮ ...ಲ್ಲರಾಜಪಟ್ಟಣ, ಮಲ್ಲಿನಾಥಪುರದ ಮೂಲಕ ಹಾಸಿ ...ಸ್ತೂರು ಗೇಟ್‌ತನಕ ವ್ಯಾಪಿಸಿದೆ. ಏನಿಲ್ಲವೆಂದರೂ ಅರಕಲಗೂಡು, ಕೆ.ಆರ್. ನಗರ ಸುತ್ತಮುತ್ತಲ 20 ಸಾವಿರಕ್ಕೂ ಅಧಿಕ ಎಕರೆಗಳಷ್ಟು ಕೃಷಿ ಭೂಮಿಗೆ ಕಟ್ಟೆಪುರ ...ಯ ಎಡ ಮತ್ತು ಬಲದಂಡೆಗಳೇ ಜೀವನಾಧಾರ.

ನೂರು ವರ್ಷಗಳಷ್ಟು ಹಳೆಯ ಈ ಎರಡೂ ...ಲೆಗಳ ಆಧುನೀಕರಣಕ್ಕೆಂದು 124 ಕೋಟಿ ...ಕಾಮಗಾರಿಗಳ ಯೋಜನೆ ರೂಪಿಸಿದ್ದು ಭಾರೀ

ಲೂಟಿಯ ಮೊತ್ತ 124 ಕೋಟಿ

ನೀರಾವರಿ ಮಂತ್ರಿ ಬಸವರಾಜ್ ಬೊಮ್ಮಾಯಿ. ಸದಾನಂದ ಗೌಡರು ಮುಖ್ಯಮಂತ್ರಿಯಾಗುವ ಹೊತ್ತಿಗೆ ಟೆಂಡರ್ ಪ್ರಕ್ರಿಯೆ ಚಾಲ್ತಿಗೆ ಬಂತು. ಆಗ ಉದ್ಭವಿಸಿದವನು ಕುಂದಾಪುರದ ಖದೀಮ ಕಂಟ್ರಾಕ್ಟರ್ ಸತ್ಯನಾರಾಯಣ ಶೆಟ್ಟಿ. ಈತ ಎಸ್.ಎನ್.ಸಿ. ಪವರ್ ಕಾರ್ಪೊರೇಷನ್ನಿನ ಧಣಿ. ಮೂಲತಃ ಉತ್ತರ ಕನ್ನಡ ಜಿಲ್ಲೆ ಕುಮಟಾದ ಮಾಜಿ ಕಾಂಗ್ರೆಸ್ ಶಾಸಕ ಮೋಹನ್ ಶೆಟ್ಟಿಯ ಸಮೀಪದ ಸಂಬಂಧಿಯಾದ ಸತ್ಯನಾರಾಯಣ ಶೆಟ್ಟಿಯನ್ನು ಕಾಂಟ್ರಾಕ್ಟ್ ದಂಧೆಗೆ ಕರೆತಂದವನು ಕುಂದಾಪುರದ ನಟೋರಿಯಸ್ ಕಂಟ್ರಾಕ್ಟರ್ ಚಾರ್ಮಕ್ಕಿ ಸೀತಾರಾಮ ಶೆಟ್ಟಿ. ಈತ ಆರೆಸ್ಸೆಸ್ ಅಧಿಪತಿ ಕಲ್ಲಡ್ಕ ಭಟ್ಟನ ಚೇಲಾ. ತನ್ಮೂಲಕ ಸಿ.ಎಂ. ಸದಾನಂದ ಗೌಡರಿಗೂ ಈತ ಗಳಸ್ಯ ಕಂಠಸ್ಯ.

ಈ ಎಲ್ಲಾ ಹಿನ್ನೆಲೆಯಲ್ಲೇ ಎಸ್‌ಎನ್‌ಸಿ ಪವರ್ ಕಾರ್ಪೊರೇಷನ್ನಿಗೆ ಕಟ್ಟೆಪುರ ಎಡದಂಡೆ ಮತ್ತು ಬಲದಂಡೆ ಆಧುನೀಕರಣದ 124 ಕೋಟಿ ರೂಪಾಯಿಗಳ ಕಾಂಟ್ರಾಕ್ಟ್ ದಕ್ಕುವುದಕ್ಕೂ ಬಿಜೆಪಿಗೂ ಮತ್ತು ಕಳಪೆ ಕಾಮಗಾರಿಗೂ ಸಂಬಂಧವಿದೆ. ಕಾವೇರಿ ಜಲಾಶಯದ ಇಂಜಿನಿಯರ್‌ಗಳಿಗೆ ಕಳಪೆ ಕಾಮಗಾರಿಗಳ ವಿರುದ್ಧ ಈಗಾಗಲೇ ಒಂದು ಡಜನ್ನಿಗೂ ಅಧಿಕ ದೂರುಗಳು ಬಂದಿವೆ. ಇಷ್ಟಾಗ್ಯೂ 124 ಕೋಟಿಯ ಕಾಮಗಾರಿ ದರೋಡೆಯ ವಿರುದ್ಧ ಸರ್ಕಾರದ ಯಾರೊಬ್ಬರೂ ಚಕಾರವೆತ್ತುತ್ತಿಲ್ಲ.




ಕಟ್ಟೆಪುರ ಅಣೆಕಟ್ಟೆ ಹೇಳಿಕೇಳಿ ನೂರು ವರ್ಷಗಳಷ್ಟು ಹಳೆಯದು ಮತ್ತು ಮೈಸೂರು ಅರಸರು ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿದ ಮೊಟ್ಟಮೊದಲು ಅಣೆಕಟ್ಟು. ಇದರ ಎರಡೂ ನಾಲೆಗಳ ಒಟ್ಟು ಉದ್ದವೇ ಸರಿಸುಮಾರು 127 ಕಿ.ಮೀ.ಗಳಷ್ಟಾಗುತ್ತದೆ. 2011 ರ ಮೇ ತಿಂಗಳಲ್ಲಿ ಎರಡೂ ಕಾಮಗಾರಿಗಳ ಆಧುನೀಕರಣಕ್ಕೆಂದು ನೀರಾವರಿ ಇಲಾಖೆ ಟೆಂಡರ್ ಕರೆಯುತ್ತದೆ. ನೀರಾವರಿ ಮಂತ್ರಿ ಬೊಮ್ಮಾಯಿಯ ಕೈಚಳಕವೋ ಅಥವಾ ಆರೆಸ್ಸೆಸ್ ಧೂರ್ತರ ದುರಾಶೆಯೋ ಎಲ್ಲಾ ಕಾನೂನು ಕಟ್ಟಳೆಗಳನ್ನು ಧಿಕ್ಕರಿಸಿ ಸತ್ಯನಾರಾಯಣ ಶೆಟ್ಟಿಯ ಎಸ್‌ಎನ್‌ಸಿ ಪವರ್ ಕಾರ್ಪೊರೇಷನ್ನಿಗೆ 124 ಕೋಟಿ ಮೊತ್ತದ ಕಾಮಗಾರಿಯನ್ನು ವಹಿಸಲಾಗುತ್ತದೆ.

ಟೆಂಡರ್ ನಿಯಮಾವಳಿಯ ಪ್ರಕಾರವೇ ನಾಲೆಗೆ 8 ಸೆಂಟಿಮೀಟರ್‌ನ ಸಿಮೆಂಟ್ ಕಾಂಕ್ರಿಟ್ ಹಾಕಬೇಕು. ಅದಕ್ಕೂ ಮುನ್ನ ಕಾಂಕ್ರಿಟ್ ಗೋಡೆಗೆ ಆಧಾರವಾಗಿ ಕಲ್ಲುಚಪ್ಪಡಿಗಳನ್ನು ಕಟ್ಟಬೇಕು. ಸಿಮೆಂಟ್ ಮತ್ತು ಗಾರೆಗೆ ಇಂತಿಷ್ಟೇ ಆಧಾರದಲ್ಲಿ ಮರಳು, ಜಲ್ಲಿ ಸಿಮೆಂಟನ್ನು ಬೆರೆಸಬೇಕೆಂಬ ನಿಯಮವೂ ಇತ್ತು. ಆದರೆ ಇದೆಲ್ಲವೂ ಕೇವಲ ಕಾಗದ ಪತ್ರಗಳಲ್ಲಷ್ಟೇ ಎಂಬುದು ಬಡರೈತರಿಗೆಲ್ಲಿ ಗೊತ್ತಾಗಬೇಕು?

ಹಕೀಕತ್ತೇನೆಂದರೆ ಎಸ್‌ಎನ್‌ಸಿ ಪವರ್ ಕಾರ್ಪೊರೇಷನ್ ಎಂಬುದೇ ಭೋಗಸ್ ಕಂಪೆನಿ. ಇದರ ಧಣಿ ಸತ್ಯನಾರಾಯಣ ಶೆಟ್ಟಿಗೆ ಈ ಮಟ್ಟದ ಕಾಮಗಾರಿಯ ಅನುಭವ, ಅರ್ಹತೆಯೇ ಇರಲಿಲ್ಲ. ಮಂತ್ರಿ ಬೊಮ್ಮಾಯಿ, ಆರೆಸ್ಸೆಸ್ ವರಿಷ್ಠರು, ಇಲಾಖಾ ಮುಖ್ಯಸ್ಥರೆಲ್ಲರಿಗೂ ಶಕ್ತ್ಯಾನುಸಾರ ರೊಕ್ಕ ತಿನ್ನಿಸಿಯೇ ಕಾಂಟ್ರಾಕ್ಟ್ ಹಿಡಿದ ಸತ್ಯನಾರಾಯಣ ಶೆಟ್ಟಿ ಇದರ ಉಸ್ತುವಾರಿಗೆಂದು ಸುಬ್ರಹ್ಮಣ್ಯ ಎಂಬ ಖದೀಮನನ್ನು ನೇಮಿಸಿ ಕಂಡಕಂಡ ಭೋಗಸ್ ಬಿಲ್ ಕಂಟ್ರಾಕ್ಟರುಗಳನ್ನೆಲ್ಲ ಹಿಡಿದು ಕಮಿಷನ್ ಆಧಾರದ ಮೇಲೆ ಉಪಗುತ್ತಿಗೆ ವಹಿಸಿಕೊಟ್ಟ.

ಹೀಗೆ ಸಬ್ ಕಾಂಟ್ರಾಕ್ಟ್ ಹಿಡಿದು ಲೋಭಿ ಕಂಟ್ರಾಕ್ಟರ್‌ಗಳಿಗೆ ಗುಣಮಟ್ಟದ ಕಾಮಗಾರಿಗಿಂತಲೂ ಕೊಟ್ಟ ಕಮಿಷನ್, ನೀಡಿದ ಲಂಚ ಮತ್ತು ಹಾಕಿದ ಬಂಡವಾಳವನ್ನು ಗೆಬರಿಕೊಳ್ಳುವ ದುರಾಶೆ. ಚಪ್ಪಡಿ ಕಲ್ಲುಗಳನ್ನೇ ಹಾಕಲಿಲ್ಲ. 8 ಸೆಂಟಿಮೀಟರ್ ಬದಲಿಗೇ ಮೂರು ಸೆಂಟಿಮೀಟರ್‌ನ ಕಾಂಕ್ರಿಟ್ ತೇಪೆ



ಕೊಚ್ಚಿ ಹೋದ ಬಲದಂಡೆ

ಹಾಕಿದ್ದಾರೆ. ಮರಳು ಸಿಮೆಂಟಿನಲ್ಲೂ ಕಮ್ಮಿ ಹಿಡಿದು, ಕೆಂಪು ಮಣ್ಣಿಗೆ ಬದಲು ಪುಸುಕಲು ಕಪ್ಪು ಮಣ್ಣು ಹೊದಿಸಿದ್ದೇ ಸಿಮೆಂಟಿನ ತೇಪೆ ಹಾಕಿದ್ದೇ ಕಾಮಗಾರಿಯ ಬಿಲ್ ಜಡಿದು ಕೈತೊಳೆದುಕೊಂಡರು.

ಇಲ್ಲಿಗೆ ತಿಂಗಳ ಹಿಂದೆ ಈ ರೀತಿ ಆಧುನೀಕರಣಗೊಂಡ ನಾಲೆಗೆ ಅಣೆಕಟ್ಟೆಯಿಂದ ನೀರು ಬಿಟ್ಟದ್ದೇ ಬಂತು. ನೂರು ವರ್ಷಗಳಿಂದ ಬಾಳಿಕೆ ಬಂದಿದ್ದ ನಾಲೆಗೆ ನೀರು ನುಗ್ಗಿದ್ದೇ ತಡ, ಹಾಕಿದ ಕಾಂಕ್ರಿಟ್ಟು, ಅಡ್ಡಗಟ್ಟೆ

▶9

ದಿಟ್ಟ ತಹಶೀಲ್ದಾರ್ ಜಗದೀಶ್ ಮತ್ತು ಮರಳು ಮಾಫಿಯಾ

ಎಸ್‌ಎನ್‌ಸಿ ಪವರ್ ಕಾರ್ಪೊರೇಷನ್‌ನ ಧಣಿ ಸತ್ಯನಾರಾಯಣ ಶೆಟ್ಟಿಯ ದುರಾಶೆ, ದುಂಡಾವರ್ತಿ ಕೇವಲ 124 ಕೋಟಿಯ ಕಾಮಗಾರಿಗಷ್ಟೇ ಸೀಮಿತವಾಗಿಲ್ಲ, ಇಡೀ ಕಟ್ಟೆಪುರ ಅಣೆಕಟ್ಟೆ ಮತ್ತು ಕಾವೇರಿ ನದಿಗೇ ಕಂಟಕವಾಗುವಷ್ಟು ಅಪಾಯ ತಂದಿಟ್ಟಿದ್ದಾನೆ ಕಂಟ್ರಾಕ್ಟರ್ ಶೆಟ್ಟಿ.

ತನ್ನ ಕಾಮಗಾರಿಗೆ ಬೇಕಾದ ಮರಳನ್ನು ಈತ ಖರೀದಿಸಿ ತರಬೇಕು ಅಥವಾ ಗಣಿ ಇಲಾಖೆಗೆ ಶುಲ್ಕ ಕಟ್ಟಿಯೇ ಮರಳೆತ್ತಬೇಕು. ಆದರೆ ಎಸ್‌ಎನ್‌ಸಿ ಪವರ್ ಕಾರ್ಪೊರೇಷನ್ ನೇರವಾಗಿ ಕಟ್ಟೆಪುರದ ಕೃಷ್ಣರಾಜ ಅಣೆಕಟ್ಟೆಗೇ ಜೆಸಿಬಿಗಳನ್ನು ನುಗ್ಗಿಸಿ ಮರಳು ದೋಚತೊಡಗಿತು. ಜೊತೆಗೆ ಡಜನ್ನುಗಟ್ಟಲೆ ತೆಪ್ಪಗಳನ್ನು ಜಲಾಶಯಕ್ಕಿಳಿಸಿ ಲೋಡುಗಟ್ಟಲೇ ಮರಳು ಸಾಗಿಸಿ ಅದನ್ನು ತನ್ನ ಅಡ್ಡೆಯಲ್ಲಿ ರಾಶಿ ಹಾಕಿಕೊಂಡಿತು. ಹೀಗೆ ದೋಚಿ ತಂದ ಮರಳನ್ನು ಬಟ್ಟಿಯಾಗಿ ತನ್ನ ಕಾಮಗಾರಿಗೆ ಬಳಸಿದ್ದೂ ಅಲ್ಲದೆ ಅರ್ಧಕ್ಕರ್ಧವನ್ನು ಅಡಿಗೆ 21 ರೂಪಾಯಿಯಂತೆ ಮರಳು ಮಾಫಿಯಾಕ್ಕೆ ಮಾರಿಕೊಂಡಿತು.

ಮೊದಲೇ ಅಕ್ರಮ ಮರಳು ದರೋಡೆ, ಜೊತೆಗೆ ಶೆಟ್ಟಿ ಮರಳನ್ನು ಮಾರಿಕೊಳ್ಳುವುದು ಬೇರೆ. ಇದು ಗೊತ್ತಾಗಿದ್ದೇ ಅರಕಲಗೂಡಿಗೆ ತಹಶೀಲ್ದಾರ್ ಆಗಿದ್ದ ಜಗದೀಶ್ ಕಟ್ಟೆಪುರ ಅಣೆಕಟ್ಟೆಗೇ ನುಗ್ಗಿ ಮರಳು ದೋಚುತ್ತಿದ್ದ



ಖದೀಮರನ್ನು ಬಂಧಿಸಿದ್ದಾರೆ. ತಂದಿದ್ದ ಲಾರಿ, ತೆಪ್ಪಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ. ಇನ್ನೇನು ತೆಪ್ಪಗಳನ್ನೆಲ್ಲ ಪುಡಿಗೈದು ಅದಕ್ಕೆ ಬೆಂಕಿಹಚ್ಚಬೇಕೆನ್ನುವಷ್ಟರಲ್ಲಿ ಮರಳು ಕಳ್ಳರ ನಾಯಕನೊಬ್ಬ ತನ್ನ ಮೊಬೈಲನ್ನು ತಂದು ಜಗದೀಶ್‌ರಿಗೆ ಕೊಟ್ಟು ಎಮ್ಮೆಲ್ಲೇ ಮಾತಾಡ್ತಾರಂತೆ ನೋಡಿ ಎಂದರೆ ಜಗದೀಶ್ 'ನಾನಿಲ್ಲಿ ಬಂದಿರೋದು ಡ್ಯೂಟಿ ಮಾಡೋದಕ್ಕೇ ಹೊರತು ನಿನ್ನ ಮೊಬೈಲಿನಲ್ಲಿ ಮಾತಾಡೋದಕ್ಕಲ್ಲ.....!' ಎಂದು ಝಾಡಿಸಿದ್ದಾರೆ.

ಇದಾಗಿ ಮೂರೇ ದಿನಕ್ಕೆ ಪ್ರಾಮಾಣಿಕ ತಹಶೀಲ್ದಾರ್ ಜಗದೀಶ್ ಎತ್ತಂಗಡಿ ಆಗಿಬಿಟ್ಟರು. ಅಲ್ಲಿಗೆ ಅಕ್ರಮ ಮರಳು ಮಾಫಿಯಾ ಬೆನ್ನಿಗೇ ಸರ್ಕಾರ ನಿಂತಿದ್ದು ಸಾಬೀತಾಗಿತ್ತು. ಪ್ರತಿನಿತ್ಯ ನೂರಾರು ಲೋಡು ಮರಳು ದೋಚಲ್ಪಡುತ್ತದೆ. ಸರ್ಕಾರ ಮರಳು ಮಾಫಿಯಾ ಪಾಲಿಗೆ ನಿಷ್ಕ್ರಿಯಗೊಂಡಿದೆ. ಒಂದು ಮೂಲದ ಪ್ರಕಾರ ಅಡಿ ಮರಳೊಂದಕ್ಕೆ ಕನಿಷ್ಠ ಐದು ರೂ.ನಂತೆ ದಿನವೊಂದಕ್ಕೆ 2.80 ಲಕ್ಷ ರೂಪಾಯಿ ಭ್ರಷ್ಟರ ಜೇಬು ಸೇರುತ್ತದೆ.

ಕಾವೇರಿ ತಾಯಿಗೆ ಉಳಿಗಾಲವುಂಟೆ? ✤

▶2


ಸಾಕಷ್ಟು ವ್ಯತ್ಯಾಸಗಳಿವೆ.

ಆದರೆ ಅದು ಏನೇ ಇದ್ದರೂ ಈ ಪರಾಮರ್ಶೆಯಲ್ಲಿ ಎದ್ದು ಕಾಣುವ ಸಂಗತಿಯೇನೆಂದರೆ ಅವರ ದೃಷ್ಟಿಕೋನದಲ್ಲಿ ಹಾಗೂ ಅವರ ಪಾತ್ರದಲ್ಲಿ ಬಂದ ಬದಲಾವಣೆಗಳೆಲ್ಲವೂ ದಮನಿತ ಜನತೆಯ ಅದರಲ್ಲೂ ನಿರ್ದಿಷ್ಟವಾಗಿ ದಲಿತರ ವಿಮೋಚನೆಯ ಬಗ್ಗೆ ಅವರಿಗಿದ್ದ ಅಚಲ ಬದ್ಧತೆಯಿಂದಲೇ ಚಾಲನೆಗೊಂಡಿದ್ದವೆಂಬುದು ನಿರ್ವಿವಾದ. ತಾವು ಹೋರಾಡುತ್ತಿದ್ದ ಸಮಸ್ಯೆಯ ನಿವಾರಣೆಯನ್ನು ಸಾಧಿಸಲು ಅಗತ್ಯವಿದ್ದ ಸೂಕ್ತ ಉಪಕರಣಗಳು ಅವರ ಬಳಿ ಇಲ್ಲದೇ ಇದ್ದಿರಬಹುದು. ಸಮಾಜಶಾಸ್ತ್ರದ ವಿದ್ವತ್ ಲೋಕದಲ್ಲಿ ಬಳಸುವ ಉಪಕರಣಗಳನ್ನು ಬಳಸಿಕೊಂಡೇ ಅವರು ಇತಿಹಾಸವನ್ನು ಪರಿಶೀಲಿಸಿದರು. ವಿಪರ್ಯಾಸವೆಂದರೆ ಯಾವ ಉಪಕರಣಗಳು ಆಳುವವರ್ಗಗಳ ಸೇವೆಗೆಂದೇ ರೂಪುಗೊಂಡಿವೆಯೋ ಅವೇ ಉಪಕರಣಗಳನ್ನು ಬಳಸಿಕೊಂಡು ಅಂಬೇಡ್ಕರ್‌ರವರು ವ್ಯವಸ್ಥೆಯನ್ನು ನಾಶ ಮಾಡಲು ಯತ್ನಿಸಿದರು. ಅವರಿಗಿದ್ದ ಶೈಕ್ಷಣಿಕ ಹಿನ್ನೆಲೆ ಅವರನ್ನು ಮಾನವ ಇತಿಹಾಸವು ಒಂದು ಅಂತರ್ಗತವಾಗಿ ತರ್ಕಬದ್ಧವಾಗಿರುವ ಸರಣಿಯೆಂದು ಅರ್ಥಮಾಡಿಕೊಳ್ಳಲು ಸಹಾಯ ಮಾಡು ವಂತಿರಲಿಲ್ಲ, ಅವರು ಇತಿಹಾಸವನ್ನು ಮಾನವ ನಿರ್ಮಿತ ಘಟನಾವಳಿಗಳ ಸರಪಳಿಯೆಂದೂ ಅರ್ಥಮಾಡಿಕೊಂಡರು. ಅದಕ್ಕೆ ಒಂದು ತರ್ಕವನ್ನು ಅವರು ಆರೋಪಿಸಿದರೂ ಅದರ ಮೂಲವನ್ನು ಹೊರಗಡೆಯೆ ಹುಡುಕಿದರು.

ಗತಿತರ್ಕ ರಹಿತವಾದ ಪರಿಹಾರ: ಪ್ರಭುತ್ವ ಮತ್ತು ಧರ್ಮ

ಒಂದು ರೀತಿಯಲ್ಲಿ ನೋಡಿದರೆ ಬಾಬಾಸಾಹೇಬ್ ಅಂಬೇಡ್ಕರ್‌ರವರು ಬುದ್ಧ ಧಮ್ಮದ ಮೂಲ ಸೂತ್ರಗಳಲ್ಲಿರುವ ಕ್ಷಣಿಕವಾದ ಅಥವಾ ಅನಿತ್ಯವಾದವನ್ನು ಇಡಿಯಾಗಿ ಅರಗಿಸಿಕೊಂಡಿದ್ದರೆಂದು ಕಾಣುತ್ತದೆ. ಹೀಗಾಗಿಯೇ ಅವರು ತಮ್ಮ ಚಿಂತನಾಧಾರೆಯಲ್ಲಿ ಹಾಗೂ ಅಭಿಪ್ರಾಯಗಳಲ್ಲಿ ಏಕಸೂತ್ರತೆಯನ್ನು ಉಳಿಸಿಕೊಳ್ಳಲೂ ನಿರಾಕರಿಸಿದ್ದಂತೆ ತೋರುತ್ತದೆ. ಈ ಸಿದ್ಧಾಂತವು ಪ್ರತಿಯೊಂದು ಪ್ರತಿಕ್ಷಣವೂ ಬದಲಾಗುತ್ತಿರುತ್ತದೆ ಹಾಗೂ ವಸ್ತುಗಳೂ ಹಾಗು ಸಂಗತಿಗಳೂ ನಿರಂತರವಾಗಿ ಉದ್ಭವಗೊಳ್ಳುತ್ತಿರುತ್ತವೆ ಎಂದು ಪ್ರತಿಪಾದಿಸುತ್ತದೆ. ಈ ನಿರಂತರ ಚಲನಶೀಲ ಭೌತಿಕ ಪ್ರಪಂಚಕ್ಕೆ ಸಂವಾದಿಯಾಗಿ ಬೌದ್ಧಿಕ ಪ್ರಕ್ರಿಯೆಗಳು ಚಲನಶೀಲವಾಗಿಯೇ ಇರಬೇಕೆಂದು ಪ್ರತಿಪಾದಿಸುತ್ತದೆ. ಹೀಗಾಗಿ ಬದಲಾದ ಪರಿಸ್ಥಿತಿಗೆ ತಕ್ಕಂತೆ ತಮ್ಮ ಆಲೋಚನೆಗಳನ್ನು ಹಾಗೂ ತಮ್ಮ ಸಮರ ತಂತ್ರಗಳನ್ನು ಬದಲಿಸಿಕೊಳ್ಳಲು ಅವರೆಂದೂ ಹಿಂದೆ-ಮುಂದೆ ನೋಡುತ್ತಿರಲಿಲ್ಲ. ಮತ್ತೊಂದು ರೀತಿಯಲ್ಲಿ ನೋಡಿದಲ್ಲಿ ಈ ಬದಲಾವಣೆಗಳನ್ನು ನಿಯಂತ್ರಣ ನಡೆಸುವ ಕೇಂದ್ರಬಿಂದುವಿನ ಜೊತೆ ವ್ಯಕ್ತಿಗೆ ಇರುವ ಸಂಬಂಧಗಳಂತೆಯೂ ಅರ್ಥ ಮಾಡಿಕೊಳ್ಳಬಹುದು. ಸಾಮಾನ್ಯವಾಗಿ ಆಚರಣೆ ಹಾಗೂ ಚಿಂತನೆಗಳಲ್ಲಿ ನಿರಂತರತೆಯೆಂಬುದು ತನ್ನ ಸುತ್ತಮುತ್ತಲಿನ ಪರಿಸರವನ್ನು ನಿಯಂತ್ರಿಸುವ ಕೇಂದ್ರಬಿಂದುವಿನಿಂದ ಆ ವ್ಯಕ್ತಿ ಎಷ್ಟು ದೂರವಿದ್ದಾನೆ ಎಂಬುದರ ಜೊತೆ ವಿಲೋಮ ಸಂಬಂಧವನ್ನೇ ಹೊಂದಿರುತ್ತದೆ. ಅಂದರೆ ಆ ಸುತ್ತಮುತ್ತಲಿನ ಪರಿಸರವನ್ನು ನಿಯಂತ್ರಿಸುವ ನಿಯಂತ್ರಣ ಬಿಂದುವಿಗೆ ಆ ವ್ಯಕ್ತಿ ಹತ್ತಿರವಿದ್ದರೆ ಆಚರಣೆ ಹಾಗೂ ಚಿಂತನೆಯಲ್ಲಿ ನಿರಂತರತೆ ಜಾಸ್ತಿ, ಇಲ್ಲದಿದ್ದಲ್ಲಿ ಕಡಿಮೆ. ತನ್ನ ಸುತ್ತಮುತ್ತಲಿನ ಪರಿಸರದ ಮೇಲೆ ಅಂಬೇಡ್ಕರ್‌ಗೆ ಹೆಚ್ಚೂ ಕಡಿಮೆ ಯಾವುದೇ ನಿಯಂತ್ರಣವಿರಲಿಲ್ಲ, ಅವರು ಲಭ್ಯ ಪರಿಸರದಲ್ಲಿ ಸತತವಾಗಿ ತಮಗಾಗಿ ಒಂದು ಅವಕಾಶವನ್ನು ನಿರ್ಮಿಸಿಕೊಳ್ಳಬೇಕಿತ್ತು ಮತ್ತು ಸಂದರ್ಭವನ್ನು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಬಳಸಿಕೊಳ್ಳಲು ಸದಾ ತಂತ್ರಗಳನ್ನು ಹೆಣೆಯುತ್ತಲೇ ಇರಬೇಕಿತ್ತು. (ಇಂತಹ ಸಂದರ್ಭಗಳ ಗತಿಯನ್ನು ವಿವಿಧ ವಿರೋಧಿ ಬಣಗಳಲ್ಲಿದ್ದ ಶಕ್ತಿಗಳೇ ಪ್ರಭಾವಿಸುತ್ತಿದ್ದರು.) ಅಂಬೇಡ್ಕರ್ ರೂಪಿಸಿದ್ದ ಹೋರಾಟಗಳ ಚೌಕಟ್ಟು ಈ ಗತಿತರ್ಕಕ್ಕೆ ಸದಾ ಸ್ಪಂದಿಸಬೇಕಿತ್ತು. ಅಂಬೇಡ್ಕರ್ ಚಿಂತನೆಯ ಪ್ರಧಾನವಾದ ಅಂಶವೇನೆಂದರೆ ಚಲನಶೀಲ ತರ್ಕ. ಅದನ್ನೇ ಅವರು ನಿರಂತರವಾಗಿ ಬದಲಾಗುತ್ತಿದ್ದ ಸಂದರ್ಭಗಳನ್ನು ಗ್ರಹಿಸಲೂ ಹಾಗೂ ಅದನ್ನು ದಮನಿತ ಜನತೆಯ ಪರವಾಗಿ ಬಳಸಿಕೊಳ್ಳಲು ಸೂಕ್ತವಾದ ತಂತ್ರವನ್ನು ರೂಪಿಸಲು ಬಳಸುತ್ತಿದ್ದರು. ಹೀಗಾಗಿ ಅಂಬೇಡ್ಕರ್ ಅವರನ್ನು ಒಂದು ಸ್ಥಿರ, ನಿಶ್ಚಲ ಪರಿಭಾಷೆಯಲ್ಲಿ ಹಿಡಿದಿಡಲಾಗುವುದಿಲ್ಲ, ಅಂಬೇಡ್ಕರ್ ಎಂದು ನಾವು ಹಿಡಿದಿಡುವ ಪ್ರತಿಮೆಯು ಅದರ ಅಂತಃಸತ್ವವಾದ ಈ ಚಲನಶೀಲತೆಯನ್ನು ಪ್ರತಿಫಲಿಸಬೇಕಾಗುತ್ತದೆ. ಆದರೆ ಇದು ಸಾಧ್ಯವಾಗುವ ವಿಷಯವಲ್ಲ, ಅದರ ಬದಲಿಗೆ ಅವರ ಎಲ್ಲಾ ಕೃತಿಗಳಲ್ಲಿ ಅಂತರ್ಗತವಾಗಿರುವ ದರ್ಶನಗಳನ್ನು ಅರ್ಥೈಸಿಕೊಂಡು ಮತ್ತು ಅವರ ಇಡೀ ಜೀವನದ ತಾತ್ಪರ್ಯವನ್ನು ಗ್ರಹಿಸಿಕೊಂಡು ಒಂದು ಸೂಕ್ತ ಪ್ರತಿಮೆಯನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಅಂಬೇಡ್ಕರ್‌ರ ಈ ಪ್ರತಿಮೆಯು ನಮಗೆ ಚಿರಪರಿಚಿತವಾಗಿರುವ ಅಂಬೇಡ್ಕರ್‌ರವರ ಪ್ರತಿಮೆಯಾಗಿಲ್ಲದಿದ್ದರೂ ಅದು ಮಾತ್ರವೇ ದಲಿತ ಚಳವಳಿಯ ನಿಜವಾದ ದಿಕ್ಕು ತೋರಿಸುವ ಪಂಜಾಗಿರುತ್ತದೆ.

ಬೌದ್ಧ ಧಮ್ಮದಲ್ಲಿರುವ ಅನಿತ್ಯವಾದವು ಗತಿತರ್ಕತೆಗೇ ಸಂಬಂಧಿಸಿದ್ದು ಅದು ಬುದ್ಧನನ್ನು ವಿಶ್ವದ ಮೊದಮೊದಲ ಗತಿತಾರ್ಕಿಕ ತತ್ವಜ್ಞಾನಿಯನ್ನಾಗಿ ಮಾಡುತ್ತದೆ. ಇದರಲ್ಲಿ ಉದ್ಭವವಾಗುವ ದ್ವಂದ್ವಗಳನ್ನು ಗತಿತಾರ್ಕಿಕ ಪದ್ಧತಿಯಿಂದಲೇ ಬಗೆಹರಿಸಿಕೊಳ್ಳಲು ಸಾಧ್ಯ. ಇಲ್ಲಿಯೂ ಅಂಬೇಡ್ಕರ್‌ರ ವಿಧಾನವು ಒಂದು ಗತಿತಾರ್ಕಿಕ ವಿಧಾನವೇ ಎಂಬ ಪ್ರಶ್ನೆ ಹಾಕಿಕೊಳ್ಳಬಹುದು. ಅವರು ವಸ್ತುವಿನ ಸತತ ಉಗಮವನ್ನು ವಿಶ್ವದ ಅಂತಃಸೂತ್ರವೆಂದು ಪರಿಭಾವಿಸಿದರೂ ಹಾಗೆ ಉದ್ಭವವಾದ ನಂತರದಲ್ಲಿ ಅದರಲ್ಲಿ ರೂಪುಗೊಳ್ಳುವ ಸುಸ್ಥಿರ ವ್ಯವಸ್ಥೆಯ ಸ್ಥಿತಿಗೆ ಕಾರಣವೇನೆಂಬುದರ ಪ್ರಶ್ನೆ ಬಂದಾಗ ದ್ವಂದ್ವಕ್ಕೊಳಗಾಗುತ್ತಾರೆ. ಆದರೆ ಈ ಪ್ರಶ್ನೆಯನ್ನು ಆ ರೀತಿಯಲ್ಲಿ ಉಗಮಗೊಂಡ ವ್ಯವಸ್ಥೆಗಳಲ್ಲಿ ಆಂತರಿಕವಾಗಿಯೇ ಸ್ವ-ನಿಯಂತ್ರಣವಿರುತ್ತದೆಂಬ ಪರಿಕಲ್ಪನೆಯ ಮೂಲಕ ಗತಿತಾರ್ಕಿಕವಾಗಿ ಪರಿಹರಿಸಿಕೊಳ್ಳಬಹುದು. ಆದರೆ ಸುವ್ಯವಸ್ಥೆ (ಆರ್ಡರ್) ಬಗ್ಗೆ ಇರುವ ಸಾಂಪ್ರದಾಯಿಕ ಪರಿಕಲ್ಪನೆಗಳು, ಸಾರಾಂಶದಲ್ಲಿ ಗತಿತಾರ್ಕಿಕವಲ್ಲದ ಪರಿಕಲ್ಪನೆಗಳು, ವ್ಯವಸ್ಥೆಯೊಳಗಡೆಯೇ ಇರುವ ಸ್ವನಿಯಂತ್ರಣದ ಮೂಲವನ್ನು ವ್ಯವಸ್ಥೆಯ ಹೊರಗಡೆಯೇ ಹುಡುಕುತ್ತದೆ. ಇತಿಹಾಸದ ಅತಿಕ್ರೂರ ಅಂಶಗಳನ್ನು ಸ್ವತಃ



ಅಂಬೇಡ್ಕರರ ಅನ್ವೇಷಣೆಯಲ್ಲಿ...

ಅನುಭವಿಸಿದ್ದ ಹಾಗೂ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಸತತವಾಗಿ ಶೋಷಿಸುವುದನ್ನು ಅನುಭವಿಸಿದ್ದ ಅಂಬೇಡ್ಕರ್‌ರವರು ಸಮಾಜದಲ್ಲಿ ಅಗತ್ಯವಿರುವ ಸುಸ್ಥಿತಿಯನ್ನು ಕಾಪಾಡಿಕೊಂಡು ಬರಲು ಮನುಷ್ಯನ ಒಳಗಿನಿಂದ ಹಾಗೂ ಹೊರಗಿನಿಂದ ಎರಡೂ ಕಡೆಯಿಂದಲೂ ನಿಯಂತ್ರಿಸುವ ಅಗತ್ಯವಿದೆಯೆಂದು ಭಾವಿಸುತ್ತಿದ್ದರೆಂದು ಕಾಣುತ್ತದೆ. ಅವರ ಪ್ರಕಾರ ಆಂತರಿಕ ನಿಯಂತ್ರಣವು ಧರ್ಮವು ನೀಡುವ ನೀತಿಸಂಹಿತೆಯಿಂದ ದತ್ತವಾದರೆ ಹೊರಗಿನ ನಿಯಂತ್ರಣವನ್ನು ಪ್ರಭುತ್ವದ ಮೂಲಕ ಸಾಧಿಸಬೇಕು. ಈ ನೀತಿಸಂಹಿತೆಯನ್ನು ಎಲ್ಲ ವ್ಯಕ್ತಿಗಳು ಅಂತರಂಗೀಕರಿಸಿಕೊಂಡಾಗ, ಉದಾರವಾದಿ ಪರಂಪರೆಯ ಪ್ರಕಾರ ಸಮಾಜವೆಂಬುದು ವ್ಯಕ್ತಿಗಳ ಸಮೂಹವೇ ಆಗಿರುವುದರಿಂದ, ಸಮಾಜವೂ ಅಂತರಂಗೀಕರಿಸಿಕೊಂಡಂತಾಗಿ ಸಮಾಜವು ಆಂತರಿಕ ನಿಯಂತ್ರಣವನ್ನು ಹೊಂದುತ್ತದೆ ಎಂದು ನಿರೀಕ್ಷಿಸಲಾಗುತ್ತದೆ. ಆದರೆ ಕೆಲವು ವ್ಯಕ್ತಿಗಳ ಅಥವಾ ಒಂದು ಗುಂಪಿನ ಮೃಗೀಯ ಸ್ವಭಾವಗಳು ತಾವು ಆಚರಿಸುತ್ತಿರುವ ವಿಭಿನ್ನ ಸಂಹಿತೆಯ ಕಾರಣದಿಂದಾಗಿಯೋ ಅಥವಾ ಬೇರೆ ಯಾವುದೇ ಕಾರಣಗಳಿಂದಾಗಿ ಈ ಆಂತರಿಕ ನಿಯಂತ್ರಣವನ್ನು ಮೀರಿದಾಗ ಪ್ರಭುತ್ವವು ಮಧ್ಯಪ್ರವೇಶಿಸಿ ಸುವ್ಯವಸ್ಥೆಯನ್ನು ಕಾಪಾಡಬೇಕು. ಜನಸಮುದಾಯದ ಅಭೀಪ್ಸೆಯು ಸಂವಿಧಾನದ ಮೂಲಕ ಪ್ರಭುತ್ವದಲ್ಲಿ ನೆಲೆಗೊಂಡಿರುತ್ತದೆಂದು ಭಾವಿಸಲಾಗುತ್ತದೆ. ಆದ್ದರಿಂದಲೆ ಧರ್ಮವು ಜನತೆಯ ಅಫೀಮೆಂಬ ಹಾಗೂ ಪ್ರಭುತ್ವವು ಉದುರಿಹೋಗುತ್ತದೆಂಬ ಮಾರ್ಕ್ಸ್‌ನ ಹೇಳಿಕೆಯನ್ನು ಒಪ್ಪಿಕೊಳ್ಳಲು ಅಂಬೇಡ್ಕರ್‌ರಿಗೆ ಸಮಸ್ಯೆಯಾಗುತ್ತಿತ್ತು, ಆದರೆ ಸುವ್ಯವಸ್ಥೆ ಎಂಬುದು ಆಯಾ ವ್ಯವಸ್ಥೆಯಲ್ಲೇ ಆಂತರಿಕವಾಗಿರುತ್ತದೆಂದು ಅಂಬೇಡ್ಕರ್ ಖಂಡಿತಾ ಭಾವಿಸಿರಲಿಲ್ಲ, ಆದರೆ ಎಪ್ಪತ್ತರ ದಶಕದಲ್ಲಿ ಸಿಬರ್ನೆಟಿಕ್ಸ್ ತಂತ್ರಜ್ಞಾನದ ಆವಿಷ್ಕಾರವಾದ ನಂತರ ಸಂಕೀರ್ಣ ವ್ಯವಸ್ಥೆಗಳು, ಅವುಗಳಲ್ಲಿ ಮಾನವ ಸಮಾಜವೂ ಖಂಡಿತವಾಗಿ ಒಂದು, ತಮ್ಮದೇ ಆದ ಆಂತರಿಕ ಸ್ವ-ನಿಯಂತ್ರಣದ ಹಾಗೂ ಸ್ವ-ಸಂಘಟನೆಯ ವ್ಯವಸ್ಥೆ ಹೊಂದಿರುತ್ತದೆಂದು ಸಾಬೀತಾಯಿತು.

ಉದಾರವಾದ ಮತ್ತು ಸುಧಾರಣಾವಾದ

ಅಂಬೇಡ್ಕರರ ಬೆಳವಣಿಗೆ ಹಾಗೂ ತರಬೇತಿಗಳೆರಡೂ ಪಾಶ್ಚಿಮಾತ್ಯ ಉದಾರವಾದದ ಪ್ರಭಾವಕ್ಕೆ ಒಳಗಾಗಿದ್ದವು. ಅವರೇ ಹೇಳಿಕೊಂಡಂತೆ ಪಾಶ್ಚಿಮಾತ್ಯ ಸಮಾಜದ ಮುಕ್ತ ಹಾಗೂ ಉದಾರವಾದಿ ಮೌಲ್ಯಗಳು ಅವರಿಗೆ ಸಂತ ಸಾಶ್ಚರ್ಯವನ್ನು ಉಂಟುಮಾಡಿದ್ದವು. ಅವರು ಜಾತಿಗಳ ಬಗ್ಗೆ ಬರೆದ ಮೊದಲ ಪ್ರಬಂಧವು ಸ್ವಲ್ಪಮಟ್ಟಿಗೆ ಮಾರ್ಕ್ಸ್‌ವಾದಿ ವಿಶ್ಲೇಷಣಾ ಧೋರಣೆಯನ್ನು ಹೊಂದಿತ್ತು, ಅವರ ಅಕೆಡೆಮಿಕ್ ಅಧ್ಯಯನದ ಒಂದು ವಿಷಯವೂ ಮಾರ್ಕ್ಸ್‌ವಾದಿ ಸಮಾಜವಾದಕ್ಕೆ ಸಂಬಂಧಪಟ್ಟಿದ್ದಾಗಿತ್ತಲ್ಲದೇ ಅವರ ಗೈಡ್ ಆಗಿದ್ದ ಪ್ರೊ.ಸೆಲಿಗ್‌ಮ್ಯಾನ್ ಇತಿಹಾಸದ ಅರ್ಥಶಾಸ್ತ್ರೀಯ ವ್ಯಾಖ್ಯಾನದಲ್ಲಿ ನಿಪುಣರಾಗಿದ್ದರು. ಅದೇನೇ ಇದ್ದರೂ ಅವರ ನಂತರದ ಕೃತಿಗಳು ಸ್ಪಷ್ಟಪಡಿಸುವಂತೆ ಅಂಬೇಡ್ಕರ್‌ರವರು ಮಾರ್ಕ್ಸ್‌ವಾದಕ್ಕಿಂತ ಹೆಚ್ಚಾಗಿ ಉದಾರವಾದಿ ಸಂಪ್ರದಾಯಕ್ಕೆ ಹೆಚ್ಚು ಹತ್ತಿರವಾಗಿದ್ದರೆಂಬುದನ್ನು ತಿಳಿಸುತ್ತದೆ. ಅದೇನೇ ಇರಲಿ, ಅವರೆಂದೂ ಪ್ರಜ್ಞಾಪೂರ್ವಕವಾಗಿ ಉದಾರವಾದದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲಿಲ್ಲ. ಆ ಸಿದ್ಧಾಂತದ ಒಳ ಅಪಾಯಗಳನ್ನು ಅರಿತಿದ್ದ ಅವರು ತಾವು ಉದಾರವಾದಿ ಸುಧಾರಣಾವಾದಿಯಲ್ಲವೆಂದು ಘೋಷಿಸಿಕೊಳ್ಳುವ ಅಗತ್ಯ ಉಂಟಾಯಿತಲ್ಲದೆ ಮಾರ್ಕ್ಸ್‌ವಾದದ ನಿರೂಪಣೆಗಳ ಬಗ್ಗೆ ಎಷ್ಟೇ ಗುಮಾನಿಗಳಿದ್ದರೂ ಅದರ ಬಗ್ಗೆ ತಮಗಿದ್ದ ಆಕರ್ಷಣೆಯನ್ನು ಮುಚ್ಚಿಟ್ಟುಕೊಳ್ಳಲಿಲ್ಲ.

ಅವರ ಚಿಂತನೆಯಲ್ಲಿದ್ದ ದೌರ್ಬಲ್ಯಗಳು ಭೌತಿಕ ವಾಸ್ತವಗಳ ಜೊತೆ ಸಂಬಂಧ ಕಡಿದುಕೊಂಡ ಧರ್ಮದ ನೈತಿಕ ಶಕ್ತಿಯ ಪರಿಕಲ್ಪನೆಯಿಂದ ಉಗಮವಾಗುತ್ತದೆ. ಆದ್ದರಿಂದಲೇ ಅವರು ಯಾವುದೇ ರಕ್ತಪಾತವಿಲ್ಲದೇ ಸಮಾನತೆ, ಭ್ರಾತೃತ್ವ ಮತ್ತು ಸ್ವಾತಂತ್ರ್ಯದ ತಳಹದಿಯುಳ್ಳ ಸಮಾಜವನ್ನು ಸ್ಥಾಪಿಸಲು ಸಾಧ್ಯ ಎಂದು ಭರವಸೆ ಇಟ್ಟಿದ್ದರು. ಈ ತತ್ವಗಳನ್ನು ಆಧರಿಸಿಯೇ ಅವರು ಸಂವಿಧಾನಾತ್ಮಕ ಪ್ರಭುತ್ವದ ಪರಿಕಲ್ಪನೆಯನ್ನು ಕಟ್ಟಿಕೊಂಡಿದ್ದರು. ಈ ಬಗೆಯ ಸ್ವಕಲ್ಪಿತ ಆಶಯಗಳಿಂದಾಗಿಯೇ ಅವರು, ಆಳುವ ವರ್ಗಗಳು ಎಷ್ಟೇ ನಾಟಕವಾಡಿದರೂ ಒಂದು ಬಹು ಕೇಂದ್ರಗಳುಳ್ಳ, ಅಸಮಾನತೆಯುಳ್ಳ ಸಮಾಜದ ಮೇಲೆ ಉದಾರವಾದಿ ಪ್ರಭುತ್ವದ ಪ್ರಭಾವವು ಅಂತಹ ಬಹು ಕೇಂದ್ರಗಳನ್ನು ಹಾಗೂ ಅಸಮಾನತೆಯನ್ನು ಉಳಿಸಿಕೊಂಡು ಹೋಗಲೇ ಸಹಕರಿಸುತ್ತದೆಂಬುದನ್ನು ಕಡೆಗಣಿಸಿದರು. ಈ ಬಗೆಯ ಉದಾರವಾದವು ಹೆಚ್ಚೆಂದರೆ ಜಾತಿವಾದದ ಕೋಮುವಾದದ ರಾಜಕಾರಣವನ್ನೂ, ದಲಿತರ ನಡುವೆ ಒಡಕುಗಳನ್ನೂ, ರಾಜಕೀಯ ಚದುರಂಗದಾಟದಲ್ಲಿ ಅವರ ಬಳಕೆಯನ್ನೂ, ಅವರ ನಿಜವಾದ ಸ್ವಂತಿಕೆಗಳ ಬದಿಗೊತ್ತುವಿಕೆಯನ್ನೂ ಹೆಚ್ಚಿಸಿ ಕೆಲವೇ ಶ್ರೀಮಂತರ ಹಿತಾಸಕ್ತಿಯನ್ನು ರಕ್ಷಿಸುವಲ್ಲಿ ಪರ್ಯಾವಸನಗೊಳ್ಳುತ್ತದೆ. ಬೂರ್ಜ್ವಾಗಳ ರಾಜಕೀಯ ಅಧಿಕಾರದ ಅಭಿವ್ಯಕ್ತಿಯಾಗಿರುವ ಉದಾರವಾದಿ ಪ್ರಜಾತಂತ್ರವು ಬಡಬಗ್ಗರ ಹಿತ ಕಾಯುತ್ತದೆಂದು ನಿರೀಕ್ಷಿಸುವುದೇ ಒಂದು ವೈರುಧ್ಯಾತ್ಮಕ ಸಮಸ್ಯೆ. ಅದು ಒಂದಷ್ಟು ರಿಯಾಯತಿಗಳನ್ನು ದುರ್ಬಲ ವರ್ಗಗಳಿಗೆ ಕೊಡುತ್ತಿರುವಂತೆ ಕಂಡರೂ ಅದರ ನಿಜವಾದ ಉದ್ದೇಶ ಅಸ್ತಿತ್ವದಲ್ಲಿರುವ ಆಳುವ ವರ್ಗಗಳ ಆಳ್ವಿಕೆಯನ್ನು ಉಳಿಸಿಕೊಂಡು ಬರುವುದೇ ಆಗಿರುತ್ತದೆ. ಕೊಳೆತ ಹಿಂದೂ ಜಾತಿ ಪದ್ಧತಿಗಿಂತ ಉದಾರವಾದಿ ಪ್ರಜಾತಂತ್ರವು ಉತ್ತಮವೆಂದು ಅನಿಸಿದರೂ ಅದು ದಲಿತರ ಪರವಾಗಿ ಯಾವುದೇ ನೈಜ ಬದಲಾವಣೆಯನ್ನು ತರುವಲ್ಲಿ ಅಸಮರ್ಥವಾಗಿರುತ್ತದೆ. ಅದು ಶೋಷಕ ವ್ಯವಸ್ಥೆಯಲ್ಲಿರುವ ಬಿಕ್ಕಟ್ಟನ್ನು ಮೃದುಗೊಳಿಸುತ್ತದಲ್ಲದೆ ಅದಕ್ಕೆ ಬಲಿಯಾಗಿರುವವರಲ್ಲಿ ಕ್ರಾಂತಿಕಾರಿ ಜಾಗೃತಿಯನ್ನು ಕೊಂದುಹಾಕುತ್ತದೆ.

ಪುನರ್‌ನಿರ್ವಚನದ ಯೋಜನೆ

ಬಾಬಾಸಾಹೇಬ್ ಅಂಬೇಡ್ಕರ್‌ರವರು ತಮ್ಮ ಕೃತಿಯಲ್ಲಿ ಬಳಸಿದ ಹಲವಾರು ನಿರ್ಮಿತಿಗಳಿಗೆ ತನ್ನದೇ ಆದ ನಿರ್ದಿಷ್ಟ ಅರ್ಥಗಳಿವೆ. ಮೊದಲನೆಯದಾಗಿ ಅವು ತೋರಿಕೆಗೆ ಕಾಣುವ ರೀತಿಯಲ್ಲಿ ಸ್ವಸಂಪೂರ್ಣವಾದ ವ್ಯಾಖ್ಯೆಗಳಲ್ಲ, ಅವು ಅವರ ಆಲೋಚನಾ ಕ್ರಮದ ಉಪ ಉತ್ಪನ್ನಗಳಾಗಿದ್ದು ಅದರ ಮೂಲಸೆಲೆಯನ್ನು ಅವರ ಮೂಲಭೂತ ಲಕ್ಷ್ಯವಾಗಿದ್ದ ಜಾತಿನಿರ್ಮೂಲನೆ ಮತ್ತು ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಯನ್ನು ಆಧರಿಸಿದ ಸಮಾಜ ನಿರ್ಮಾಣದಲ್ಲಿ ಹುಡುಕಬಹುದು. ಅವರ ಹೃದಯಕ್ಕೆ ಅತಿ ಸಮೀಪವಾಗಿದ್ದ ಈ ಮೂರು ತತ್ವಗಳೂ ಸಹ ಫ್ರೆಂಚ್ ಕ್ರಾಂತಿಯಲ್ಲಿ ಮೂಡಿಬಂದ ಅರ್ಥಗಳಿಗಿಂತ ಭಿನ್ನವಾದ ಅರ್ಥಗಳನ್ನೇ ಹೊರಡಿಸುತ್ತದೆ. ತಾವು ಇದನ್ನು ಬುದ್ಧನಿಂದ ಪಡೆದೆನೆಂದು ಅವರು ಹೇಳುತ್ತಾರೆ. ಬುದ್ಧ ಏನು ಹೇಳಿದ್ದರೆಂಬುದನ್ನೂ ಸಹ ಅಂಬೇಡ್ಕರ್‌ರ ವ್ಯಾಖ್ಯಾನದ ಮೂಲಕ ಅರ್ಥಮಾಡಿಕೊಳ್ಳಬೇಕು. ಏಕೆಂದರೆ ಅದು ಈಗಾಗಲೇ ಬೌದ್ಧ ನಿಲಯಗಳು ಸುಪರಿಚಿತಗೊಳಿಸಿರುವ ವ್ಯಾಖ್ಯಾನಕ್ಕಿಂತ ಭಿನ್ನವೇ ಇರಬಹುದು. ಏಕೆಂದರೆ ಅವರ ಬುದ್ಧ ಮತ್ತು ಅವರ ಧಮ್ಮಗಳು ಪ್ರಾರಂಭದಲ್ಲಿ ಹಲವಾರು ಬೌದ್ಧರಿಂದ ಆ ಬಗೆಯ ನಿರಾಕರಣೆಗೆ ಗುರಿಯಾಗಿತ್ತು, ಆದ್ದರಿಂದ ಅಂಬೇಡ್ಕರ್‌ರನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅವರು ಬಳಸುವ ಪರಿಕಲ್ಪನೆಗಳ ಮತ್ತು ನಿರ್ಮಿತಿಗಳ ನಿರ್ದಿಷ್ಟ ಅರ್ಥವೇನೆಂದು ಗ್ರಹಿಸಲು ವಿಶೇಷ ಪರಿಶೀಲನೆ ಮಾಡಬೇಕಾಗುತ್ತದೆ. ಅದರ ಕೊರತೆಯೇ ಈಗಾಗಲೇ ಹಲವು ಜನರಲ್ಲಿ ಸಾಕಷ್ಟು ತಪ್ಪುಗ್ರಹಿಕೆಗಳನ್ನು ಹುಟ್ಟುಹಾಕಿದೆ. ಅವರು ನಿಜವಾಗಿ ಹೇಳಿದ್ದೇನು ಅಥವಾ ಉದ್ದೇಶಿಸಿದ್ದೇನು ಎಂದು ಅರ್ಥಮಾಡಿಕೊಳ್ಳುವುದು ಒಂದು ವಿಷಯವಾದರೆ ಅದನ್ನೇ ಅವರ ಮೂಲಭೂತ ಲಕ್ಷ್ಯ ಹಾಗೂ ದರ್ಶನಗಳಿಗೆ ಸಂವಾದಿಯಾಗುವಂತೆ ವಿಸ್ತರಿಸಿ ಭವಿಷ್ಯದ ಚಳವಳಿಗೂ ಅನುಕೂಲವಾಗುವಂತೆ ವ್ಯಾಖ್ಯಾನಿಸುವುದು ಬೇರೆಯದೇ ಆದ ವಿಷಯ. ಮಾರ್ಕ್ಸ್ ತತ್ವಶಾಸ್ತ್ರದ ಬಗ್ಗೆ ಹೇಳಿದಂತೆ ಅಂಬೇಡ್ಕರ್‌ರನ್ನು ಹೇಗಿದ್ದರೋ ಹಾಗೆ ಅರ್ಥಮಾಡಿಕೊಳ್ಳುವ ಸಮಸ್ಯೆಯಲ್ಲ-ಬದಲಿಗೆ ಅವರು ತಮ್ಮ ಜೀವಮಾನವಿಡೀ ತಮ್ಮನ್ನು ಮುಡುಪಾಗಿಟ್ಟ ಹೋರಾಟಗಳಲ್ಲಿ ಒಂದು ಅಸ್ತ್ರವಾಗಿ ಹೇಗೆ ಬಳಸಿಕೊಳ್ಳಬಹುದೆಂದು ಚಿಂತಿಸುವುದೇ ಪ್ರಧಾನವಾದ ವಿಷಯ. ಇಲ್ಲಿ ಪ್ರಸ್ತಾಪಿತವಾದ ಪುನರ್ನಿರ್ವಚನದ ವಿಷಯವೂ ಪ್ರಯಶಃ ಸಾರಾಂಶದಲ್ಲಿ ಇವೆರಡನ್ನೂ ಉದ್ದೇಶಿಸಿರಬೇಕಾಗುತ್ತದೆ.

ಅಂಬೇಡ್ಕರ್ ಬಳಸಿದ ಸಂಶೋಧನಾ ವಿಧಾನವು ಮೂಲಭೂತವಾಗಿ ವೈಚಾರಿಕವಾಗಿದ್ದು ಅದರ ಹಿಂದಿನ ಉದ್ದೇಶವೂ ನಿಸ್ಸಂದೇಹವಾಗಿ ಕ್ರಾಂತಿಕಾರಿಯಾದದ್ದೇ ಆಗಿದೆ. ಒಂದು ನಿರ್ದಿಷ್ಟ ಯೋಜನೆಯಲ್ಲಿ ಅಥವಾ ಒಂದು ನಿರ್ದಿಷ್ಟ ಸಂಶೋಧನಾ ಪ್ರಕ್ರಿಯೆಯನ್ನು ಅಳವಡಿಸುವಲ್ಲಿ ಲೋಪಗಳಿರಬಹುದು. ಅದಕ್ಕೆ ಸಂದರ್ಭದ ಸಂಕೀರ್ಣತೆ ಮತ್ತು ಅಂಬೇಡ್ಕರ್‌ರ ಪರಿಸ್ಥಿತಿ ಕಾರಣವಾಗಿರಬಹುದು. ಅದೇನೇ ಇದ್ದರೂ ಅಂತಿಮ ಪರಿಣಾಮವು ಸಂಶೋಧನೆಗೆ ಬಳಸಿದ ಪರ್ಯಾಯಗಳನ್ನೇ ಆಧರಿಸಿರುತ್ತದೆ. ಇದರರ್ಥವೇನೆಂದರೇ ನಿರ್ದಿಷ್ಟವಾದ ಯಾವುದೇ ವಿಧಾನ, ಚಿಂತನೆ ಅಥವಾ ಆಚರಣೆಗಳು ಐತಿಹಾಸಿಕವಾಗಿ ವಾಸ್ತವ ಸಂಗತಿಗಳೆ ಆಗಿದ್ದರೂ ಅಂಬೇಡ್ಕರರ ಸೈದ್ಧಾಂತಿಕ ಅಂಶಗಳನ್ನು ಗ್ರಹಿಸಿಕೊಳ್ಳಬೇಕೆಂದರೆ ಅವುಗಳನ್ನು ತೋರಿಕೆಗೆ ಕಾಣುವಷ್ಟು ರೀತಿಯಲ್ಲಿ ಪರಿಗಣಿಸಲು ಬರುವುದಿಲ್ಲ. ಉದಾಹರಣೆಗೆ ಮೇಲೆ ಹೇಳಲ್ಪಟ್ಟ ಯಾವುದೇ ಅಂಶಗಳನ್ನು ಅದರ ಅಕೆಡೆಮಿಕ್ ತೀವ್ರತೆಯೊಂದಿಗೆ ಅವರು ಅದನ್ನು ಬಳಸುವುದಿಲ್ಲ, ಅದಕ್ಕೆ ಅವರು ಬಹಳಷ್ಟು ಬಾರಿ ಉದ್ದೇಶಿಸಿ ಮಾತಾಡುತ್ತಿದ್ದುದು ಅಕೆಡೆಮಿಕ್ ಅಲ್ಲದ ಜನಗಳನ್ನು ಎಂಬುದು ಒಂದು ಕಾರಣವಾದರೆ ಬಹಳಷ್ಟು ಬಾರಿ ಅವರು ತಾವು ಬಳಸುತ್ತಿದ್ದ ಪದಗಳಿಗೆ ತಮ್ಮದೇ ಆದ ಅರ್ಥಗಳನ್ನು ಕೊಡುತ್ತಿದ್ದರು. ಬದಲಾದ ಸಂದರ್ಭಗಳಲ್ಲಿ ಮತ್ತು ಬದಲಾದ ಮಾಹಿತಿಗಳ ಸಂದರ್ಭಗಳಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ಹಿಂಜರಿಕೆಯಿಲ್ಲದೇ ಬದಲಾಯಿಸಿಕೊಳ್ಳುತ್ತಿದ್ದರು. ಒಂದು ಊಹಾತ್ಮಕ ಉದಾಹರಣೆ ಕೊಡುವುದಾದರೆ ಅಂಬೇಡ್ಕರ್‌ರವರು ಈಗ ಇದ್ದಿದ್ದರೆ ತಮ್ಮ ಕೆಲವು ನಂಬಿಕೆಗಳ ಹಾಗೂ ಅಭಿಪ್ರಾಯಗಳ ಅನಪೇಕ್ಷಿತ ಪರಿಣಾಮಗಳ ಬಗ್ಗೆ ಮಾಹಿತಿ ಪಡೆದು ಅಥವಾ ಅನುಭವಿಸಿ ಅವುಗಳನ್ನು ಖಂಡಿತಾ ಬದಲಿಸಿಕೊಳ್ಳುತ್ತಿದ್ದರು. ಇಲ್ಲದಿದ್ದರೆ ತಾವೇ ಕಷ್ಟಪಟ್ಟು ಬರೆದು ಸಮರ್ಥಿಸಿಕೊಳ್ಳುತ್ತಿದ್ದ ಸಂವಿಧಾನವನ್ನು ತನ್ನನ್ನು ಕೇವಲ ಉಪಕರಣವಾಗಿ ಮಾತ್ರ ಬಳಸಿಕೊಳ್ಳಲಾಗಿದೆ ಎಂದು ಧಿಕ್ಕರಿಸಿ ಹೊರನಡೆಯುತ್ತಿದ್ದರೆ? ಅವರು ಮಾಡಿದ ಹಲವು ವಿಷಯಗಳಲ್ಲಿ ಹಲವು ಮಿತಿಗಳಿದ್ದವು. ಆದರೆ ಅವು ತಪ್ಪೆಂದು ಮನವರಿಕೆಯಾದಾಗ ಅದನ್ನು ಬದಲಾಯಿಸಿಕೊಳ್ಳಲು ಅವರೆಂದೂ ಹಿಂಜರಿದಿರಲಿಲ್ಲ, ಇಲ್ಲಿ ಪ್ರಸ್ತಾಪಿಸಲಾಗುತ್ತಿರುವ ಪುನರ್ ನಿರ್ವಚನವನ್ನು ಅವರೇ ತಮ್ಮ ಬಗ್ಗೆ ಹಲವು ಬಾರಿ ಮಾಡಿಕೊಂಡಿದ್ದರು ಮತ್ತು ಅವರು ಜೀವಂತವಾಗಿದ್ದರೆ ಅದನ್ನೇ ಮುಂದುವರೆಸುತ್ತಿದ್ದರು. ಅವರ ಅಸಂಪೂರ್ಣವಾದ ವಿಮೋಚನಾ ಯೋಜನೆಯನ್ನು ಪೂರೈಸಲು ಇದು ಅವಿಭಾಜ್ಯ ಅಂಗ.

ಇದನ್ನು ಪೂರೈಸಲು ಅನುಸರಿಸಬೇಕದ ವೈಜ್ಞಾನಿಕ ಮಾರ್ಗವು ಅಂಬೇಡ್ಕರ್‌ರ ಜೀವನವನ್ನು ಅದರ ಸಾಂದರ್ಭಿಕ ಚೌಕಟ್ಟಿನಲ್ಲಿಟ್ಟು ವಿಶ್ಲೇಷಣಾತ್ಮಕ ಅಧ್ಯಯನ ಕೈಗೊಳ್ಳುತ್ತಲೆ ಅವರ ಅಂತರ್ಗತ ಸಾರಾಂಶವನ್ನು ಹಿಡಿದಿಡುವ ಕಡೆ ಕೇಂದ್ರೀಕರಿಸುತ್ತಾ ಅವರ ಜೀವನ ದರ್ಶನದ ಮತ್ತು ಸೈದ್ಧಾಂತಿಕ ಮೂಸೆಯನ್ನು ಪರಿಕಲ್ಪಿಸಿಕೊಳ್ಳುವುದನ್ನು ಒಳಗೊಂಡಿರುತ್ತದೆ. ಅದು ಅದರ ಮೂಲಭೂತ ಉದ್ದೇಶವಾದ ದಲಿತರ ವಿಮೋಚನಾ ಚಳವಳಿಯನ್ನು ತೇಜಿಗೊಳಿಸುವ ಮತ್ತು ಆ ಮೂಲಕ ಇಡಿ ಭಾರತ ಸಮಾಜವನ್ನು ಪ್ರಜಾತಾಂತ್ರೀಕರಿಸುವ ಆಶಯವನ್ನು ಪ್ರತಿಫಲಿಸುವಂತಿರಬೇಕು. ಈ ಪ್ರಕ್ರಿಯೆಯು ಪೂರ್ವಗ್ರಹಗಳಿಂದ ಮುಕ್ತವಿಲ್ಲದೇ ಇರಬಹುದು. ಆದರೆ ಆ ಪೂರ್ವಗ್ರಹಗಳು ಈವರೆಗೆ ಇತಿಹಾಸದ ದುರ್ಬಳಕೆ ಮಾಡಿಕೊಳ್ಳುತ್ತಲೇ ಬಂದ ಶೋಷಕವರ್ಗಗಳಿಗಾಗಿಯಲ್ಲದೇ ಬದಲಾವಣೆಯನ್ನು ಹಂಬಲಿಸುತ್ತಿರುವ ನಿರ್ಗತಿಕರ ಪರವಾಗಿದ್ದರೆ ತೊಂದರೆಯೇನಿಲ್ಲ, ಅದು ಅವರ ದೃಷ್ಟಿಕೋನದಿಂದ ಮುಕ್ತವಾಗಿಲ್ಲದೇ ಇರಬಹುದು. ಬದಲಿಗೆ ದಲಿತರ ಮುಂದಿನ ವಿಮೋಚನಾ ಹೋರಾಟಗಳಿಗೆ ಅಂಬೇಡ್ಕರ್‌ರನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳಬೇಕೆಂಬ ಆಶಯದಲ್ಲೇ ಅದು ಅಡಕವಾಗಿದೆ.

▶7

ಕಟ್ಟೆಪುರದ ಕಾವೇರಿ ಕಾಮಗಾರಿ ಡಕಾಯಿತಿ

ಮು ಹೊದಿಕೆಗಳೆಲ್ಲ ತರಗೆಲೆಗಳಂತೆ ಕೊಚ್ಚಿ ಹೋಯಿತು. ಅದರಂತೆಯೇ ಮಲ್ಲರಾಜಪಟ್ಟಣದಿಂದ ಎಲ್ಲಿನಾಥಪುರದವರೆಗಿನ ನಾಲೆಯ ಇಡೀ ಕಾಂಕ್ರಿಟ್ ಮಾತ್ರವಲ್ಲ, ಅಕ್ಕಪಕ್ಕದ ಭೂಮಿ ಸಮೇತ ನಾಲೆಗೆ ನಾಲೆಯೇ ಕೊಚ್ಚಿ ಹೋಯಿತು. ಉಳಿದೆಡೆ ಎಲ್ಲೆಂದರಲ್ಲಿ ನಾಲೆ ತೂತುಬಿದ್ದು ಕಿತ್ತು ತಿಂದಂತಾಗಿತ್ತು. ಇದನ್ನು ಕಂಡಿದ್ದೇ ತಡ ರೈತರಿಗೆ ಇಡೀ 124 ಕೋಟಿಯ ಕಾಮಗಾರಿಯ ಮರ್ಮ ಗೊತ್ತಾಯಿತು. ಮೊದಲು ಅರಕಲಗೂಡು ಶಾಸಕ ವಾಲೇಮಂಜುಗೆ ದೂರು ಕೊಟ್ಟರು. ಕಾವೇರಿ



...ಕಿತ್ತು ಹೋದ ಕಟ್ಟೇಪುರ ನಾಲೆ

ನೀರಾವರಿ ನಿಗಮದ ಇಂಜಿನಿಯರ್‌ಗಳಾದ ನಂಜುಂಡೇ ಗೌಡ ಮತ್ತು ಜಾಲಿಹಾಳರಿಗೆ ಲೆಕ್ಕವಿಲ್ಲದಷ್ಟು ದೂರುಗಳು ಬಂದವು. ಲೋಕಾಯುಕ್ತ ನೀರಾವರಿ ಮಂತ್ರಿ ಬೊಮ್ಮಾಯಿ, ಮುಖ್ಯಮಂತ್ರಿ ಎಲ್ಲರಿಗೂ ದೂರು ನೀಡಿ ಸುಸ್ತಾದ ರೈತರಿಗೆ ಅಂತಿಮವಾಗಿ ಅರ್ಥವಾದ ಕಹಿ ಸತ್ಯವೇನೆಂದರೆ ಇದು ಮಂತ್ರಿಯಿಂದ ಹಿಡಿದು ಇಂಜಿನಿಯರ್ ತನಕ ಪ್ರತಿಯೊಬ್ಬರೂ ಕೈಜೋಡಿಸಿಯೇ ನಡೆಸಿದ ಹಗಲು ದರೋಡೆ ಎಂದು.


ಹಾಗಂತ ಕೈಕಟ್ಟಿ ಕೂತರೆ ಮುಂದೊಮ್ಮೆ ಸಹಸ್ರಾರು ಎಕರೆಗಳಿಗೆ ನೀರೇ ದುರ್ಲಭ. ಕೃಷಿ ಬಿಟ್ಟರೆ ಮತ್ತೊಂದು ಗೊತ್ತಿಲ್ಲ. ಇಂಥಾ ಸ್ಥಿತಿಯಲ್ಲೇ ದಲಿತ ಸಂಘರ್ಷ ಸಮಿತಿಯ ಕ್ರಮವಾದಿ ಬಣದ ನಾಯಕ ಎಚ್.ಪಿ. ಮಂಜು, ಸಂಘಟನಾ ಸಂಚಾಲಕ ಜವರಯ್ಯ, ಸಮತಾ ಸೈನಿಕ ದಳದ ನಾಯಕ ಕೆ.ಎಸ್. ಸತೀಶ್, ನೌಕರರ ಒಕ್ಕೂಟದ ಪ್ರಸನ್ನ ಕುಮಾರ್, ದಲಿತ ನಾಯಕರಾದ ಸೋಮಶೇಖರ್, ರಾಜಶೇಖರ್ ಮುಂತಾದವರೆಲ್ಲ ಸೇರಿ ಕಳಪೆ ಕಾಮಗಾರಿ ವಿರುದ್ಧ ಹೋರಾಟಕ್ಕಿಳಿದಿದ್ದಾರೆ. 2012 ರ ಜನವರಿ 16 ರಂದು ರಾಮನಾಥಪುರದ ಕಾವೇರಿ ಸೇತುವೆ ಮೇಲೆ ರಸ್ತೆ ತಡೆ ನಡೆಸಿದ್ದಾರೆ. 2 ಗಂಟೆಗಳ ಕಾಲ ಇಡೀ ಪಿರಿಯಾಪಟ್ಟಣ-ಸೋಮವಾರಪೇಟೆಯ ಮಾರ್ಗ ಬಂದಾಗಿದೆ. ಇಷ್ಟಾಗ್ಯೂ ಪ್ರತಿಭಟನಾಕಾರರೆಡೆಗೆ ಶಾಸಕ ವಾಲೇಮಂಜುವಾಗಲಿ, ನೀರಾವರಿ ಇಲಾಖೆಯ ಇಂಜಿನಿಯರ್‌ಗಳಾಗಲಿ ಪತ್ತೆಯೇ ಇಲ್ಲ.

ಹಾಳಾಗಲಿ ಕನಿಷ್ಠ ಪ್ರತಿಭಟನೆಗಾದರೂ ಗೌರವ ಕೊಡಬೇಕಲ್ಲವೇ? ಆದರೆ ಎಸ್‌ಎನ್‌ಪಿ ಪವರ್ ಕಾರ್ಪೊರೇಷನ್ ಮತ್ತು ಕಂಟ್ರಾಕ್ಟರ್ ಸತ್ಯನಾರಾಯಣ ಶೆಟ್ಟಿಯ ಪಾಪದ ದುಡ್ಡಿನಲ್ಲಿ ಪಾಲು ತಿಂದವರು ಈ ಹಗಲು ದರೋಡೆಯನ್ನು ಮುಚ್ಚಿಹಾಕಲು ಇಡೀ ಪ್ರತಿಭಟನೆಯನ್ನೇ ಹತ್ತಿಕ್ಕಲು ಮುಂದಾದರು. ಪ್ರತಿಭಟನಾಕಾರರ ಪೈಕಿ ಮುಂಚೂಣಿಯಲ್ಲಿದ್ದದ್ದು ದಸಂಸದ ತಾಲ್ಲೂಕು ಸಂಚಾಲಕ ರಾಜಶೇಖರ್. ಕೊಣನೂರು ಪೊಲೀಸ್ ಠಾಣೆ ವ್ಯಾಪ್ತಿಯ ಕೋನಾಪುರದ ಪ್ರಜ್ಞಾವಂತ ಯುವಕ ಈತ.

ಒಬ್ಬೊಬ್ಬರೇ ಪ್ರತಿಭಟನಾಕಾರರನ್ನು ಹಿಡಿದು ಬಾಯಿ ಮುಚ್ಚಿಸುವ ಧಾರ್ಷ್ಟ್ಯಕ್ಕೆ ಕೈಯಿಟ್ಟ ಕಂಟ್ರಾಕ್ಟರ್ ಸತ್ಯನಾರಾಯಣ ಶೆಟ್ಟಿ ಅದಕ್ಕೆಂದು ಛೂಬಿಟ್ಟಿದ್ದು ತನ್ನ ಚೇಲಾ ಸುಬ್ರಹ್ಮಣ್ಯ ಮತ್ತು ಆತನ ಬಂಟ ಬೆಳ್ಳಿ ಚಂದ್ರಶೇಖರ್‌ರನ್ನು. ಇವರಿಬ್ಬರೂ ಜನವರಿ 19 ರ ರಾತ್ರಿ ಕೋನಾಪುರಕ್ಕೆ ಬಂದಿದ್ದಾರೆ. ಅಲ್ಲಿನ ಸವರ್ಣೀಯ ಪುಂಡರಾದ ಅಣ್ಣೇಗೌಡ, ಕೃಷ್ಣಕುಮಾರ್, ಗಿರೀಶ ಮತ್ತು ಸುರೇಶ್‌ರನ್ನು ಜೊತೆ ಹಾಕಿಕೊಂಡಿದ್ದೇ ರಾತ್ರಿ 9 ರ ಹೊತ್ತಿಗೆ ದಲಿತ ನಾಯಕ ರಾಜಶೇಖರ್ ಮನೆಗೆ ನುಗ್ಗಿದ್ದಾರೆ. ಊಟಕ್ಕೆ ಕೂತಿದ್ದ ರಾಜಶೇಖರ್‌ರನ್ನು ಮನೆಯಿಂದ ಹೊರಗೆಳೆದು ತಂದಿದ್ದೇ ಮಚ್ಚು ರಾಡಿನಿಂದ ಹಲ್ಲೆ ನಡೆಸಿದ್ದಾರೆ. ರಕ್ತ ಸುರಿಸುತ್ತಾ ಸರ್ಕಾರಿ ಆಸ್ಪತ್ರೆಗೆ ಧಾವಿಸಿ ಬಂದ ರಾಜಶೇಖರ್‌ರನ್ನು ಆನಂತರ ಪೊಲೀಸರೇ ಹಾಸನದ ಆಸ್ಪತ್ರೆಗೆ ಸೇರಿಸಿದ್ದಾರೆ.


ಕಳಪೆ ಕಾಮಗಾರಿ ವಿರುದ್ಧ ದಲಿತರ ಹೋರಾಟ

ಮರುದಿನವೇ ಡಿವೈಎಸ್‌ಪಿ ಉಪೇಂದ್ರ, ಸರ್ಕಲ್ ಇನ್ಸ್‌ಪೆಕ್ಟರ್ ಕುಮಾರಸ್ವಾಮಿ ಮತ್ತು ಎಸ್‌ಐ ಪ್ರವೀಣ್‌ಕುಮಾರ್ ಸೇರಿ ದುಷ್ಕರ್ಮಿಗಳಾದ ಅಣ್ಣೇಗೌಡ, ಕೃಷ್ಣಕುಮಾರ್ ಮತ್ತು ಸುರೇಶ್ ಗೌಡರನ್ನು ಬಂಧಿಸಿದರಾದರೂ ಕಂಟ್ರಾಕ್ಟರ್ ಸತ್ಯನಾರಾಯಣ ಶೆಟ್ಟಿಯನ್ನಾಗಲಿ, ಆತನ ಚೇಲಾಗಳಾದ ಸುಬ್ರಹ್ಮಣ್ಯ ಮತ್ತು ಬೆಳ್ಳಿ


ಕಳಪೆ ಕಾಮಗಾರಿಯ ಒಂದು ದೃಶ್ಯ

ಚಂದ್ರಶೇಖರನನ್ನಾಗಲಿ ಮುಟ್ಟೇ ಇಲ್ಲ. ದಲಿತ ನಾಯಕನ ಮೇಲೆ ನಡೆದ ಹಲ್ಲೆ ವಿರುದ್ಧವೂ ಮತ್ತೆ ದಲಿತ ಸಂಘಟನೆಗಳು ಬೀದಿಗಿಳಿದು ಪ್ರತಿಭಟಿಸಿವೆ. ರೈತ ನಾಯಕ ಕೋಡಿಹಳ್ಳಿ ಚಂದ್ರಶೇಖರ್ ಇದಾಗಿ ವಾರಕ್ಕೇ ಅರಕಲಗೂಡಿಗೆ ಬಂದು ಇನ್ನೊಂದು ಪ್ರತಿಭಟನೆ ನಡೆಸಿದ್ದಾರೆ. ಇಷ್ಟಾಗ್ಯೂ ಕಂಟ್ರಾಕ್ಟರ್ ಸತ್ಯನಾರಾಯಣ ಶೆಟ್ಟಿಯನ್ನು ಪೊಲೀಸರು ಮುಟ್ಟಿಲ್ಲ. ಆತನ ವಿರುದ್ಧ ಕನಿಷ್ಠ ಎಫ್‌ಐಆರ್ ಅನ್ನೂ ದಾಖಲಿಸಿಲ್ಲ. ನಡೆದದ್ದು 124 ಕೋಟಿಯ ಭಾರೀ ಅಕ್ರಮ. ಸಹಸ್ರಾರು ಎಕರೆಗಳಿಗೆ ನೀರುಣಿಸುವ ಸಾವಿರಾರು ರೈತರ ಬದುಕಿನ ಪ್ರಶ್ನೆಯಾದ ಕಾವೇರಿ ನದಿಯ ಮೊಟ್ಟಮೊದಲ ಅಣೆಕಟ್ಟೆಯ ನಾಲಾ ಆಧುನೀಕರಣದ ಹೆಸರಲ್ಲಿ ಸರ್ಕಾರಿ ದರೋಡೆಯೊಂದು ಸದ್ದಿಲ್ಲದೆ ನಡೆದುಹೋಗಿದೆ. ಈ ಬಗ್ಗೆ ರಾಜ್ಯಮಟ್ಟದ ಯಾವ ಟೀವಿ-ಪತ್ರಿಕೆಗಳೂ ಈತನಕ ಚಕಾರವೆತ್ತಿಲ್ಲ. ಅರಕಲಗೂಡು ಶಾಸಕ ವಾಲೇಮಂಜು ತನ್ನದೇ ಕ್ಷೇತ್ರದ ಈ ಘಾಟ ಹಗರಣದ ಕುರಿತು ಈತನಕ ಚಕಾರವೆತ್ತಿಲ್ಲ ಯಾಕೆ?

ಇದು ಒತ್ತಟ್ಟಿಗಿರಲಿ ಅರಕಲಗೂಡಿನ ಮಾಜಿ ಶಾಸಕ ಎ.ಟಿ. ರಾಮಸ್ವಾಮಿಯವರಾದರೂ ದನಿಯೆತ್ತಬೇಕಲ್ಲವೆ?

ಭೂಹೀನ ದಲಿತರು ಕಾವೇರಿಗಾಗಿ ಬೀದಿಗಿಳಿದರೆ ಫಲಾನುಭವಿ ಪುಂಡರು ಕಂಟ್ರಾಕ್ಟರ್ ಪರವಹಿಸಿ ದಾಳಿಗಿಳಿಯುತ್ತಾರೆ. ಪೊಲೀಸರು, ಸರ್ಕಾರ ಕಂಟ್ರಾಕ್ಟರ್ ಪರವಾಗೇ ನಿಷ್ಕ್ರಿಯರಾಗುತ್ತಾರೆ. ನೀರಾವರಿ ಮಂತ್ರಿಗೆ ಜಾಣ ನಿದ್ದೆಯಾದರೆ ಮುಖ್ಯಮಂತ್ರಿಗೆ ಅದೆಂಥದೋ ಕುರುಡು. 124 ಕೋಟಿ ರೂಪಾಯಿಗಳ ಕಾವೇರಿ ಕಾಮಗಾರಿ ಹಗರಣದಲ್ಲಿ ಆರೆಸ್ಸೆಸ್, ಬಿಜೆಪಿ ಇಲಾಖಾ ಇಂಜಿನಿಯರ್‌ಗಳು, ಮಂತ್ರಿ, ಮುಖ್ಯಮಂತ್ರಿ ಎಲ್ಲರೂ ಸಮಾನ ಭಾಗಿದಾರರು!

Statement about ownership and other particulars of **'Ranjane Bodhane Prachodane Lankesh'** Weekly, Bangalore as required under Rule 8 of the Registration of Newspapers (Central) Rule, 1956.

FORM - IV

(See Rule 8)

1. Place of Publication : Bangalore
2. Periodicity of Publication : Weekly
3. Printer's Name : Gauri Lankesh
   Whether Citizen of India : Yes
   Address : No. 9, E.A.T. Street, Basavanagudi, Bangalore-560 004.
4. Publisher's Name : Gauri Lankesh
   Whether Citizen of India : Yes
   Address : No. 9, E.A.T. Street, Basavanagudi, Bangalore-560 004.
5. Editor's Name : Gauri Lankesh
   Whether Citizen of India : Yes
   Address : No. 9, E.A.T. Street, Basavanagudi, Bangalore-560 004.

I, Gauri Lankesh, hereby declare that the particulars given above are true to the best of my knowledge and belief.

Sd/-

Date : 21.3.2012

GAURI LANKESH

ಯಡ್ಡಿ-ಅನಂತ್ ರಾಜಿ ಪಟ್ಟಕ್ಕೆ ಶೆಟ್ಟರ್





• ರಾ. ಸೋಮನಾಥ್


ಯಾವ ನಾಯಕರು ಬರದೇ ಹೋದರೂ ಚಿಕ್ಕಮಗಳೂರಿನಲ್ಲಿ ನಾವು ಗೆಲ್ಲೋದು ಶತಸ್ಸಿದ್ಧ!

ಯಡ್ಡಿಯ ತಲೆಗೇ ಹೊಡೆದಂತೆ ಝಾಡಿಸಿದ್ದಾರೆ ಮುಖ್ಯಮಂತ್ರಿ ಸದಾನಂದ ಗೌಡ. ಇದು ಮುಖ್ಯಮಂತ್ರಿ ಮತ್ತು ಮಾಜಿ ಮು.ಮಂ. ಯಡ್ಡಿ ನಡುವಿನ ಜಿದ್ದಾಜಿದ್ದಿ ತನ್ನ ನಿರ್ಣಾಯಕ ಹಂತ ಮುಟ್ಟಿರುವುದರ ನಿಚ್ಚಳ ಲಕ್ಷಣ. ಮಾರ್ಚ್ 11 ರ ಹುಬ್ಬಳ್ಳಿ ಸಮಾವೇಶದಲ್ಲೇ ಅದು ನಿರ್ಧಾರವಾಗಿತ್ತು, ಮುಖ್ಯಮಂತ್ರಿ ಸದಾನಂದ ಗೌಡರ ವಿರುದ್ಧ ಯಡ್ಡಿ ಬೆಂಬಲಿಗರು ಕೂಗಿದ ಧಿಕ್ಕಾರ, ಈಶ್ವರಪ್ಪ ಮತ್ತು ಸದಾನಂದರನ್ನು ಪರೋಕ್ಷವಾಗಿ ಕುಟುಕಿದ ಯಡ್ಡಿಯ ಮಾತಿನ ಧಾಟಿ, ಸಮಾವೇಶಕ್ಕೆ ಗೈರುಹಾಜರಾದ ಸಿ.ಎಂ. ಮುನಿಸು, ನೆರೆದ ಲಕ್ಷಗಟ್ಟಲೆ ಯಡ್ಡಿ ಬೆಂಬಲಿಗರ ಆಕ್ರೋಶ ಮತ್ತು ಚಿಕ್ಕಮಗಳೂರಿಗೆ ತಾನು ಪ್ರಚಾರಕ್ಕೆ ಹೋಗುವುದಿಲ್ಲ ಎಂಬ ಯಡ್ಡಿಯ ಕೊಂಕು ನೆಪ ಎಲ್ಲವೂ ರಾಜ್ಯ ಬಿಜೆಪಿಯ ಅಂತರ್ಯುದ್ಧವನ್ನು ಬಟ್ಟಂಬಯಲಾಗಿಸಿತ್ತು.



ಇತ್ತ ಯಡ್ಡಿಯ ಹತಾಶೆಯ ಪರಮಾವಧಿಯಾದರೆ ಅತ್ತ ಮುಖ್ಯಮಂತ್ರಿ ಸದಾನಂದ ಗೌಡರ ಹೊಟ್ಟೆಸಂಕಟ.

ಇದಕ್ಕೆ ಚಿಕ್ಕಮಗಳೂರು ಉಪಚುನಾವಣೆ ಒಂದು ನೆಪಮಾತ್ರ ಎಂಬುದು ಯಡ್ಡಿಗೂ ಗೊತ್ತು ಈಶ್ವರಪ್ಪ, ಸದಾನಂದ ಗೌಡರಿಗೂ ಚೆನ್ನಾಗಿ ಗೊತ್ತು. ಚಿಕ್ಕಮಗಳೂರಿನ ಮಟ್ಟಿಗೆ ಯಡ್ಡಿ ಏನೇನೂ ಅಲ್ಲ, ಚಿಕ್ಕಮಗಳೂರಿನಲ್ಲಿ ಏಳೆಂಟು ಸಾವಿರ ಮತ್ತು ತರೀಕೆರೆಯಲ್ಲಿ ಸರಿಸುಮಾರು ಐವತ್ತು ಸಾವಿರ ಲಿಂಗಾಯತರ ಹೊರತಾಗಿ ಉಳಿಕೆ ಶೃಂಗೇರಿ, ಮೂಡಿಗೆರೆಗಳಲ್ಲಿ ಒಕ್ಕಲಿಗರದ್ದೇ ಪಾರುಪತ್ಯೆ, ಉಳಿದಂತೆ ಕರಾವಳಿಯ ಕಾಪು, ಕುಂದಾಪುರ, ಕಾರ್ಕಳ ಮತ್ತು ಉಡುಪಿ ಭಾಗಗಳಲ್ಲಿ ಆರೆಸ್ಸೆಸ್ ನಿಷ್ಠೆಯೇ ನಿರ್ಧಾರಕ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಯಡ್ಡಿಗಿಲ್ಲಿ ಯಾವುದೇ ಪ್ರಭಾವವಿಲ್ಲ.



ಹಾಗೊಮ್ಮೆ ತರೀಕೆರೆಯ ಲಿಂಗಾಯತರೇನಾದರೂ ಜಾತಿ ಪ್ರೇಮಕ್ಕೆ ಬಿದ್ದು ಯಡ್ಡಿಯ ಪರವಹಿಸಿ ಬಿಜೆಪಿಗೆ ಉಲ್ಟಾ ಹೊಡೆದರೆಂದರೆ ಸಹಜವಾಗಿ ಉಳಿಕೆ ಒಕ್ಕಲಿಗರೆಲ್ಲ ಸದಾನಂದ ಗೌಡರಿಗಲ್ಲದಿದ್ದರೂ ಲಿಂಗಾಯತರ ಮೇಲಿನ ಸಿಟ್ಟಿಗೆ ಬಿದ್ದು ಬಿಜೆಪಿಗೆ ಓಟು ಹಾಕುತ್ತಾರೆ. ಇದೆಲ್ಲ ಲೆಕ್ಕ ಹಾಕಿಯೇ ಯಡ್ಡಿ ತಾನು ಪ್ರಚಾರದಿಂದ ದೂರವಿದ್ದು ಮುಖ್ಯಮಂತ್ರಿಗಾಗುವ ಮುಜುಗರವನ್ನು ತಪ್ಪಿಸುತ್ತೇನೆಂದು ಜಾರಿಕೊಳ್ಳುತ್ತಿರುವುದು!

ಆದರರ್ಥ ಹೇಗಿದ್ದರೂ ಚಿಕ್ಕಮಗಳೂರಿನ ಒಕ್ಕಲಿಗರು ಕಾಂಗ್ರೆಸ್ಸಿನ ಜಯಪ್ರಕಾಶ್ ಹೆಗಡೆಯವರ ಪರ ನಿಲ್ಲುವುದಕ್ಕೆ ತಾನೇಕೆ ಅಡ್ಡಗಾಲಿಡಲಿ ಎಂಬ ಹುನ್ನಾರ. ಅಲ್ಲಿಗೆ ಯಡ್ಡಿ ಚಿಕ್ಕಮಗಳೂರು ಚುನಾವಣಾ ಪ್ರಚಾರದಿಂದ ದೂರಾಗುವ ಮೂಲಕ ಪರೋಕ್ಷವಾಗಿ ಕಾಂಗ್ರೆಸ್ ಸಜ್ಜನ ಜಯಪ್ರಕಾಶ್ ಹೆಗಡೆಯವರ ಗೆಲುವಿಗೆ ನೆರವಾಗುತ್ತಿದ್ದಾರೆ!

ಗಡ್ಕರಿಗೆ ಧಮಕಿ

ಇದನ್ನೆಲ್ಲ ಲೆಕ್ಕ ಹಾಕಿಯೇ ಸದಾನಂದ ಗೌಡ ಕೊನೆತನಕ ಕಾದು ಇನ್ನು ಯಡ್ಡಿ ಪ್ರಚಾರಕ್ಕಿಳಿಯುವುದಿಲ್ಲ ಎಂಬುದನ್ನು ಖಾತರಿಪಡಿಸಿಕೊಂಡೇ ಯಾವ ನಾಯಕರು ಬರದೇ ಹೋದರೂ ಚಿಕ್ಕಮಗಳೂರಿನಲ್ಲಿ ನಾವು ಗೆಲ್ಲೋದು ಶತಸ್ಸಿದ್ಧ ಎಂದು ಯಡ್ಡಿಗೆ ಟಾಂಗ್ ಕೊಡುತ್ತಾರೆ.

ಏಕಾಏಕಿ ಸದಾನಂದ ಗೌಡ ಯಡ್ಡಿಯನ್ನು ಪರೋಕ್ಷವಾಗಿ ಕೆಣಕಿದ್ದು ಇದೇ ಮೊದಲು. ಅದು ಸಿ.ಎಂ. ಸದಾನಂದರ ಹತಾಶೆ ಕೂಡ. ತನ್ನನ್ನು ಮುಖ್ಯಮಂತ್ರಿ ಪಟ್ಟದಿಂದ ಯಡ್ಡಿ ಇಳಿಸದೇ ಬಿಡಲಾರ ಎಂಬುದು ಸದಾನಂದ ಗೌಡರಿಗೆ ಖಾತರಿಯಾಗಿದ್ದು ಮಾರ್ಚ್ 14 ರ ಬುಧವಾರದ ಸಂಜೆ ಹೊತ್ತಿಗೆ. ಹುಬ್ಬಳ್ಳಿ ಸಮಾವೇಶ ಮುಗಿಸಿದ್ದೇ ವೈಷ್ಣೋದೇವಿ ಯಾತ್ರೆಯ ನೆಪದಲ್ಲಿ ದೆಹಲಿಗೆ ಬಂದ ಯಡ್ಡಿ ರಾಷ್ಟ್ರಾಧ್ಯಕ್ಷ ಗಡ್ಕರಿಯನ್ನು ಕಂಡು ತನ್ನ ಅಂತಿಮ ನಿರ್ಧಾರವನ್ನು ಮುಲಾಜಿಲ್ಲದೆ ಹೇಳಿಬಿಟ್ಟರು. ಯಾವ ಕಾರಣಕ್ಕಾಗಿ ನನ್ನನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲಾಯ್ತೋ ಈಗ ಅದೇ ಕಾರಣದ ಎಫ್‌ಐಆರ್ ಅನ್ನು ಹೈಕೋರ್ಟ್ ವಜಾ ಮಾಡಿದೆ. ಅಲ್ಲಿಗೆ ನಾನು ನಿರ್ದೋಷಿ ಎಂದಂತಾಯ್ತಲ್ಲವೆ? ಇನ್ಯಾಕೆ ನನಗೆ ಇನ್ನೂ ಶಿಕ್ಷೆ? ಇಷ್ಟು ದಿನ ಎಲ್ಲಾ ಅವಮಾನ, ಅನ್ಯಾಯವನ್ನು ಸಹಿಸಿದ್ದಾಯ್ತು, ಇನ್ನು ನನ್ನಿಂದ ಸಾಧ್ಯವಿಲ್ಲ, ನನ್ನನ್ನು ಮತ್ತೆ ಸಿಎಂ ಮಾಡೋದಕ್ಕೆ ಸಾಧ್ಯವಿಲ್ಲ ಅನ್ನೋದಾದ್ರೆ ಈಗಲೇ ಹೇಳಿಬಿಡಿ. ನನ್ನ ದಾರಿ ನಾನು ನೋಡ್ಕೋತೀನಿ....!



ಯಡ್ಡಿಯ ದೃಢ ನಿರ್ಧಾರ ಬಹುಶಃ ಗಡ್ಕರಿಯ ಮನ ತಟ್ಟಿರಬೇಕು. ಯಾವುದಕ್ಕೂ ಟೈಮ್ ಕೊಡಿ. ಚಿಕ್ಕಮಗಳೂರಿನ ಚುನಾವಣೆ ಮುಗಿಯಲಿ. ಅಡ್ವಾಣಿ ಬಳಿ ನಾನೇ ಮಾತಾಡ್ತೀನಿ ಎಂದು ಸಮಾಧಾನ ಮಾಡಿ ಕಳಿಸಿದ್ದಾರೆ. ಇದೇ ಹೊತ್ತಿಗೆ ಲೆಹರ್‌ಸಿಂಗ್ ಅರುಣ್ ಜೆಟ್ಲಿಯನ್ನು ಕಂಡು ವ್ಯವಹಾರ ಕುದುರಿಸಿದ್ದ. ಯಡ್ಡಿಯ ಧಮಕಿ ಎಷ್ಟೊಂದು ತೀವ್ರವಾಗಿತ್ತೆಂದರೆ ಬುಧವಾರ ಸಂಜೆಯೇ ಹೈಕಮಾಂಡ್ ವರಿಷ್ಠರಾದ ರಾಜನಾಥ್ ಸಿಂಗ್, ಗಡ್ಕರಿ, ಸುಷ್ಮಾ ಸ್ವರಾಜ್, ಜೇಟ್ಲಿ, ವೆಂಕಯ್ಯ ನಾಯ್ಡು ಮತ್ತು ಕೋರ್ ಕಮಿಟಿಯ ಸತೀಶ್ ಸೇರಿಕೊಂಡು ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾರೆ.

ಅನಂತ್ ಜೊತೆ ರಾಜಿ

ಒಂದು ಹಂತದಲ್ಲಿ ಎಲ್ಲರೂ ಚಿಂತಾಕ್ರಾಂತರಾದದ್ದು ಯಡ್ಡಿ ಪಕ್ಷ ಬಿಟ್ಟರೆ ಏನಾದೀತೆಂಬ ಬಗ್ಗೆಯೇ. ಮೊನ್ನಿನ ಪಂಚರಾಜ್ಯಗಳ ಚುನಾವಣೆಯಲ್ಲಿ ಗೋವಾ ಹೊರತಾಗಿ ಬೇರೆಲ್ಲೂ ಬಿಜೆಪಿಗೆ ನೆಮ್ಮದಿ ತರಬಲ್ಲ ಲಕ್ಷಣಗಳಿಲ್ಲ, ಉತ್ತರ ಪ್ರದೇಶದಲ್ಲಿ ಹಿಂದಿಗಿಂತಲೂ ಹೀನಾಯಸ್ಥಿತಿ. ಉತ್ತರಖಂಡದಲ್ಲಿ ಕಾಂಗ್ರೆಸ್ ಕೈಯೇ ಮೇಲಾಯಿತು. ಮಣಿಪುರದಲ್ಲಿ ಮತ್ತೆ ಕಾಂಗ್ರೆಸ್ ಗಟ್ಟಿಗೊಂಡಿತ್ತು, ಪಂಜಾಬ್‌ನಲ್ಲಿ ಶಿರೋಮಣಿ ಅಕಾಲಿದಳವಿಲ್ಲದಿದ್ದರೆ ಬಿಜೆಪಿಗೆ ಅಸ್ತಿತ್ವರೇ ಇಲ್ಲವೆಂದಾಯ್ತು, ಉತ್ತರ ಪ್ರದೇಶದ[ಲ್ಲಿ] ಮುಲಾಯಂ ಮಗ ಮಾಡಿದ ಮ್ಯಾಜಿಕ್‌ನಿಂದಾಗಿ ತೃತೀಯ ರಂಗಕ್ಕೆ ಚಾಲನೆ ದೊರಕಿತೇ ಹೊರತು ಎನ್‌ಡಿಎ ಮ[ತ್ತೆ] ಅಧಿಕಾರ ಹಿಡಿಯುವ ಎಲ್ಲಾ ಸಾಧ್ಯತೆಗಳು ಕ್ಷೀಣಗೊಂಡಿತು.

ಇಂಥಾ ಸ್ಥಿತಿಯಲ್ಲಿ ಯಡ್ಡಿ ಏನಾದರೂ ಪಕ್ಷ ತೊರೆದು ಹೊರನಡೆದರೆಂದರೆ ಕರ್ನಾಟಕದ ಮಟ್ಟಿಗೆ ಬಿಜೆ[ಪಿ] ನೆಲಕಚ್ಚಿದಂತೆಯೇ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಕನಿಷ್ಠ 20 ಎಂ.ಪಿ ಸೀಟುಗಳಾದರೂ ಗಿಟ್ಟದಿದ್ದರೆ ರಾಷ್ಟ್ರಮಟ್ಟದಲ್ಲಿ ಬಿಜೆಪಿ ಮೂರು ಕಾಸಿನ ಬೆಲೆ. ಎನ್‌ಡಿಎಗೆ ಅಧಿಕಾರ ಹಿಡಿಯುವುದಕ್ಕೂ ಇದೇ ಮಾನದಂಡ. ಇದೆಲ್ಲ ಕೈತಪ್ಪ[ದ] ಹಾಗೆ ನೋಡಿಕೊಳ್ಳಬೇಕೆಂದರೆ ಶತಗತಾಯ ಯಡ್ಡಿ ಪ[ಕ್ಷ] ಬಿಡದಂತೆ ಮಾಡಲೇಬೇಕು.

ಗಡ್ಕರಿಯ ಈ ಲೆಕ್ಕಾಚಾರ ಒಂದು ಹಂತದಲ್ಲಿ ಸುಷ್ಮಾ, ನಾಯ್ಡು, ರಾಜನಾಥ್‌ಗೂ ಸರಿಕಂಡಿದೆ. ಆದರ[ೆ] ತೊಡಕಿರುವುದು ಸುಪ್ರೀಂಕೋರ್ಟಿನ ಗ್ರೀನ್ ಬೆಂಚಿನಲ್ಲಿ, ಪರಿಸರ ಸಂಬಂಧಿ ಪ್ರಕರಣಗಳಿಗೆಂದೇ ಮೀಸಲಾದ ಜಸ್ಟೀಸ್ ಕಪಾಡಿಯಾ ಕೋರ್ಟಿನಲ್ಲಿ ಕರ್ನಾಟಕದ ಗಣಿ ಲೂಟಿಯ ಕೇಸೂ ಮುಖ್ಯವಾದದ್ದು. ಧಾರವಾಡದ ಸಮಾಜ ಪರಿವರ್ತನಾ ವೇದಿಕೆಯ ಹಿರೇಮಠ್ ಈಗಾಗಲೇ ಗಣಿ ಲೂಟಿ ಕುರಿತಂತೆ ಸಿಬಿಐ ತನಿಖೆಗೆ ಆದೇಶಿ[ಸಲು] ಹಾಕಿದ ಅರ್ಜಿಯ ವಿಚಾರಣೆ ಬರುವುದು ಮಾರ್ಚ್ 16 ರ ಶುಕ್ರವಾರಕ್ಕೆ. ಇದೇ ಹೊತ್ತಿಗೆ ಸಿಇಸಿ ಅರ್ಥಾತ್ ಕೇಂದ್ರ ಉನ್ನತಾಧಿಕಾರ ಸಮಿತಿ ಸಿಬಿಐ ತನಿಖೆ ಕುರಿತಂತೆ ತನ್ನ ಸಲಹೆ ನೀಡಲೇಬೇಕು. ಹಾಗೊಮ್ಮೆ ಸಿಇಸಿ ಸಿಬಿಐ ತನಿಖೆಗೆಂದೇ ಪಟ್ಟು ಹಿಡಿದರೆ ಸುಪ್ರೀಂಕೋರ್ಟ್ ನಿರ್ದಾಕ್ಷಿಣ್ಯವಾಗಿ ಕರ್ನಾಟಕ ಗಣಿ ಲೂಟಿಯನ್ನೂ ಸಿಬಿಐಗೊಪ್ಪಿಸುತ್ತದೆ. ಆಗ once again ಸಿಬಿಐ ಯಡ್ಡಿಯ ಹೆಗಲ ಮೇಲೆ ಕೈಯಿಟ್ಟಿತೆಂದರೆ ಯಡ್ಡಿಯೇನಾದರೂ ಆ ಹೊತ್ತಿಗೆ ಸಿ.ಎಂ.ಗಾದಿಗೇರಿದ್ದೇ ಆದರೆ ರಾಷ್ಟ್ರಮಟ್ಟದಲ್ಲಿ ಬಿಜೆಪಿಗದು ದೊಡ್ಡ ಮುಖಭಂಗ!

ತುಮಕೂರು ಸಂಸದ ಬಸವರಾಜು ಬೆನ್ನಲ್ಲಿ ಸೋಮಣ್ಣನಿಗೇನು ಕೆಲಸ?



ಸೋಮಣ್ಣ

ಹಾಗೊಮ್ಮೆ ಸದಾನಂದ ಗೌಡರನ್ನು ಪದಚ್ಯುತಿಗೊಳಿಸಲು ಹೈಕಮಾಂಡ್ ಸಮ್ಮತಿಸದ ಪಕ್ಷದಲ್ಲಿ ಯಡ್ಡಿಗಿರುವ ಒಂದೇ ದಾರಿಯೆಂದರೆ ಹೆಚ್ಚೂಕಮ್ಮಿ ನಲವತ್ತರಷ್ಟಿರುವ ತನ್ನ ಬೆಂಬಲಿಗರನ್ನು ಕಟ್ಟಿಕೊಂಡು ಬಿಜೆಪಿ ಒಡೆಯುವುದು. ಹೆಚ್ಚೆಂದರೆ ಈ ಸಂಖ್ಯೆ 45 ಆದರೂ ಆಗಬಹುದು. ಹಾಗಾದ ಪಕ್ಷದಲ್ಲಿ ಯಡ್ಡಿಗಿರುವ ಒಂದೇ ಆಸರೆಯೆಂದರೆ ಅದು ರಾಜ್ಯ ರೈಲ್ವೇ ಮಂತ್ರಿ ಮತ್ತು ಕಾಂಗ್ರೆಸ್ ನಾಯಕ ಕೆ.ಎಚ್. ಮುನಿಯಪ್ಪ.

ಯಡ್ಡಿ ಮುಖ್ಯಮಂತ್ರಿಯಾಗಿದ್ದಷ್ಟೂ ಕಾಲ ತನ್ನ ಪಕ್ಷಭೇದ ಮರೆತು ಯಡ್ಡಿಯನ್ನು ಆದರ್ಶ ಮುಖ್ಯಮಂತ್ರಿಯೆಂಬಂತೆ ಹೊಗಳಿದ್ದು ಕೆ.ಎಚ್. ಮುನಿಯಪ್ಪ ಅದಕ್ಕೆ ಪ್ರತಿಯಾಗಿ ಮುನಿಯಪ್ಪನವರ ಲ್ಯಾಂಡ್ ಸಂಬಂಧ ವ್ಯವಹಾರಗಳನ್ನೆಲ್ಲ ಯಡ್ಡಿ ಪೂರೈಸಿಕೊಟ್ಟರು. ಮುನಿಯಪ್ಪನವರ ಅಳಿಯ ಚಿಕ್ಕಪೆದ್ದಣ್ಣ ಎಂಬ ಕಡುಭ್ರಷ್ಟ ಸಬ್ ರಿಜಿಸ್ಟ್ರಾರ್‌ನನ್ನು ಫಲವತ್ತಾದ ಲಗ್ಗೆರೆ ಸಬ್ ರಿಜಿಸ್ಟ್ರಾರ್ ಕಚೇರಿಗೆ ಯಡ್ಡಿಯೇ ಹಾಕಿಕೊಟ್ಟರು. ಇಂಥ ಪಕ್ಷಾತೀತ ನೆಂಟಸ್ತಿಕೆ ಈಗ ಫಲ ಕೊಡುತ್ತಿದೆ. ಕೆ.ಎಚ್. ಮುನಿಯಪ್ಪ ಮುಖ್ಯಮಂತ್ರಿಯಾಗುವುದಾದರೆ ತಾನು ಬಿಜೆಪಿ ಒಡೆಯಲು ಸಿದ್ಧ ಎಂಬ ಸೂಚನೆಯೊಂದನ್ನು ತುಮಕೂರಿನ ಬಿಜೆಪಿ ಸಂಸದ ಜಿ.ಎಸ್. ಬಸವರಾಜು ಮೂಲಕ ಯಡ್ಡಿ ಕಾಂಗ್ರೆಸ್ ಹೈಕಮಾಂಡಿಗೆ ರವಾನಿಸಿದ್ದಾರೆ.



ಮುನಿಯಪ್ಪ

ಸದ್ಯ ಯಡ್ಡಿ ಮತ್ತು ಕಾಂಗ್ರೆಸ್ ದೋಸ್ತಿಯ ಪೌರೋಹಿತ್ಯ ವಹಿಸಿರುವುದು ಕೂಡ ತುಮಕೂರು ಸಂಸದ ಬಸವರಾಜುವೆ. ಹಿಂದೆ ಕಾಂಗ್ರೆಸ್‌ನಲ್ಲಿದ್ದು ಬಿಜೆಪಿಗೆ ನೆಗೆದ ಬಸವರಾಜುಗೆ ಈಗಲೂ ಕಾಂಗ್ರೆಸ್ ಜೊತೆ ಹಳೆಯ ನಂಟಿದೆ. ಚಿದಂಬರಂ, ಪ್ರಣಬ್ ಮುಖರ್ಜಿಯವರಂಥ ಹಿರಿಯರ ಜೊತೆ ಅದೇ ಸಲುಗೆಯಿದೆ. ಜೊತೆಗೆ ಮೊಯ್ಲಿ, ಕೃಷ್ಣ, ಖರ್ಗೆಯಂಥವರ ಜೊತೆಗೂ ಅಷ್ಟೇ ಆತ್ಮೀಯತೆಯಿದೆ. ಈಗ ಯಡ್ಡಿ ಪರವಾಗಿ ಕಾಂಗ್ರೆಸ್ ಜೊತೆ ವ್ಯವಹಾರ ಕುದುರಿಸುತ್ತಿರುವ ಸಂಸದ ಬಸವರಾಜುಗೆ ಒತ್ತಾಸೆಯಾಗಿರುವುದು ವಿಜಯನಗರದ 'ವೀರಪುತ್ರ' ಸೋಮಣ್ಣ, ಮೊನ್ನೆ ತರೀಕೆರೆ, ಬೀರೂರು ಕಡೆಯ ಲಿಂಗಾಯತ ಮುಖಂಡರನ್ನೆಲ್ಲ ಕರೆದು ಬಿಜೆಪಿಗೆ ವಿರುದ್ಧವಾಗಿ ಮತ ಹಾಕುವ ಮೂಲಕ ಸದಾನಂದ ಗೌಡರಿಗೆ ಬುದ್ಧಿ ಕಲಿಸುವಂತೆ ಒಳಸಂಚು ನಡೆಸಿದ್ದೂ ಇದೇ ಸೋಮಣ್ಣ, ಇದೆಲ್ಲ ಅಂತಿಮವಾಗಿ ಶೆಟ್ಟರ್ ಪಾಲಿಗೆ ವರದಾನವಾದರೂ ಅಚ್ಚರಿಯಿಲ್ಲ.



ಜಿ.ಎಸ್. ಬಸವರಾಜು

ಕುದುರಿದ ದೋಸ್ತಿ

ಇದನ್ನು ಮುಂದಾಲೋಚಿಸಿಯೇ ಯಡ್ಡಿಗೆ ಚಿಕ್ಕಮಗ ...ದಿನ ಚುನಾವಣೆ ತನಗೆ ಕಾಯುವಂತೆ ಸೂಚಿಸುವುದು ...ತ್ರಿ ಗಾದಿಯ ಮುಂದೆ ಬೇರೆ ದಾರಿಯಾದರೂ ಎಲ್ಲಿತ್ತು? ...ಕ್ಷ ಬಿಡುವ ತನ್ನ ಧಮಕಿಗೆ ಹೈಕಮಾಂಡ್ ...ಗುತ್ತಿರುವುದು ಪಂಚರಾಜ್ಯಗಳ ಫಲಿತಾಂಶ ...ಮುದ್ದಾಗಲೇ ಯಡ್ಡಿಗೆ ಗೊತ್ತಾಗಿತ್ತು. ಹೈಕೋರ್ಟ್ ...ಕಾಯುಕ್ತರ ಎಫ್‌ಐಆರ್ ವಜಾಗೊಳಿಸಿದಾಗ ಅದು ...ಷ್ಟು ನಿಚ್ಚಳಗೊಂಡಿತ್ತು. ಅದಕ್ಕೂ ಮೊದಲೇ ಕೇಂದ್ರ ...ಜ್ಯ ಮಂತ್ರಿ ಮತ್ತು ಕಾಂಗ್ರೆಸ್ ನಾಯಕ ಕೆ.ಎಚ್. ...ನಿಯಪ್ಪನವರ ಜೊತೆಗೆ ಯಡ್ಡಿ ಮಾತುಕತೆ ನಡೆಸಿದ ...ನವು ಗಡ್ಕರಿಗಷ್ಟೇ ಅಲ್ಲ ಕಡುವೈರಿ ಅನಂತ್‌ಕುಮಾರ್‌ಗೂ ...ಟಾಗಿತ್ತು.

...ಅಷ್ಟಿಷ್ಟು ಬಿಜೆಪಿ ಶಾಸಕರನ್ನು ಕಟ್ಟಿಕೊಂಡು ಹೊಸ ...ಕಟ್ಟಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆ ...ಂದಾಣಿಕೆ ಮಾಡಿಕೊಳ್ಳಲು ಯಡ್ಡಿಯ ದುರಾಲೋಚನೆ ...ಹುವಾಗಿ ಬಿಜೆಪಿಗಷ್ಟೇ ಅಲ್ಲ ಮುಂದೊಮ್ಮೆ ಕೇಂದ್ರ ...ತ್ರಿಯಾಗುವ ಕನಸು ಕಂಡ ತನಗೂ ಅಪಾಯವೇ ...ಬುದು ಅನಂತ್‌ಕುಮಾರ್‌ಗೂ ಅರಿವಿತ್ತು. ಅದಕ್ಕೆ ...ತೆ ಯಡ್ಡಿಯೇ ಕಾಡಿಬೇಡಿ ರಾಜಿಗೆ ಗೋಗರೆದರೆ ...ಗೆ ತಾನೇ ಅನಂತ್ ಬೇಡ ಅನ್ನಲು ಸಾಧ್ಯ?

...ತಾನೇ ಮುಖ್ಯಮಂತ್ರಿ ಮಾಡಿದ ಸದಾನಂದ ಗೌಡನೇ ...ಗಿರಿದ ಮೇಲೆ ಇನ್ನು ಅನಂತ್‌ಗೆ ಶರಣಾಗುವುದರಲ್ಲಿ ...ಏನಿದೆ? ಅನಂತ್, ಶೆಟ್ಟರ್, ಅಶೋಕ್ ಆ ಕಾಲ ...ದಲೂ ತನ್ನ ವಿರೋಧಿ ಪಾಳಯದವರೆ. ಆದರೂ ...ನಂದ ಗೌಡ ಮಾಡಿದ ದ್ರೋಹದ ಮುಂದೆ ಇವರ ...ಷ್ಮನಿ ಏನೇನೂ ಅಲ್ಲ. ಯಾರನ್ನು ನಂಬಿ ಸಿ.ಎಂ. ...ಬಿಟ್ಟುಕೊಟ್ಟೆನೋ ಆತನೇ ತನಗೆ ಮುಳುವಾದ ...ಲೆ ತಾನಿನ್ನು ಹಳೇ ಶತ್ರುಗಳ ಜೊತೆ ಕೈಜೋಡಿಸು ...ದರಲ್ಲಿ ಅವಮಾನವೇನಿದೆ?

...ಇಂಥ ಮನಸ್ಥಿತಿಗೆ ಬಿದ್ದೇ ಶುರುವಿನಲ್ಲಿ ಅಶೋಕ್‌ರನ್ನು ...ಮಾಡಿಕೊಂಡ ಯಡ್ಡಿ ಆನಂತರ ಸುತ್ತೂರು ಸ್ವಾಮಿಗಳನ್ನು ...ಬಿಟ್ಟು ಶೆಟ್ಟರ್‌ರನ್ನು ಪಳಗಿಸಿಕೊಂಡರು. ಈಗ ಇದೇ ...ರ್ ಮತ್ತು ಅಶೋಕ್ ಮೂಲಕ ಅನಂತ್ ಜೊತೆ ...ಸ್ತಿಕೆಗಿಳಿದಿದ್ದಾರೆ. ಮಂಗಳವಾರ ದೆಹಲಿಗೆ ಬಂದಿದ್ದೇ ...ಷ್ಯ ಅಡ್ಡೆಯೊಂದರಲ್ಲಿ ಅನಂತ್ ಮತ್ತು ಯಡ್ಡಿ ...ಖಾಮುಖಿಯಾಗಿದ್ದಾರೆ. ಹೇಗಿದ್ದರೂ ತಾನು ...ಖ್ಯಮಂತ್ರಿಯಾಗುವುದು ಕಷ್ಟ. ಇನ್ನು ಕೇಂದ್ರದಲ್ಲಿ ...ಪಿ ಮಂತ್ರಿಯಾಗಲು ಯಡ್ಡಿಯಿಂದ ಬಲ- ಬೆಂಬಲ ...ಕ್ಕುವುದಾದರೆ ಜೊತೆಗೆ ಯಡ್ಡಿ ತನಗೆ ಶರಣಾಗುವ ...ಮೂಲಕ ತನ್ನ ಆಧಿಪತ್ಯವೇ ಮೆರೆಯುವುದಾದರೆ ಅದೂ ...ಬಿಡಲೆಂದೇ ಅನಂತ್ ಕೈಜೋಡಿಸಿದ್ದಾರೆ.

ಸಿಬಿಐ ಕುಣಿಕೆಯಲ್ಲಿ?

...ಹೆಚ್ಚೂಕಮ್ಮಿ ಒಂದೂವರೆ ಗಂಟೆಕಾಲ ಅನಂತ್‌ರನ್ನು ...ಸ್ತಿ ಪುಸಲಾಯಿಸಿದ್ದಾರೆ. ಬಿಜೆಪಿಯ ಆಪ್ತ ವಲಯವೇ ...ಳುವಂತೆ ತಾನು ಮುಖ್ಯಮಂತ್ರಿಯಾದ ಪಕ್ಷದಲ್ಲಿ ಅನಂತ್ ...ವಾಗಿ ಏನೇನು ಮಾಡುತ್ತೇನೆಂಬ ಪ್ರಮಾಣವನ್ನೂ ...ಡಿದ್ದಾರೆ. ಈ ಹಿಂದೆ ತನ್ನಿಂದಾದ ಎಲ್ಲಾ ತಪ್ಪಿಗೂ ...ಅಂಗಲಾಚಿದ್ದಾರೆ. ಇನ್ನಾವತ್ತಿಗೂ ನೀವು ಹಾಕಿದ ...ದಾಟುವುದಿಲ್ಲ ಎಂದು ದಮ್ಮಯ್ಯ ಗುಡ್ಡೆಯನ್ನೂ ...ದಿದ್ದಾರೆ. ಅದೇನು ವ್ಯವಹಾರ ಕುದುರಿತೋ ಅಂತೂ ...ನಂತ್ ಮಿತ್ರನಾಗಿದ್ದಾರೆ.

...ಸದ್ಯ, ಅನಂತ್-ಯಡ್ಡಿ ಪುನರ್‌ಮಿಲನದ ...ಸ್ಥಿತಿಯೇನೆಂದರೆ ಸುಪ್ರೀಂಕೋರ್ಟ್ ಏನಾದರೂ ಸಿಬಿಐ ...ನೆಗೆ ಆದೇಶ ನೀಡದೇ ಹೋದ ಪಕ್ಷದಲ್ಲಿ ಇನ್ನೆರಡು ...ವದೊಳಗೆ ಯಡ್ಡಿ ಸಿ.ಎಂ.ಗಾದಿಗೇರುವುದು ಪಕ್ಕಾ. ಆ ...ಣಕ್ಕೇ ಬಜೆಟ್ ಮಂಡನೆಯನ್ನು ಸದಾನಂದ ಗೌಡ ...ಂದೂಡಬೇಕು. ಬಜೆಟ್ ಮುಂದೂಡಿದ್ದಕ್ಕೆ ಪೂರಕವಾಗಿ ...ಾನುದಾನವನ್ನು ಮಂಡಿಸಬೇಕು. ಹಾಗೊಮ್ಮೆ ಸುಪ್ರೀಂ ...ರ್ಟ್ ಸಿಬಿಐ ತನಿಖೆಗೇನಾದರೂ ಆದೇಶಿಸಿತೆಂದರೆ ...ತನ್ನ ಬದಲಾಗಿ ಶೆಟ್ಟರ್ ಮುಖ್ಯಮಂತ್ರಿ ಗಾದಿಗೇರಬೇಕು. ...ನಂದ ಗೌಡ ತನ್ನ ದ್ರೋಹದಂಡ ಕಟ್ಟಲೇಬೇಕು. ...ದಂತೆ ಪಕ್ಷದ ರಾಷ್ಟ್ರಾಧಿಪತಿ ಅದ್ವಾಣಿಯನ್ನು ...ಭಾಳಿಸುವ ಹೊಣೆ ಕೂಡ ಅನಂತ್ ಹೊರಬೇಕು. ...ದರಲ್ಲೊಂದಾಗದ ಪಕ್ಷದಲ್ಲಿ ತಾನು ಪಕ್ಷ ಬಿಡುವುದು ...ರಂಟಿ ಎಂದೇ ಯಡ್ಡಿ ಹಠ ಹಿಡಿದಿದ್ದಾರೆ.

...ಶುಕ್ರವಾರ ಅಂದರೆ ಮಾರ್ಚ್ 16 ರ, ...ಪ್ರೀಂಕೋರ್ಟ್‌ನ ನ್ಯಾಮೂ. ಕಪಾಡಿಯಾ ಬೆಂಚ್ ...ವರ ಹುರುಪಿನಿಂದ ಮುಂದೆ ಸಿಇಸಿ ತನ್ನ ವರದಿಯನ್ನು ...ಪಡಿಸಲಿದೆ. ಸಿಬಿಐ ತನಿಖೆ ಅನಿವಾರ್ಯವೆಂದೇನಾದರೂ ...ಷ್ಟು ಹಿಡಿದರೆ ಯಡ್ಡಿಯ ಸಿಎಂ ಕುರ್ಚಿಯ ...ಗೆ ಬೆಂಕಿ ಬಿದ್ದಂತೆಯೇ. ಅಲ್ಲಿಗೆ ಶೆಟ್ಟರ್ ಅದೃಷ್ಟದ ...ಬಾಗಿಲು ತೆರೆದುಕೊಳ್ಳಲಿದೆ. ಹಾಗೆಯೇ ಸದಾನಂದ ಗೌಡರ ...ಅದೃಷ್ಟದ ಅಂಗಳೂ ಬರಿದಾದಂತೆಯೇ.

...ಚಂಡಿಗೆ ಸಿಬಿಐ ಅಂಗಳ, ಬಂದುಬಿದ್ದಿದೆ!

ಶ್ರೀ

ಬಿಜೆಪಿಯ ಬೈಪಾಸ್ ಗಂಡಾಗುಂಡಿ



ಉಡುಪಿ-ಚಿಕ್ಕಮಗಳೂರು ಉಪ ಚುನಾವಣೆಯನ್ನು ಗೆಲ್ಲಲು ಆಡಳಿತಾರೂಢ ಬಿಜೆಪಿ ಸೈತಾನ ಸುನಿಲ್‌ನನ್ನು ಮುಂದಿಟ್ಟುಕೊಂಡು ನಾನಾ ಕಸರತ್ತುಗಳಲ್ಲಿ ತೊಡಗಿದ್ದರೆ, ಮತ್ತೊಂದೆಡೆ ಮುಖ್ಯಮಂತ್ರಿ ಸದಾನಂದ ಗೌಡನ ದಗಲ್ಬಾಜಿ ನೀತಿಯನ್ನು ವಿರೋಧಿಸಿ ಪಡುಬಿದ್ರಿಯ ಬಳಿ ದಲಿತರು ಮತ್ತು ಅಲ್ಪ ಸಂಖ್ಯಾತರು ಈ ಚುನಾವಣೆಯನ್ನು ಬಹಿಷ್ಕರಿಸುವುದಾಗಿ ಘೋಷಿಸಿದ್ದಾರೆ. ಹೀಗಿದ್ದರೂ ಈ ಸುದ್ದಿ ಮಾಧ್ಯಮಗಳಲ್ಲಿ ಸುದ್ದಿಯಾಗದೆ ಹಾಗೆ ಮೂಲೆಗುಂಪಾಗಿ ಉಳಿದಿರುವುದು ಸೋಜಿಗದ ಸಂಗತಿ.

ರಾಷ್ಟ್ರೀಯ ಹೆದ್ದಾರಿ 66 ಅನ್ನು ಚತುಷ್ಪಥ ಹೆದ್ದಾರಿಯಾಗಿ ವಿಸ್ತರಿಸುವ ಕಾಮಗಾರಿ ಸುರತ್ಕಲ್‌ನಿಂದ ಕುಂದಾಪುರದವರೆಗೆ ಚಾಲನೆ ಪಡೆದುಕೊಂಡಿದೆ. ಇದು ರಾಷ್ಟ್ರೀಯ ಹೆದ್ದಾರಿಯಾದ್ದರಿಂದ ನಿರ್ಮಾಣದ ಪ್ರಧಾನ ಹೊಣೆಗಾರಿಕೆ ಕೇಂದ್ರ ಸರ್ಕಾರದ್ದೆ. ಹೀಗಿದ್ದರೂ ಬಿಜೆಪಿ ಸರ್ಕಾರದ ಜನವಿರೋಧಿತನ ಈಗ ಹೆದ್ದಾರಿಗೂ ಬಂದಿದೆ. ಮನುವಾದಿ ಸದಾನಂದನ ಗೋಸುಂಬೆ ಮುಖವಾಡವನ್ನು ಈ ಪ್ರಕರಣ ಬೆತ್ತಲಾಗಿಸಿದೆ.

ಯಾಕೆಂದರೆ ಸದಾನಂದ ಗೌಡನ ಸೋಗಲಾಡಿ ಮಾತುಗಳಿಗೆ ಮರುಳಾಗಿ ಇಲ್ಲಿನ ಜನ ಈತನನ್ನು ಲೋಕಸಭೆಗೆ ಕಳಿಸಿದ್ದರು. ಇತ್ತ ಯಡ್ಡಿಯ ವಿಶ್ವಾಸ ಗಳಿಸಿ ಹೇಗೋ ಮುಖ್ಯಮಂತ್ರಿಯೂ ಆಗಿದ್ದಾನೆ. ಅದಕ್ಕೆ ಪ್ರತ್ಯುಪಕಾರವಾಗಿ ಪಡುಬಿದ್ರಿಯ ಬಡ ಮತದಾರರ ಬೆನ್ನಿಗೆ ಚೂರಿ ಇಟ್ಟಿದ್ದಾನೆ. ಶ್ರೀಮಂತರ ಅಕ್ರಮ ಬಂಗಲೆಗಳನ್ನು ರಕ್ಷಿಸಲಿಕ್ಕಾಗಿ ಸುಮಾರು 75-80 ಬಡ ಜನರ ಮನೆಗಳನ್ನು ಸರ್ವನಾಶ ಮಾಡಲು ಆದೇಶಿಸಿದ್ದಾನೆ. ಇಂಥ ವಿಷಯ ಎಂದಿನಂತೆ ನಮಗೆಲ್ಲಾ ಮಾಮೂಲು. ಆದರೆ ಪಡುಬಿದ್ರಿಯ ಜನರಿಗೆ ಮಾತ್ರ ಇದು ಹೊಸ ಅನುಭವ.

ಸುರತ್ಕಲ್‌ನಿಂದ ಹಿಡಿದು ಕುಂದಾಪುರದವರೆಗೂ ಈ ಹೆದ್ದಾರಿಯನ್ನು ವಿಸ್ತರಿಸಿ 4 ಲೇನ್ ಹೈವೇ ಮಾಡುತ್ತಿದ್ದರೆ, ಎಲ್ಲೂ ಬೈಪಾಸ್ ನಿರ್ಮಿಸುವ ಪ್ರಶ್ನೆಯೇ ಉದ್ಭವಿಸಿಲ್ಲ. ಆದರೆ ಇಷ್ಟು ಚಿಕ್ಕ ಊರಾದ ಪಡುಬಿದ್ರಿಯಲ್ಲಿ ಮಾತ್ರ ಬೈಪಾಸ್ ನಿರ್ಮಿಸಬೇಕೆಂದು ಸದಾನಂದ ರಾತ್ರೋರಾತ್ರಿ ಸಂಶೋಧನೆ ನಡೆಸಿ ಕಂಡುಹಿಡಿದಿದ್ದಾನೆ. ಸದಾನಂದನ ಈ ರಾತ್ರಿ ಸಂಶೋಧನೆಯ ಒಳಗುಟ್ಟೇನೆಂದರೆ ರಸ್ತೆ ವಿಸ್ತರಣೆಯಾದರೆ ತನ್ನ ಆಪ್ತರ ವಾಣಿಜ್ಯ ಮಳಿಗೆಗಳನ್ನು ಕೆಡವಬೇಕಾಗುತ್ತದೆ. ಅದೂ ಸಹ ಕಾನೂನುಬಾಹಿರವಾಗಿ ನಿರ್ಮಿತವಾದಂಥವು. ಯಾಕೆಂದರೆ 1986ರಲ್ಲೇ ಹೆದ್ದಾರಿ ಸರ್ವೆ ನಡೆಸಿದ್ದ ಸರ್ಕಾರ ರಸ್ತೆಯಿಂದ 40 ಮೀಟರ್ ಜಾಗವನ್ನು ನೋಟಿಫೈ ಮಾಡಿತ್ತು. ನಂತರ ಮತ್ತೊಮ್ಮೆ 2000ನೇ ಇಸವಿಯಲ್ಲಿ ಆ ಸ್ಥಳದಲ್ಲಿ ಯಾವುದೇ ನಿರ್ಮಾಣ ಕಾರ್ಯ ಕೈಗೊಳ್ಳದಂತೆ ನೋಟಿಸ್ ನೀಡಿತ್ತು. ಹೀಗಿದ್ದರೂ ಪ್ರಭಾವಶಾಲಿಗಳಾದ ಒಂದೇ ಕುಟುಂಬದ ಈ ಮಹಾಶಯರು ಹೆದ್ದಾರಿಗೆ ಸೇರಿದ ಜಾಗದಲ್ಲಿ ಭಾರೀ ಬಂಗಲೆಗಳನ್ನು ಎಬ್ಬಿಸಿರುವುದಲ್ಲದೆ, ಈಗಿರುವ ರಸ್ತೆಯಲ್ಲೇ ಪಾರ್ಕಿಂಗ್ ಕೂಡ ಮಾಡಿಕೊಂಡಿದ್ದಾರೆ. ಸ್ಥಳೀಯ ಆಡಳಿತದ ನಿಯಮಾವಳಿಗಳನ್ನೂ ಉಲ್ಲಂಘಿಸಿದ್ದಾರೆ. ಕನಿಷ್ಟ ಪಕ್ಷ ರಸ್ತೆ ಬದಿಯ ಚರಂಡಿಯನ್ನೂ ಬಿಟ್ಟಿಲ್ಲವೆಂದರೆ





ಲೆಕ್ಕಹಾಕಿ. ಈ ಬಂಗಲೆಗಳಿಂದ ಬರುವ ಗಲೀಜು ನೀರು ಸೀದಾ ರಸ್ತೆಗೇ ಹರಿಯುತ್ತದೆ. ಯಾಕೆಂದರೆ ನಮ್ಮ ನಾಡಿನಲ್ಲಿ ದುಡ್ಡೇ ದೊಡ್ಡಪ್ಪ! ಈ ಬಲಾಢ್ಯ ಕುಟುಂಬ ಅನಾದಿ ಕಾಲದಿಂದಲೂ ಹೋಟೇಲ್ ಉದ್ಯಮದಲ್ಲಿ ತೊಡಗಿಸಿಕೊಂಡಿದೆ.

ಈಗ ಈ ಕುಳಗಳು ತಮ್ಮ ಅನಧಿಕೃತ ಕಟ್ಟಡಗಳನ್ನು ಉಳಿಸಿಕೊಳ್ಳಲು ಬೈಪಾಸ್ ರಸ್ತೆ ಬೇಕೆಂದು ಡಿಮ್ಯಾಂಡ್ ಮಾಡುತ್ತಿದ್ದರೆ ಪಡುಬಿದ್ರಿಯ ಇಡೀ ಬಡಜನತೆ ಈ ಹುನ್ನಾರದ ವಿರುದ್ಧ ತಿರುಗಿಬಿದ್ದಿದ್ದಾರೆ. ಯಾಕೆಂದರೆ ಈ ಒಳಸಂಚಿಗೆ ಬಲಿಯಾಗುವುದು ಇದೇ ಬಡಜನರ ಬದುಕು.

ಜನರ ಪ್ರತಿಭಟನೆಯ ಫಲವಾಗಿ ಉಡುಪಿ ಜಿಲ್ಲಾಧಿಕಾರಿ ಎಮ್‌ಟಿ ರೇಜು 2011 ರ ಆಗಸ್ಟ್ 31 ರಂದು ಜನಾಭಿಪ್ರಾಯ ಸಂಗ್ರಹ ಸಭೆ ಕರೆದಿದ್ದರು. ಸಭೆಯಲ್ಲಿ ವ್ಯಕ್ತವಾದ ಒಕ್ಕೊರಲಿನ ಜನಾಭಿಪ್ರಾಯವನ್ನು ಕಂಡು ಸರ್ಕಾರಕ್ಕೆ ವರದಿಯನ್ನು ಕಳಿಸಿದ್ದಾರೆ. ಆ ವರದಿಯ ಶಿಫಾರಸ್ಸಿನ ಸಾರಾಂಶವೇನೆಂದರೆ ಈ ಹೆದ್ದಾರಿಯಲ್ಲಿ ಬೈಪಾಸ್ ನಿರ್ಮಿಸುವುದಕ್ಕಿಂತ ರಸ್ತೆ ವಿಸ್ತರಣೆಯೇ ಸೂಕ್ತ, ಯಾಕೆಂದರೆ ವಿಸ್ತರಣೆಗಿಂತ ಬೈಪಾಸ್‌ನಲ್ಲಿ ಆಗುವ ಹಾನಿ ಹೆಚ್ಚು, ಅಲ್ಲದೇ ಬೈಪಾಸ್ ರಸ್ತೆಯ ವೆಚ್ಚವೂ ಅಧಿಕವಾಗುವುದಲ್ಲದೇ ಕಾಮಗಾರಿಯಲ್ಲಿ ಸಮಯ ವಿಳಂಬವೂ ಆಗುತ್ತೆ, ಆದ್ದರಿಂದ ರಸ್ತೆ ವಿಸ್ತರಣೆ ಮಾಡುವುದೇ ಸೂಕ್ತ ಎಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ವರದಿ ಕಳಿಸಿದ್ದಾರೆ. ಕುಂದಾಪುರದ ಎಸಿ, ಉಡುಪಿಯ ತಹಶೀಲ್ದಾರ್ ಹಾಗು ಪಡುಬಿದ್ರಿಯ ಗ್ರಾಮಲೆಕ್ಕಿಗರು ಮಾತ್ರವಲ್ಲದೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವೂ ಸಹ ಈ ಅಭಿಪ್ರಾಯವನ್ನೇ ಅನುಮೋದಿಸಿದೆ. ವೈಜ್ಞಾನಿಕವಾಗಿರುವ ಜಿಲ್ಲಾಧಿಕಾರಿ ವರದಿಯನ್ನೇ ಜಾರಿ ಮಾಡುವಂತೆ ಆದೇಶಿಸಬೇಕೆಂದು ಇಲ್ಲಿನ ಜನರು ಕಳೆದ 6-7 ತಿಂಗಳುಗಳಿಂದಲೂ ಹೋರಾಡುತ್ತಾ ಬಂದಿದ್ದಾರೆ. ಇದಕ್ಕೆ ಕೆಲವು ಸಂಘಸಂಸ್ಥೆಗಳೂ ಬೆಂಬಲಿಸಿವೆ.

ಇವೆಲ್ಲಾ ಒಂದು ಕಡೆಯಾದರೆ ವಿಧಾನಸೌಧದಲ್ಲಿ ನಡೆದ ಬೆಳವಣಿಗೆಗಳು ಹಸನ್ಮುಖಿ ಸದಾನಂದನ ಕ್ರೌರ್ಯವನ್ನು ಬೆತ್ತಲುಗೊಳಿಸುತ್ತದೆ.

ಜಿಲ್ಲಾಧಿಕಾರಿಗಳ ವರದಿಯನ್ನು ಪರಿಶೀಲಿಸಿದ ಸರ್ಕಾರದ ಮುಖ್ಯ ಕಾರ್ಯದರ್ಶಿ ಎಸ್‌ವಿ ರಂಗನಾಥ್ ಮಾಡಿದ ಶಿಫಾರಸ್ಸು ಎಲ್ಲಕ್ಕಿಂತಲೂ ಮಹತ್ವವುಳ್ಳದ್ದು. ಅವರ ಪ್ರಕಾರ ಬಹಳ ದಿನಗಳಿಂದ ವಿವಾದಕ್ಕೆ ಕಾರಣವಾಗಿರುವ ಈ ಬೈಪಾಸ್ ಪ್ರಸ್ತಾಪವನ್ನು ಸ್ಥಳೀಯರು ತೀವ್ರವಾಗಿ ವಿರೋಧಿಸಿರುವ ಕಾರಣ ಅದನ್ನು ಕೈ ಬಿಡಬೇಕು. ಈ ವಿಷಯದಲ್ಲಿ ಜಿಲ್ಲಾಧಿಕಾರಿಗಳ ವರದಿ ಸಮರ್ಪಕವಾಗಿದ್ದು ಅದನ್ನು ಒಪ್ಪಿ ರಸ್ತೆ ವಿಸ್ತರಣೆಗೆ ಆದೇಶಿಸುವುದೇ ಸೂಕ್ತ ಎಂದು ತಮ್ಮ ಅಭಿಪ್ರಾಯವನ್ನು ಬರೆದು ಸಹಿಮಾಡಿ ಈ ಪತ್ರವನ್ನೂ ಫೈಲ್‌ಗೆ ಲಗತ್ತಿಸಿ ತಾರೀಖು 07-10-11 ರಂದು ಮುಖ್ಯಮಂತ್ರಿ ಕಚೇರಿಗೆ ಅನುಮೋದನೆಗಾಗಿ ಕಳಿಸಿಕೊಟ್ಟರು. ಆದರೆ ಅಭಿವೃದ್ಧಿಯೇ ತಮ್ಮ ಧ್ಯೇಯವೆಂದು ಹಾದಿಬೀದಿಯಲ್ಲಿ ಬೊಬ್ಬೆ ಹೊಡೆಯುವ ಬಿಜೆಪಿಯ ಮುಖ್ಯಮಂತ್ರಿ ತಮ್ಮದೇ ಕ್ಷೇತ್ರಕ್ಕೆ ಸಂಬಂಧಿಸಿದ ಆ ಫೈಲನ್ನು ಅಂಡಿನ ಕೆಳಗೆ ಹಾಕಿಕೊಂಡು ಹಲ್ಲುಕಿರಿಯುತ್ತಾ ಕುಂತುಬಿಟ್ಟರು.


ಹೀಗಿದ್ದಾಗ ಜನವರಿ 25 ನೇ ತಾರೀಖು ಸದಾನಂದನಿಗೆ ಇದ್ದಕ್ಕಿದ್ದಂತೆ ಜ್ಞಾನೋದಯವಾಯಿತು. ಸೀದಾ ಕಚೇರಿಗೆ ಹೋದವರೇ ಸೀಟನಡಿ ಸೇರಿಹೋಗಿದ್ದ ಪಡುಬಿದ್ರಿ ಫೈಲನ್ನು ತೆಗೆದು ಅದಕ್ಕೆ ಒಂದು ಸಾಲನ್ನು ಸೇರಿಸಿ ಸಹಿ ಹಾಕಿಬಿಟ್ಟರು. ಅದು ಎಂತಹ ಸಾಲು? ನೀವೇ ಓದಿ: "ನಾಲ್ಕು ಪಥದ ರಸ್ತೆಯನ್ನು 45 ಮೀಟರ್‌ಗಳಿಗೆ ಸೀಮಿತಗೊಳಿಸಿ ಪಡುಬಿದ್ರಿ ನಗರದ ಬೈಪಾಸ್ ಮೂಲಕ ಹಾದು ಹೋಗುವಂತೆ ಹೆದ್ದಾರಿಯನ್ನು ನಿರ್ಮಾಣ ಮಾಡಲು ಆದೇಶಿಸಿದೆ. (ಸಹಿ: ಡಿವಿಸದಾನಂದಗೌಡ, ಮುಖ್ಯಮಂತ್ರಿ)".

ಆರೆ ವಿನಾಶ್ಚರ್ಯ! ಪಡುಬಿದ್ರಿಯ ಗ್ರಾಮ ಲೆಕ್ಕಿಗನಿಂದ ಹಿಡಿದು ಸರ್ಕಾರದ ಮುಖ್ಯ ಕಾರ್ಯದರ್ಶಿವರೆಗೆ ಎಲ್ಲರೂ ಬೈಪಾಸ್ ನಿರ್ಮಾಣದಿಂದ ಹೆಚ್ಚಿನ ಜನರಿಗೆ ಹಾನಿಯಾಗುತ್ತದೆಂದೂ ಆದ್ದರಿಂದಲೇ ರಸ್ತೆ ವಿಸ್ತರಣೆಯೇ ಸೂಕ್ತವೆಂದೂ ವರದಿ ನೀಡಿರುವಾಗ ಮುಖ್ಯಮಂತ್ರಿಯೊಬ್ಬರ ಏಕಪಕ್ಷೀಯ ತೀರ್ಮಾನ ಹೇಗೆ ಸಾಧ್ಯ? ಅದು ಬಹಳ ಸರಳ ಸತ್ಯ. ಹೇಗೆಂದರೆ ಕೇಸರಿ ಪಡೆಯ ಒಳಹೂರಣವೇ ಬಡಜನರ, ದಲಿತರ, ಅಲ್ಪಸಂಖ್ಯಾತರ ಸಮಾಧಿಯ ಮೇಲೆ ಉಳ್ಳವರ ಭವನಗಳನ್ನು ನಿರ್ಮಿಸುವುದು. ಬಾಯಲ್ಲಿ ಬೆಣ್ಣೆ - ಬಗಲಲ್ಲಿ ದೊಣ್ಣೆ!!

ಹೀಗೆ ಅಕ್ರಮ ಡೀನೋಟಿಫಿಕೇಷನ್‌ಗೆ ಸಮನಾದ ಇಂಥ ಅಕ್ರಮ ಆದೇಶವೊಂದನ್ನು ಹೊರಡಿಸಿದ ತರಾತುರಿಯನ್ನು ನೀವು ಗಮನಿಸಬೇಕು. ಒಂದೇ ದಿನದಲ್ಲಿ ಸಂಬಂಧಿಸಿದ ಹತ್ತಾರು ಅಧಿಕಾರಿಗಳ ಸಹಿ ಹಾಕಿಸಿ, ಒಂದೇ ದಿನದಲ್ಲಿ ಅದನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಕಳಿಸಿಕೊಡಲಾಗಿದೆ. ತಿಂಗಳುಗಟ್ಟಲೆ ಧೂಳು ತಿನ್ನುತ್ತಿದ್ದ ಫೈಲು ಇಷ್ಟೊಂದು ವೇಗ ಪಡೆಯುವಂತೆ ಮಾಡಿದ್ದು ಬೆಂಗಳೂರಿನ ಜಯನಗರದ ಒಬ್ಬ ಹೆಸರಾಂತ ಹೋಟೆಲ್ ಉದ್ಯಮಿಯೆಂದು ವಿಧಾನಸೌಧದ ಗೋಡೆಗಳು ಪಿಸುಗುಡುತ್ತಿವೆ. ಅಂದಹಾಗೆ ಈ ಉದ್ಯಮಿ ಪಡುಬಿದ್ರಿ ಬಂಗಲೆ ಜನರ ಸಂಬಂಧಿಯಂತೆ.

"ನಿಮಗೆ ಅನ್ಯಾಯ ಆಗಲು ನಾನು ಬಿಡುವುದಿಲ್ಲ; ನಿಮ್ಮ ಜೊತೆ ನಾನೂ ಧರಣಿ ಕೂರುತ್ತೇನೆ" ಎಂದು ಇದೇ ಸದಾನಂದ ಎಂಪಿ ಆಗಿದ್ದಾಗ ಇಲ್ಲಿನ ಬಡಜನರಿಗೆ ಈ ರೀತಿ ಆಶ್ವಾಸನೆ ನೀಡಿದ್ದನಂತೆ. ಪಡುಬಿದ್ರಿಯ ಮತದಾರರಿಗೆ ಸ್ವಯಂ ಅನುಭವಿಸಿದ ಮೇಲೆ ಬುದ್ಧಿ ಬಂದಂತಿದೆ. ಈ ಹಸನ್ಮುಖಿ ಗೋಸುಂಬೆಗೆ ಈ ಉಪಚುನಾವಣೆಯಲ್ಲಿ ಸೂಕ್ತ ಪಾಠ ಕಲಿಸಲು ಅವರು ಸಜ್ಜಾಗುತ್ತಿದ್ದಾರೆ. ಹಾಗೇ ಈ ವಿಷಯವನ್ನು ಕೋರ್ಟಿಗೆ ಒಯ್ಯಲು ತಯಾರಾಗುತ್ತಿದ್ದಾರೆ. ನ್ಯಾಯಾಲಯವಾದರೂ ಈ ಬಡಜನತೆಯ ಗೂಡುಗಳನ್ನು ಉಳಿಸಿ ಕೊಡಲಿ!

• ದೊಡ್ಡಿಪಾಳ್ಯ ನರಸಿಂಹಮೂರ್ತಿ



ಈ ಚುನಾವಣೆ: ಶಾಪವಿಮೋಚನೆಗೆ ಒಂದು ಅವಕಾಶ

ಮಾರ್ಚ್ 11ರಂದು ಮಂಗಳೂರಿನಲ್ಲಿ ನಡೆದ 'ಲಂಕೇಶ್-77' ಕಾರ್ಯಕ್ರಮವನ್ನು ಉದ್ಘಾಟಿಸಿ ದೇವನೂರು ಮಹಾದೇವರವರು ಮಾಡಿದ ಭಾಷಣ ಇಲ್ಲಿದೆ.

ಬೆಳಗ್ಗೆ ಗೌರಿ "ಹೇಗೆ ಬಂದಿರಿ?" ಎಂದು ವಿಚಾರಿಸಿದರು. ನಾನು "ಮಲಗಿಕೊಂಡು ಬರುವ ಬಸ್ಸಲ್ಲಿ ಬಂದೆ' ಎಂದೆ. "ಅಯ್ಯೋ! ನಾನೂ ಹಾಗೇ ಬಂದೆ, ನನ್ನ ಓಡಾಟಕ್ಕೆ ಕುಳಿತುಕೊಂಡು ಬಂದರೆ ಬೆನ್ನು ಉಳಿಯುವುದಿಲ್ಲ" ಎಂದರು. ಅದಕ್ಕೆ ನಾನು "ನಿಮ್ಮ ಸಮಸ್ಯೆಗೆ, ಹತ್ತು ಜನರ ಮುಂದೆ ಒಂದು ವರ ಕೊಡುವೆ" ಅಂದೆ. ಯಾಕೆಂದರೆ ಬರ್ತಾ ಸುಮ್ನೆ ಲಂಕೇಶ್ ಪತ್ರಿಕೆ ಮೇಲೆ ಕಣ್ಣಾಡಿಸಿದ್ದೆ. ಅದರಲ್ಲಿ ಗೌರಿ ಜನಶ್ರೀ ಟೀವಿಯಲ್ಲಿ ತನ್ನ ಅಪ್ಪನ ಬಗ್ಗೆ 'ರಾವಣ ಪ್ರತಿಭೆ' ಕಾರ್ಯಕ್ರಮ ವೀಕ್ಷಿಸಿದ್ದನ್ನು ಬರೆದುಕೊಂಡಿದ್ದರು. ರಾವಣ ಪ್ರತಿಭೆ ಅಂದರೆ ಹತ್ತು ತಲೆ ಪ್ರತಿಭೆ. ಅಲ್ಲೆ ಇನ್ನೊಂದು ಕಡೆ 'ನನಗೆ ಕೆಲಸ ಮಾಡಲು ಐದರು ಗೌರಿಗಳು ಬೇಕು: ಒಂದು ಪತ್ರಿಕೆ ಕೆಲಸಕ್ಕೆ, ಇನ್ನೊಂದು ಪ್ರಕಾಶನದ ಕೆಲಸಕ್ಕೆ, ಇತ್ಯಾದಿ ಹೇಳಿ ರೆಸ್ಟ್ ತೆಗೆದುಕೊಳ್ಳುವುದಕ್ಕಾಗಿ ಈ ಐದರ ಮೇಲೆ ಮತ್ತೊಂದು ಬೇಕು" ಎಂದು ಬೇಡಿಕೆ ಇಟ್ಟಿದ್ದಾರೆ. ಅಪ್ಪನಿಗೆ ಹತ್ತು ತಲೆ ಆದರೆ ಮಗಳಿಗೆ ಆರು ತಲೆ! ಇದೇನೂ ತಳಿ ಸಮಸ್ಯೆ ಇರಬೇಕು! ಇರಲಿ, ಆಯ್ತು, ಗೌರಿಗೆ ಆರು ತಲೆಯಾಗಿ ಆರ್ಮುಖೀಗೌರಿ ಎಂದಾಗಲಿ ಎಂದು ಈ ಸಭೆ ಆಶೀರ್ವದಿಸಲಿ.

ಲಂಕೇಶ್ ಇದ್ದಿದ್ದರೆ - ಅನೇಕ ಸಲ ಅನಿಸುತ್ತೆ, ಅನೇಕರಿಗೆ ಅನಿಸುತ್ತಿರುತ್ತೆ, ಇದ್ದಿದ್ದರೆ, ಗೌರಿ ಖಾದಿ ಬಟ್ಟೆ ತೆಗೆದುಕೊಳ್ಳಲು ಹಣ ಬೇಕೆಂದು ಅಪ್ಪನಿಗೆ ಯಾಮಾರಿಸಿ ಹಣ ಕೀಳಬಹುದಿತ್ತು, ಇಂದ್ರಜಿತ್ ತಲೆ ಮರೆಸಿಕೊಂಡು ಅಪ್ಪನಿಗೆ ಆತಂಕ ಮಾಡಿ ಮುದ್ದು ಮಾಡಿಸಿಕೊಳ್ಳಬಹುದಿತ್ತು, ಕವಿತಾ - ಈ ಅಪ್ಪ ಯಾವಾಗಲೂ ಯಾಮಾರಿಸುವ ಅಕ್ಕ ತಮ್ಮರಿಗೆ ರಮಿಸುತ್ತಾರೆ ಎಂದು ಸಪ್ಪೆಯಾಗಬಹುದಿತ್ತು, ಇದು ಒಂದು ಕುಟುಂಬದೊಳಗೆ. ಈ ಲಂಕೇಶ್ ಕರ್ನಾಟಕಕ್ಕೆ ಏನು? ಗುಣಮುಖ, ಸಂಕ್ರಾಂತಿ, ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ ಅಂತಹ ಸಾವಿಲ್ಲದ ಕೃತಿಗಳನ್ನು ಕೊಟ್ಟವರು. ಲಂಕೇಶ್ ಇದ್ದಿದ್ದರೆ? ಕರ್ನಾಟಕದ ಅಧಿಕಾರ ವಲಯ, ಸಾಹಿತ್ಯ ಸಾಂಸ್ಕೃತಿಕ ವಲಯ ಇವೇ ತಂತಮ್ಮ ನಡೆನುಡಿಗಳನ್ನು ಎಚ್ಚರಿಕೆಯಿಂದ ಇಡುತ್ತಿದ್ದವು. ಲಂಕೇಶ್ ಇರುವಿಕೆ ರಾವಣ ಪ್ರತಿಭೆಯೇ ಆಗಿತ್ತು, ಲಂಕೇಶ್ ಎಂದರೆ ಅದೊಂದು ಜಾಗೃತ ಪ್ರಜ್ಞೆ, ಅದು ಪ್ರಖರವಾಗಿತ್ತು, ಹಾಗಾಗಿ ಪರಿಣಾಮಕಾರಿಯಾಗಿತ್ತು.

ಲಂಕೇಶ್ ಇದ್ದಾಗ ಅವರ ಹುಟ್ಟುಹಬ್ಬ ಎಂದರೆ - ಒಂದು ದರ್ಬಾರು. ಸಾಮಾನ್ಯವಾಗಿ ನಾನು ಹೋಗುತ್ತಿರಲಿಲ್ಲ, ಇಂದು ಲಂಕೇಶ್ ನಮ್ಮೊಡನೆ ಇಲ್ಲ, ಈಗ ಅವರ ಪ್ರಖರವಾದ ಜಾಗೃತ ಪ್ರಜ್ಞೆಯ ಹುಟ್ಟುಹಬ್ಬ ನಡೆಯುತ್ತಿದೆ, ಇದು ಎಲ್ಲರಲ್ಲೂ ಹುಟ್ಟಲಿ ಅಂತ.

ಹೌದು, ಎಲ್ಲರಲ್ಲೂ ಹುಟ್ಟಬೇಕಾಗಿದೆ. ಸ್ವಲ್ಪವೇ ಪ್ರಜ್ಞೆ ತಪ್ಪಿದರೆ, ವಿವೇಕ ಕೈಕೊಟ್ಟರೆ ಏನಾಗಬಹುದು ಎಂಬುದಕ್ಕೆ ಒಂದು ಉದಾಹರಣೆ- ಒಟ್ಟಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಯದೇ- 83ರ ವಿಧಾನಸಭಾ ಚುನಾವಣೆ. ಆಗ ಮೈಸೂರಿನಲ್ಲಿ ನಾನು ಮನೆ ಕಟ್ಟಿಸುತ್ತಿದ್ದೆ. ಆಗ ತುಂಬಾ ಸಿಮೆಂಟ್ ಕೊರತೆಯಿತ್ತು, ಕೊರಿಯಾ ಸಿಮೆಂಟ್ ತರಲು ಮಂಗಳೂರಿಗೆ ಬಂದಿದ್ದೆ, ಆಗ ಚುನಾವಣೆ ಫಲಿತಾಂಶ ಬರುತ್ತಿತ್ತು, ಆಶ್ಚರ್ಯಕರವಾಗಿ ಬಿಜೆಪಿ ಕರಾವಳಿ ಜಿಲ್ಲೆಯನ್ನು ಆವರಿಸಿಕೊಂಡು ಗೆದ್ದಿತ್ತು, ನಾನು ಕಾರಣಕ್ಕೆ ಫಲಿತಾಂಶದಲ್ಲಿ ಹುಡುಕಾಡಿದೆ. ಕಾರಣ ಹೀಗಿತ್ತು- ಕಾಂಗ್ರೆಸ್ ಜೊತೆಗೆ ಜಮಾತೆ-ಏ-ಇಸ್ಲಾಮಿಯು ಕೋಪಿಸಿಕೊಂಡು ಮುನಿಸಿಕೊಂಡು ಎಲ್ಲಾ ಕಡೆಗೂ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿಬಿಟ್ಟಿತ್ತು, ಅವರು ಸಾವಿರಾರುಗಟ್ಟಲೆ ಮತಗಳನ್ನು ಪಡೆದುಬಿಟ್ಟಿದ್ದರು. ಹಾಗಾಗಿ ಬಿಜೆಪಿ ಗೆದ್ದಿತ್ತು ಅಥವಾ ಜಮಾತೆ-ಏ-ಇಸ್ಲಾಮಿಯು ಬಿಜೆಪಿಯನ್ನು ಗೆಲ್ಲಿಸಿತ್ತು, ಜಮಾತೆ-ಏ-ಇಸ್ಲಾಮಿಯು ತನ್ನ ಕೈಯಾರ ತನ್ನ ಕೊರಳಿಗೆ ತಾನೇ ಉರುಳು ಹಾಕಿಕೊಂಡುಬಿಟ್ಟಿತ್ತು, ಮುಂದೆ, "ನಮ್ಮನ್ನೂ ಒಂದ್ಸಲ ನೋಡಿ ನಮ್ಮನ್ನೂ ಒಂದ್ಸಲ ನೋಡಿ" ಅನ್ನುತ್ತಿದ್ದ ಬಿಜೆಪಿ ಭೂತದ ಬಾಯ್ಗೆ, ಒಂದ್ಸಲ ನೋಡೇಬಿಡುವ ಅನ್ನುವ ಮತದಾರನ ಮನಸ್ಸಿನ ಚಪಲಕ್ಕೆ ಕರ್ನಾಟಕವು ಸಿಕ್ಕಿಕೊಂಡು ಈಗ ಒದ್ದಾಡುತ್ತಿದೆ. ಈ ಭೂತದ ಬಾಯಿಂದ ಕರ್ನಾಟಕವನ್ನು ಬಚಾವು ಮಾಡಬೇಕಾಗಿದೆ.

ಅಧಿಕಾರಕ್ಕೆ ಬಂದ ಈ ಭೂತವು ಮಾಡಿದ ಮೊದಲ ಕೆಲಸ- ಸಾರ್ವಜನಿಕ ಜೀವನದಲ್ಲಿ ಲಜ್ಜೆಯನ್ನು ಕೊಂದುಬಿಟ್ಟಿತು. ಇದರಿಂದಾಗಿ ಇಂದು ಏನೇ ಮಾಡಿದರೂ ಎಂಥ ಅಸಹ್ಯಕ್ಕೂ ನಾಚಿಕೆ ಆಗದು. ಸಂಸ್ಕೃತಿ ಸಂಸ್ಕೃತಿ ಅಂತ ಜಪಮಾಡುತ್ತಾ ಲಜ್ಜಾಹೀನ ಸಂಸ್ಕೃತಿಯನ್ನು ಸಾರ್ವಜನಿಕ ಜೀವನದಲ್ಲೂ ವಿಧಾನ ಸೌಧದ ಒಳಗೂ ಪ್ರತಿಷ್ಠಾಪಿಸಿ ಬಿಟ್ಟಿತು. ರಾಣೀಬೆನ್ನೂರ ಬಳಿ ಒಂದು ನರಬಲಿಯಾಗಿದೆ, ಈ ಸರ್ಕಾರಕ್ಕೆ ಇದು ಒಂದು ಕೊಲೆ ಮಾತ್ರ ಅನ್ನಿಸಿದೆ. ಇದು ಸಹಜ, ಏಕೆಂದರೆ ನರಬಲಿಯನ್ನೂ ಸಹಜ ಎಂದುಕೊಂಡಿರುವ ಸರ್ಕಾರ ಇದು.

ಒಂದು ಕಡೆಯಿಂದ ಶಾಲೆ ಮುಚ್ಚುತ್ತಾ ಇನ್ನೊಂದು ಕಡೆಯಿಂದ ಹಾಸ್ಟೆಲ್‌ಗಳನ್ನು ಮುಚ್ಚುತ್ತಾ ಸಮಾನ ಶಿಕ್ಷಣಕ್ಕೂ ಎಳ್ಳು ನೀರು ಬಿಡುತ್ತಾ- ಹೀಗೆ ಮುಚ್ಚುತ್ತಾ ಎಳ್ಳುನೀರು ಬಿಡುತ್ತಾ ವಿಧಾನಸೌಧವನ್ನೂ ಹೆಚ್ಚುಕಮ್ಮಿ ಮುಚ್ಚಿಬಿಟ್ಟಿದೆ. ಆಡಳಿತಕ್ಕೂ ಎಳ್ಳುನೀರು ಬಿಟ್ಟಿದೆ. ಆಳ್ವಿಕೆ ನಡೆಸಲು ಅನರ್ಹರಾದವರು ಅಧಿಕಾರಕ್ಕೆ ಬಂದರೆ ಏನಾಗುತ್ತದೋ ಅದು ನಮ್ಮಗಳ ಕಣ್ಮುಂದೆ ಈಗ ಜರುಗುತ್ತಿದೆ. ಇವರಿಗೆ ಮಾತೃಭೂಮಿ ಪ್ರೇಮ ಎಷ್ಟಿದೆ ಎಂದರೆ - ಭೂಮಿಮಣ್ಣನ್ನೇ ಬಗೆದು ನುಂಗುತ್ತಾರೆ ಅಥವಾ ಸ್ವಾಧೀನಪಡಿಸಿಕೊಂಡು ಸ್ವಂತ ಮಾಡಿಕೊಳ್ಳುತ್ತಾರೆ. ಹೀಗೆ ಇನ್ನೂ. ಅಸ್ಪೃಶ್ಯನೊಬ್ಬ ಸಂವಿಧಾನ ಬರೆದದ್ದನ್ನು ಸಹಿಸಲಾಗದವರು ಏನು ಬೇಕಾದರೂ ಮಾಡಬಲ್ಲರು.

ಅದಕ್ಕಾಗೇ ಒಂದು ವಾಕಿಂಗ್ ಟಾಕ್ ಹುಟ್ಟಿಕೊಂಡಿತು ಅಂತ ಕಾಣುತ್ತೆ. ಮೊನ್ನೆ ವಾಕಿಂಗ್ ಮಾಡುವಾಗ ನಾನೂ ಕೇಳಿಸಿಕೊಂಡೆ - ಪರಪ್ಪನ ಅಗ್ರಹಾರದಲ್ಲಿ ಇರಬೇಕಾದವರಲ್ಲಿ ಎಷ್ಟೋ ಜನ ವಿಧಾನಸೌಧದಲ್ಲಿ ಇದ್ದಾರೆ - ಅಂತ. ಈ ನಡೆದಾಟದ ಮಾತು ಕರ್ನಾಟಕದ ತುಂಬಾ ನಡೆದಾಡುತ್ತಿದೆ.

ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಸ್ಥಳೀಯ ಪತ್ರಿಕೆಗಳಲ್ಲಿ ಮೈಸೂರಿನಲ್ಲಾದ ಒಂದು ಘಟನೆಯ ವರದಿ ಬಂದಿತ್ತು, ಅದು ಹೀಗಿದೆ:

"ವಯೋವೃದ್ಧರೊಬ್ಬರು ಪೇಪರ್ ಓದುತ್ತಾ ಸಾಗುತ್ತಿದ್ದರು. ಎಂದಿನಂತೆ ಬಿಜೆಪಿ ಶಾಸಕ ಎ.ರಾಮದಾಸ್ ಆ ವೃದ್ಧರನ್ನು ಬಿಜೆಪಿಗೆ ಮತ ನೀಡುವಂತೆ ಮನವಿ ಮಾಡಿದರು. ಒಡನೆಯೇ ಕಿಡಿಕಿಡಿಯಾದ ನಿವೃತ್ತ ಸರ್ಕಾರಿ ನೌಕರರಾ[...] ಆ ವಯೋವೃದ್ಧರು "ಯಾವ ಬಿಜೆಪಿ? ನಾವ[...] ಬಿಜೆಪಿಯವನೇ. ತುಂಬಾ ನೋವಾಗುತ್ತಿದೆ. ಮೊದಲ[...] ಆಪರೇಷನ್ ಕಮಲ ನಿಲ್ಲಿಸಿ. ಇಲ್ಲದಿದ್ದರೆ ಬಿಜೆ[...] ಸರ್ವನಾಶವಾಗುತ್ತದೆ" ಎಂದು ಕೋಪದಿಂದ ನುಡಿದಾ[...] ಆ ಅವರನ್ನು ಮುಟ್ಟಿ ಸಮಾಧಾನಿಸಲು ರಾಮದಾ[...] ಮುಂದಾದಾಗ ಆ ವೃದ್ಧರು - "ದೂರ ಸರಿಯಿರಿ. [...] ಮುಟ್ಟಬೇಡಿ. ಮೈಲಿಗೆಯಾಗುತ್ತೆ" ಎಂದು ತಮ[...] ಅಸಮಾಧಾನ ವ್ಯಕ್ತಪಡಿಸಿದರು. ರಾಮದಾಸ್ ಅವರೊಂದಿಗೆ[...] ಆರ್‌ಎಸ್‌ಎಸ್ ಸಂಘ ಪರಿವಾರದ ಸಕ್ರಿಯ ಕಾರ್ಯಕ[...] ದಾಮೋದರ್ ಬಾಳಿಗ ಅವರು "ಕೋಪ ಮಾಡ್ಕೊಬೇಡಿ[...] ಎಂದು ಸಂಧಾನ ಮಾಡಲು ಮುಂದಾದಾಗ ಆ ವೃದ್ಧ[...] "ನೀನೂ ಹೊಲಸಾಗಿದ್ದೀಯಾ, ದೂರ ಸರಿ. ಆಪರೇಷ[...] ಕಮಲ ಬೇಡ ಎಂದು ಬಿಜೆಪಿಯವರಿಗೆ ಬು[...] ಕಲಿಸಲಾಗುವುದಿಲ್ಲವೆ? ನನ್ನ ಮುಟ್ಟಬೇಡ" ಎಂದ[...] ಬರಬರನೆ ಹೊರಟುಹೋದರು.


ಇದು ವರದಿ. ಇದು ರಾಷ್ಟ್ರೀಯ ಸುದ್ದಿಯಾಗಬೇಕಿತ್ತು[...] ರಾಜ್ಯದ ರಾಜಕಾರಣವನ್ನು ಆಪರೇಷನ್ ಕಮಲದಿಂ[...] ಕೊಳಕು ಮಾಡಿದ ಬಿಜೆಪಿಗೆ ಶಾಪ ಕೊಡುವ ಋಷಿಮು[...] ಯಂತೆ ಆ ವೃದ್ಧರು ನನಗೆ ಕಂಡರು. ಈ ಶಾಪ ಇಂ[...] ಕೃತ್ಯವೆಸಗುವ ಎಲ್ಲಾ ಪಕ್ಷಗಳಿಗೂ ತಟ್ಟುತ್ತದೆ. ಈ ಹಿನ್ನೆಲೆಯ[...] ಆ ವೃದ್ಧರಿಗೆ ಆಪರೇಷನ್ ಕಮಲವು 'ಕಮಲ ರೋಗ'ದ[...] ಕಂಡಿರಬೇಕು. ಜತೆಗೆ - ಇಂಥ ಪಕ್ಷ ಸಂಸಾರಸ್ಥರ ಮನೆಯ[...] ಕಂಡಿರಲಾರದು. ಯಾರೋ ಬರ್‍ತಾನೆ, ರಾತ್ರಿ ಮಲಗಿರ್‍ತಾ[...] ಬೆಳಗ್ಗೆ ಎದ್ದು ಇನ್ನೊಂದು ಮನೆಗೆ ಹೋಗುತ್ತಾನೆ, ನಾ[...] ಇನ್ನೊಬ್ಬ ಬರ್‍ತಾನೆ. ಮನೆಯ ಯಜಮಾನ ಹಲ್ಲುಗಿಂಜು[...] ಕೈಹೊಸುಕುತ್ತ ಬರುವವರನ್ನೆಲ್ಲ ಸಂಭ್ರಮದಿಂದ ಸ್ವಾಗತಿಸು[...] ಇರುತ್ತಾನೆ. ಹೀಗೆ ಕಂಡಿದ್ದರಿಂದಲೇ ಆ ವೃದ್ಧರಿಗೆ ಇದ[...] ಕಂಡರೆ ಅಸಹ್ಯ ಹುಟ್ಟಿದೆ, ಇನ್ನೇನು ಹುಟ್ಟುತ್ತದೆ?

ಇಂಥ ಸಾತ್ವಿಕರು ಎಲ್ಲಾ ಪಕ್ಷಗಳಲ್ಲೂ ಸಾವಿರಾ[...] ಜನವಿರಬಹುದು. ಅವರು ಈಗಲಾದರೂ ತಮ್ಮ ಸಿಟ್ಟ[...] ತೋರಿಸಬೇಕಾಗಿದೆ.

ಕರ್ನಾಟಕಕ್ಕೆ ತಗುಲಿರುವ ಶಾಪವನ್ನು ವಿಮೋಚ[...] ಗೊಳಿಸಲು ಒಂದು ಅವಕಾಶ ಈಗ ಉಡುಪಿ-ಚಿಕ್ಕಮ[...] ಳೂರು ಲೋಕಸಭಾ ಕ್ಷೇತ್ರದ ಮತದಾರರ ಕೈಯಲ್ಲಿ[...] ಈ ಹಿಂದೆ ವಿಧಾನಸೌಧಕ್ಕೆ ಶ್ರೀ ಜಯಪ್ರಕಾಶ್ ಹೆ[...] ಯಂಥ ಸರಳ ಸಜ್ಜನ ಪ್ರಾಮಾಣಿಕ ಸರ್ವಜನರ ಹಿ[...] ಬಯಸುವ ವ್ಯಕ್ತಿಯನ್ನು ಆಯ್ಕೆ ಮಾಡಿ ಕಳುಹಿಸಿದ[...] ಇಡೀ ಕರ್ನಾಟಕವು ಅವರನ್ನು ಆಯ್ಕೆ ಮಾಡಿ ಕಳುಹಿಸ[...] ಮತದಾರರ ಬಗ್ಗೆ ಅಭಿಮಾನ ಪಟ್ಟಿತ್ತು. ಈಗ, [...] ಲೋಕಸಭಾ ಚುನಾವಣೆಯಲ್ಲಿ ಯೋಗ್ಯ ಶ್ರೀ ಜಯಪ್ರಕಾ[...] ಹೆಗ್ಡೆಯವರನ್ನು ನೀವು ಆಯ್ಕೆ ಮಾಡಿದರೆ ಇಡೀ ರಾಜ್ಯ[...] ನಿಮಗೆ ಕೃತಜ್ಞತೆ ಸಲ್ಲಿಸುತ್ತದೆ.

ನನಗನಿಸುತ್ತೆ ಇಂದು ಕರ್ನಾಟಕ ಬೇಡುತ್ತಿರುವು[...] - ಸಮಾನತೆ ಸಾಮರಸ್ಯದ ಸಮಾಜ ಕಟ್ಟುವತ್ತ ಮುಖಮಾ[...] ನಿಂತಿರುವ ಎಲ್ಲರೂ - ಕುಂಟುತ್ತಿರುವವರು, ಸರಿಯ[...] ನಡೆಯುತ್ತಿರುವವರು, ತಪ್ಪುತಪ್ಪು ಹೆಜ್ಜೆ ಇಡುತ್ತಿರುವವ[...] ತೆವಳುತ್ತಿರುವವರು, ಎಲ್ಲರೂ - ಯಾರ್ಯಾರು ಸಮಾ[...] ಸಾಮರಸ್ಯದ ಕಡೆಗೆ ಮುಖಮಾಡಿದ್ದಾರೋ - ಅ ಎಲ್ಲ[...] ತಂತಮ್ಮ ಚಿಲ್ಲರೆ ಬಿಟ್ಟು ಸಗಟಾಗಿ ನಡೆಯಬೇಕಾ[...] ತಮ್ಮ ಉಳಿವಿಗಾಗಿ ಅಂತ.

• ದೇವನೂರು ಮಹಾದೇ[...]



ಬೆಂಗ್ರ ಬಾಕ್ರಬೈಲು, ದೇವನೂರು, ಗೌರಿ, ಪಾರ್ವತೀಶ ಮತ್ತು ಅಶೋಕ್


ಸ್ಫೂರ್ತಿಯ ಚಿಲುಮೆಯಾದ ಲಂಕೇಶ್-77

ಮಾರ್ಚ್ 8 ಪಿ.ಲಂಕೇಶ್‌ರ ಹುಟ್ಟುಹಬ್ಬದ ದಿನ. ನಮ್ಮ 'ಗೌರಿ ಲಂಕೇಶ್' ವಾರಪತ್ರಿಕೆ ಪ್ರಾರಂಭವಾದಾಗಿನಿಂದಲೂ ಆ ದಿನವನ್ನು ಲಂಕೇಶರ ಹುಟ್ಟುಹಬ್ಬ ಮತ್ತು ಪತ್ರಿಕೆಯ ವಾರ್ಷಿಕೋತ್ಸವದ ದಿನವಾಗಿ ಆಚರಿಸುತ್ತಾ ಬಂದಿದ್ದೇವೆ. ಪ್ರತಿವರ್ಷ ಮಾಮೂಲಿಯಾಗಿ ಬೆಂಗಳೂರಿನಲ್ಲಿ ಈ ಕಾರ್ಯಕ್ರಮ ನಡೆಯುತ್ತಿತ್ತು, 'ಪತ್ರಿಕೆ'ಯನ್ನು ಜನ ಸಮುದಾಯಗಳಿಗೆ ಮತ್ತಷ್ಟು ಹತ್ತಿರ ಕೊಂಡೊಯ್ಯುವ ನಮ್ಮ ಮೂಲ ಆಶಯಕ್ಕೆ ಅನುಗುಣವಾಗಿ ಬೇರೆ ಊರುಗಳಲ್ಲೂ ಈ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಸಬೇಕೆಂದು ತೀರ್ಮಾನಿಸಿದೆವು. ಅದರಂತೆ ಮಾರ್ಚ್ 11 ರಂದು ಮಂಗಳೂರಿನಲ್ಲಿ 'ಲಂಕೇಶ್-77' ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಮಂಗಳೂರಿನ ಕಾರ್ಯಕ್ರಮ ಹಲವು ರೀತಿಯಲ್ಲಿ ಹೊಸದಾಗಿತ್ತು, ವಿಭಿನ್ನವಾಗಿತ್ತು, ನಾಡಿನ ಹಲವಾರು ಪ್ರಗತಿಪರ ಚಿಂತಕರು, ಹೋರಾಟಗಾರರು ತುಂಬಿದ ಸಭಾಂಗಣದಲ್ಲಿ ನೆರೆದಿದ್ದರು. ಹಿಂದೂ, ಮುಸ್ಲಿಂ, ಕ್ರೈಸ್ತ ಮುಂತಾದ ಧರ್ಮಗಳಿಗೆ ಸೇರಿದವರೆಲ್ಲರೂ ಒಟ್ಟಾಗಿ ನೆರೆದಿದ್ದ ಸಭೆ ನಿಜವಾದ ಅರ್ಥದಲ್ಲಿ ಜಾತ್ಯತೀತತೆಯನ್ನು ಪ್ರತಿಬಿಂಬಿಸುವಂತಿತ್ತು, ಅಲ್ಲದೆ ಹಲವಾರು ಸಂಘಟನೆಯ ಕಾರ್ಯಕರ್ತರು, ಮುಖಂಡರು, ಸಾಹಿತ್ಯಾಸಕ್ತರು-ಹೀಗೆ ನಾನಾ ರೀತಿಯ ಸೈದ್ಧಾಂತಿಕ ಹಿನ್ನೆಲೆಯ ಜನರ ಒಂದು ನೈಜ ಸಂಗಮವಾಗಿತ್ತು.

ಒಂದು ಇಡೀ ದಿನ ನಡೆದ ಕಾರ್ಯಕ್ರಮವನ್ನು ನಾಲ್ಕು ಗೋಷ್ಠಿಗಳಾಗಿ ವಿಂಗಡಿಸಲಾಗಿತ್ತು, ದಲಿತ ಚಳವಳಿಯ ಹಿರಿಯ ನಾಯಕರೂ, ಲಂಕೇಶರ ಒಡನಾಡಿಯೂ ಆಗಿದ್ದ ದೇವನೂರು ಮಹಾದೇವ ಕಾರ್ಯಕ್ರಮವ[...] ಉದ್ಘಾಟನೆ ಮಾಡಿ ಶುಭ ಹಾರೈಸಿದರು. ಅದರೊಂದಿಗೆ ಲಂಕೇ[...] ಪ್ರಕಾಶನ ಪ್ರಕಟಿಸಿದ ಲಂಕೇಶರ 'ಮರೆಯುವ ಮುನ್ನ' ಅಂಕಣದ 4[...] ಸಂಕಲನ, ಮರುಮುದ್ರಣಗೊಂಡ ಲಂಕೇಶರ 'ಪಾಂಚಾಲಿ', ಸುಕನ್ಯಾ ಕನಾ[...] ಅವರ 'ಹೇಳುತೇನೆ ಕೇಳು' ಮತ್ತು ಚಾರು ಪ್ರಕಾಶನ ಪ್ರಕಟಿಸಿದ ಜಿಮ್ ಕಾರ್ಬೆಟ್ ಅವರ 'ನನ್ನ ಪ್ರೀತಿಯ ಭಾರತ' ಎಂಬ ನಾಲ್ಕು ಪುಸ್ತಕಗಳನ್ನ ಹಿರಿಯರಾದ ಸುರೇಶ್‌ಭಟ್ ಬಾಕ್ರಬೈಲು ಬಿಡುಗಡೆ ಮಾಡಿದರು. [...] ಗೋಷ್ಠಿಯ ಅಧ್ಯಕ್ಷತೆಯನ್ನು ನಮ್ಮ ಪತ್ರಿಕೆಯ ಪ್ರಧಾನ ಸಂಪಾದಕಿ ಗೌ[...] ಲಂಕೇಶ್ ವಹಿಸಿದ್ದರು.

ನಂತರದ ಗೋಷ್ಠಿಯಲ್ಲಿ ಕರಾವಳಿ ಕರ್ನಾಟಕ ಎದುರಿಸುತ್ತಿರುವ ಬಿಕ್ಕಟ್ಟುಗ[...] ಬಗ್ಗೆ ಜಿ.ರಾಜಶೇಖರ್, ಪರಿಸರ ಹೋರಾಟಗಾರ ವಿಠಲಹೆಗ್ಡೆ ಭೂಮಿಗೌ[...]








ಶಿವಮೊಗ್ಗದ ಕಿಕ್ಕಿರಿದ ರಂಗಮಂದಿರದಲ್ಲಿ ಲಂಕೇಶ್ ನಾಟಕೋತ್ಸವ

‘ಗುಣಮುಖ’, ‘ಸಂಕ್ರಾಂತಿ’, ‘ಕಲ್ಲು ಕರಗುವ ಸಮಯ’


ಶಿವಮೊಗ್ಗ ರಂಗಾಯಣ ನಗರದಲ್ಲಿ ಲಂಕೇಶ್ ...ಹುಟ್ಟುಹಬ್ಬದ ಸಂದರ್ಭದಲ್ಲಿ ಲಂಕೇಶ್ ನಾಟಕೋತ್ಸವವನ್ನು ...ಡಿಸಿತ್ತು. ಈ ನಾಟಕೋತ್ಸವದಲ್ಲಿ ಲಂಕೇಶರ ಮೂರು ...ಖ ನಾಟಕಗಳಾದ ‘ಗುಣಮುಖ’, ‘ಸಂಕ್ರಾಂತಿ’ ಹಾಗು ... ಕರಗುವ ಸಮಯ’ಗಳನ್ನು ಕ್ರಮವಾಗಿ ಸ್ಥಳೀಯ ...ತಂಡಗಳಾದ ನಮ್ ಟೀಂ, ಸಹ್ಯಾದ್ರಿ ...ತರಂಗ ಹಾಗೂ ಹೆಗ್ಗೋಡಿನ ಚರಕ ...ಯ ಕಲಾವಿದರು ಅಭಿನಯಿಸಿದರು.



...ಮೂರು ನಾಟಕಗಳೂ ಪ್ರಭುತ್ವದ ...ಹಾಸ, ಕ್ರೌರ್ಯಗಳನ್ನು, ಪ್ರಭುತ್ವ ...-ಧರ್ಮದ ಮೂಲಕ ಜನಸಾಮಾನ್ಯರ ...ಕಿನಲ್ಲಿ ಸೃಷ್ಟಿಸುವ ಕ್ಷೋಭೆಗಳನ್ನು, ...ಲಭೂತವಾದಿಗಳು, ಜಾತಿವಾದಿಗಳು ...ಾಯಕರ ಬದುಕಿನಲ್ಲಿ ಉಂಟು ...ಮಾಡುವ ಸಂಕಟಗಳನ್ನು, ಅಧಿಕಾರಶಾಹಿಯ ...ನೆಯನ್ನು ಸಹೃದಯನ ಮುಂದೆ ...ಡುತ್ತದೆ. ಇಷ್ಟೇ ಆದರೆ ಅದು ನಮ್ಮನ್ನು ಸುಲಭವಾಗಿ ...ಶೆ ಮತ್ತು ಸಿನಿಕತನದತ್ತ ಒಯ್ಯುತ್ತದೆ. ಆದರೆ ಈ ...ಕಗಳಲ್ಲಿ ಇಂತಹ ರೋಗಗಳಿಗೆ ಮದ್ದು ಹುಡುಕುವ ...ಮ ಅಲಾವಿ ಖಾನ್, ಬಸವಣ್ಣ, ಮನುಷ್ಯನ ಆಳದ ...ಮತನದ ಬಗೆಗೆ ನಂಬಿಕೆಯಿರುವ ತಿಪ್ಪಣ್ಣ (ಕಲ್ಲು ...ವ ಸಮಯ) ಮುಖಾಮುಖಿಯಾಗುತ್ತಾರೆ. ಲಂಕೇಶರ ...ತ್ಯವನ್ನು, ಸಿನಿಮಾಗಳನ್ನು, ಲಂಕೇಶರು ಸೃಷ್ಟಿಸಿದ ...ಯನ್ನು ಮತ್ತು ಅವರು ಹುಟ್ಟುಹಾಕಿದ ಪ್ರಗತಿರಂಗವನ್ನು ...ಗಿ ಗಮನಿಸಿದವರಿಗೆ ಅವರು ತಮ್ಮ ನಾಟಕಗಳಲ್ಲಿ ...ದ ಹಕೀಮ ಅಲಾವಿ ಖಾನ್, ಬಸವಣ್ಣ ಹಾಗು ... ಸ್ವತಃ ಲಂಕೇಶರ ಒಂದೊಂದು ಮುಖಗಳು ಎಂದು ...ಸಿ ಹೇಳಬೇಕಾಗಿಲ್ಲ.

...ಮನುಷ್ಯನ ಅಧಿಕಾರದಾಹ, ಲಂಪಟತನ, ‘ಬಾಯ್ಬಿಟ್ಟರೆ ...ಡುವ ಗುಣ’, ಇದರೊಂದಿಗೆ ಮನುಷ್ಯನಾಳದ ...ಮತನ ಇವೆಲ್ಲವೂ ಸಾರ್ವಕಾಲಿಕ ಸತ್ಯಗಳಾಗಿವೆ. ಈ ...ದೆಯಲ್ಲಿ ಲಂಕೇಶರ ನಾಟಕಗಳು ಸದಾ ಕಾಲಕ್ಕೂ ...ತವಾಗಿಯೇ ಇರುತ್ತವೆ. ಆದರೆ ಇನ್ನೊಂದು ಬಗೆಯಲ್ಲಿ ...ಶರ ನಾಟಕಗಳು ವರ್ತಮಾನಕ್ಕೂ ಸಲ್ಲುತ್ತವೆ ಎಂಬುದು ...ಪಡಬೇಕಾದ ಸಂಗತಿಯೇನಲ್ಲ. ‘ಗುಣಮುಖವಾಗದ’ ...ಜ ಗುಣಮುಖವನ್ನು ಬಯಸಿದ ಲೇಖಕನಿಗೆ ...ವನ್ನೇ ತರಿಸುತ್ತದೆ. ಲಂಕೇಶರಿದ್ದಿದ್ದರೂ ತನ್ನ ನಾಟಕಗಳ ...ತತೆಗೆ ದುಃಖಿಸುತ್ತಿದ್ದರು ಎಂದೇ ನನ್ನ ಖಚಿತ ನಂಬಿಕೆ.

ನಟರಾಜ ಹೊನ್ನವಳ್ಳಿ ನಿರ್ದೇಶನದಲ್ಲಿ ಮೂಡಿಬಂದ ‘ಗುಣಮುಖ’ ನಾಟಕದಲ್ಲಿ ಎಲ್ಲರ ಮನದಲ್ಲಿ ನೆಲೆನಿಲ್ಲುವ ಎರಡು ಪಾತ್ರಗಳೆಂದರೆ ನಾದಿರ್ ಶಾ ಮತ್ತು ಹಕೀಮ ಅಲಾವಿ ಖಾನ್. ನಾಟಕವೇ ಈ ಅವಕಾಶವನ್ನು ಒದಗಿಸಿಕೊಟ್ಟಿದೆ. ಇದಕ್ಕೆ ಸಮರ್ಥ ನಟರು ಸಿಕ್ಕಿಬಿಟ್ಟರಂತೂ ನಾಟಕ ನೋಡುವವರಿಗೆ ಆಗುವ ಅನುಭವವೇ ಅನನ್ಯ. ನಾದಿರ್ ಶಾ ಪಾತ್ರದಲ್ಲಿ ಸಾಸ್ವೆಹಳ್ಳಿ ಸತೀಶ್ ಅಂತಹ ಅನನ್ಯ ಅನುಭವವನ್ನು ಪ್ರೇಕ್ಷಕರಿಗೆ ತಂದುಕೊಟ್ಟರು. ಹಕೀಮ ಅಲಾವಿ ಖಾನ್ ಪಾತ್ರದಲ್ಲಿ ಕೊಟ್ರಪ್ಪಜಿ. ಹೀರೆಮಾಗಡಿ ಆರಂಭದಲ್ಲಿ ಕೊಂಚ ಎಡವಿದಂತೆ ಕಂಡರೂ ಕ್ರಮೇಣ ಪಾತ್ರದಲ್ಲಿ ಲೀನವಾದರು. ಸರ್ಕಾರಿ ವೈದ್ಯನ ಪಾತ್ರದಲ್ಲಿ ಅಂಚೆ ಇಲಾಖೆಯ ಚಂದ್ರಶೇಖರ್ ಮತ್ತು ರಸಿಕ ದೊರೆ ನಜರುದ್ದೀನ್ ಮಹಮದ್ ಶಹಾ ಪಾತ್ರದಲ್ಲಿ ಹೊನ್ನಾಳಿ ಚಂದ್ರಶೇಖರ್ ತಮ್ಮ ಚುರುಕಾದ ಅಭಿನಯದಿಂದ ಗಮನ ಸೆಳೆದರು. ನಾದಿರ್‌ನ ರೋಗಗ್ರಸ್ಥ ಮನಸ್ಥಿತಿಯನ್ನು ಬಿಂಬಿಸಲು ನಿರ್ದೇಶಕರು ಬಳಸಿದ ಒಡಕು ಸಂಗೀತ ಕಿರಿಕಿರಿಯನ್ನು ಮಾತ್ರ ಉಂಟುಮಾಡಿದಂತಿತ್ತು. ಬೆಳಕು ಇನ್ನೂ ಸುಧಾರಿಸುವ ಅಗತ್ಯವಿತ್ತು. ಈ ಸಣ್ಣಪುಟ್ಟ ಮಿತಿಗಳ ನಡುವೆಯೂ ಒಟ್ಟಾರೆ ‘ಗುಣಮುಖ’ ನಾಟಕ ಸಹೃದಯನ ಒಳಗನ್ನು ಕಲಕಲು ಯಶಸ್ವಿಯಾಯಿತು.



ಹೊನ್ನವಳ್ಳಿ

ಎರಡನೆಯ ದಿನ ಪ್ರದರ್ಶಿತಗೊಂಡ ನಾಟಕ ‘ಸಂಕ್ರಾಂತಿ’. ‘ರಾವಿ ನದಿಯ ದಂಡೆಯಲ್ಲಿ’ ಎಂಬ ನಾಟಕವನ್ನು ಅದ್ಭುತವಾಗಿ ನಿರ್ದೇಶಿಸಿದ್ದ ಕಾಂತೇಶ್ ಕದರಮಂಡಲಗಿ ಯಾಕೋ ಏನೋ ‘ಸಂಕ್ರಾಂತಿ’ ನಾಟಕದಲ್ಲಿ ಪ್ರೇಕ್ಷಕರ ನಿರೀಕ್ಷೆಯ ಮಟ್ಟವನ್ನು ತಲುಪಲು ಸಾಧ್ಯವಾಗಲಿಲ್ಲ. ಇದಕ್ಕೆ ಎರಡು ಕಾರಣಗಳಿವೆ. ಒಂದು, ಕನ್ನಡ ರಂಗಭೂಮಿಯಲ್ಲಿ ‘ಸಂಕ್ರಾಂತಿ’ ಹಲವು ಬಗೆಯ ವಿಭಿನ್ನ ಪ್ರಯೋಗಗಳಿಗೆ ಕಾರಣವಾಗಿ ಪ್ರೇಕ್ಷಕರ ನಿರೀಕ್ಷೆಯ ಮಟ್ಟವನ್ನು ಎತ್ತರಿಸಿರುವುದು. ಎರಡನೆಯದಾಗಿ ವೈಯಕ್ತಿಕವಾಗಿ ಕಾಂತೇಶ್ ಕದರಮಂಡಲಗಿ ಅವರು ಹುಟ್ಟಿಸಿದ್ದ ನಿರೀಕ್ಷೆ.

ಮೊದಲ ದಿನ ಪ್ರದರ್ಶಿತಗೊಂಡ ‘ಗುಣಮುಖ’ ನಾಟಕದ ನಾದಿರ್ ಶಾನ ಪಾತ್ರದಲ್ಲಿ ಈ ವಿಶಿಷ್ಟ ಪಾತ್ರ ಹಾಗು ತನ್ನ ಅಮೋಘ ಅಭಿನಯದಿಂದ ಇಡೀ ರಂಗವನ್ನು ಆವರಿಸಿದ್ದ ಸಾಸ್ವೆಹಳ್ಳಿ ಸತೀಶ್ ‘ಸಂಕ್ರಾಂತಿ’ಯ ಪ್ರಧಾನ ಪಾತ್ರವಾದ ಬಿಜ್ಜಳನಾಗಿಯೂ ಅಭಿನಯಿಸಿದರು. ಆದರೆ ಇಲ್ಲಿ ಅವರು ರಂಗವನ್ನು ಆವರಿಸಿಕೊಂಡ ಬಗೆಯಲ್ಲಿ ಕೆಲವು ಕೊರತೆಯಿತ್ತು. ಒಬ್ಬ ಯಶಸ್ವೀ ಲೇಖಕ ಅತಿ ಆತ್ಮವಿಶ್ವಾಸದಿಂದ ಬರವಣಿಗೆಯನ್ನು ಸಲೀಸು ಎಂದು ತಿಳಿದ ತಕ್ಷಣ ಮಾಡುವ ತಪ್ಪುಗಳನ್ನು ಒಬ್ಬ ಯಶಸ್ವಿ ನಟರಾದ ಸತೀಶ್ ಅವರೂ ತಮ್ಮ ಪಾತ್ರ ನಿರ್ವಹಣೆಯಲ್ಲಿ ಮಾಡಿದರು. ಪ್ರೇಕ್ಷಕರ ಚಪ್ಪಾಳೆಯ ಸದ್ದಿಗೆ ಮೈಮರೆತ ಸತೀಶ್ ಗಂಭೀರ ಮತ್ತು ಮೊನಚು ವ್ಯಂಗ್ಯದ ಸಂಭಾಷಣೆಗಳಿಗೆ ಲಘುಹಾಸ್ಯದ ದಾಟಿಯನ್ನು ಪ್ರಯೋಗಿಸಿದರು. ಅವರ ಆಂಗಿಕ ಅಭಿನಯವೂ ನಗುವನ್ನು ಉತ್ತೇಜಿಸುವಂತಿತ್ತು. ಬಿಜ್ಜಳನ ವೇಷಭೂಷಣವೂ ಪೌರಾಣಿಕ ಹಾಸ್ಯ ನಾಟಕಗಳ ರಾಜರದಂತೆ ರಂಗು ರಂಗಾಗಿತ್ತು. ಉಳಿದಂತೆ ಬಸವಣ್ಣನಾಗಿ ನಾಗಭೂಷಣ್, ಉಜ್ಜನಾಗಿ ತಿಪ್ಪಣ್ಣ ನಾಟಕಕ್ಕೆ ಜೀವ ತುಂಬಿದರು. ಸ್ವತಃ ಹಾಡುಗಾರರಾದ ಕದರಮಂಡಲಗಿ ಮತ್ತು ತಂಡದ ಸಂಗೀತ ನಾಟಕಕ್ಕೆ ಪೂರಕವಾಗಿತ್ತು.



ಲಂಕೇಶರ ಪ್ರಸಿದ್ಧ ಕಥೆ ‘ಕಲ್ಲು ಕರಗುವ ಸಮಯ’ವನ್ನು ಆಧರಿಸಿ ‘ಕಟ್ಟೇಪುರಾಣ’ದ ಬಿ.ಚಂದ್ರೇಗೌಡರ ರಂಗರೂಪಾಂತರದಲ್ಲಿ ಮೈಸೂರಿನ ಸುಮತಿ ಅವರು ನಿರ್ದೇಶಿಸಿದ ಕಥೆಯ ಹೆಸರಿನದೇ ನಾಟಕ ಮೂರನೇ ದಿನ ಪ್ರದರ್ಶಿತಗೊಂಡಿತು. ಗ್ರಾಮೀಣ ಜನರ ಸ್ವಾವಲಂಬನೆಯನ್ನು ಸಾಧಿಸುವ ನಿಟ್ಟಿನಲ್ಲಿ ಆರಂಭಿಸಿದ ಕೈಮಗ್ಗವಸ್ತ್ರದ ಉತ್ಪನ್ನಗಳನ್ನು ತಯಾರಿಸುವ ಹೆಗ್ಗೋಡು ಗ್ರಾಮದ ಚರಕ ಸಂಸ್ಥೆಯ ಉದ್ಯೋಗಿಗಳು ಈ ನಾಟಕವನ್ನು ಅಭಿನಯಿಸಿದ್ದು ವಿಶೇಷವಾಗಿತ್ತು. ಲವಲವಿಕೆಯ ಅಭಿನಯ, ಪೂರಕ ಸಂಗೀತದಿಂದ ನಾಟಕ ಗಮನ ಸೆಳೆಯಿತು. ಅಪರೂಪಕ್ಕೆ ನಾಟಕ ಕಲಿತು ಅಭಿನಯಿಸಿದ್ದರೂ ಅನೇಕರಲ್ಲಿ ಪ್ರತಿಭಾವಂತ ಕಲಾವಿದರಿರುವುದು ಗೋಚರಿಸುತ್ತಿತ್ತು. ಕುಲಕರ್ಣಿ, ಭಾಗೀರಥಿ, ಸಾಂಶಿ ಪ್ರಭಾಕರ್ ಹಾಗು ಚರಕದ ಯುವಕಯುವತಿಯರ ಅಭಿನಯ ಚೇತೋಹಾರಿಯಾಗಿತ್ತು. ಶ್ಯಾಮಲಾಳಾಗಿ ಪದ್ಮಶ್ರೀ, ತಿಪ್ಪಣ್ಣನಾಗಿ ಸತೀಶ್ ಗಮನ ಸೆಳೆಯುವ ಅಭಿನಯ ನೀಡಿದರು.



ಮಲ್ಲೇಗೌಡನ ಕಲ್ಲಿನಂತಹ ಮನಸ್ಸೂ ಕರಗುವ ಪರಿಯನ್ನು ನಿರ್ದೇಶಕರು ರಂಗಕ್ಕೆ ತಂದ ರೀತಿ ಅಚ್ಚರಿ ತರುವಂತಿತ್ತು. ಪ್ರೇಮಿಗಳನ್ನು ಮಚ್ಚಿನಲ್ಲಿ ಕೊಚ್ಚಲು ಬಂದ ಮಲ್ಲೇಗೌಡ ಮನಸ್ಸು ಬದಲಿಸಿ ಕೂಲಿಯಾಳಿಗೆ ಮಚ್ಚು ಕೊಟ್ಟು ಅವರಿಗೆ ಎಳನೀರು ಕೊಚ್ಚಿಕೊಡಲು ಹೇಳುವುದು ಸಿನಿಮಾದ ಸರಳ ಸುಖಾಂತ್ಯದಂತಿತ್ತು. ಕಥೆಯ ಗಾಂಭೀರ್ಯತೆಯನ್ನು ರಂಗಕ್ಕೆ ತರುವಲ್ಲಿ ನಿರ್ದೇಶಕರು ಇನ್ನಷ್ಟು ಪ್ರಯತ್ನವನ್ನು ಹಾಕಬೇಕಾಗಿದೆ ಎಂಬುದನ್ನು ಇದು ಸೂಚಿಸುತ್ತಿದೆ. ಏನೇ ಇರಲಿ, ಮೂಲತಃ ಕಲಾವಿದರಲ್ಲದ ಚರಕದ ಉದ್ಯೋಗಿಗಳನ್ನು ಸಮರ್ಥವಾಗಿ ಬಳಸಿಕೊಂಡು ನಾಟಕ ರೂಪಿಸಿದ ನಿರ್ದೇಶಕಿ ಸುಮತಿ ನಿಜಕ್ಕೂ ಅಭಿನಂದನಾರ್ಹರು.

ಲಂಕೇಶ್ ನಾಟಕೋತ್ಸವ ಶಿವಮೊಗ್ಗದಲ್ಲಿ ನಡೆಯಲು ಕಾರಣಕರ್ತರಾದ ರಂಗಾಯಣದ ಹೊ.ನ.ಸತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕ್ರಿಯಾಶೀಲ ಉಪನಿರ್ದೇಶಕ ಎನ್. ಹರಿಕುಮಾರ್, ನಂ ಟೀಂ ರಂಗತಂಡದ ಅಧ್ಯಕ್ಷ ಹೊನ್ನಾಳಿ ಚಂದ್ರಶೇಖರ್ ಹಾಗು ಪತ್ರಿಕಾ ಬಳಗದ ಬಿ.ಚಂದ್ರೇಗೌಡರನ್ನು ಮೂರು ದಿನವೂ ಕುವೆಂಪು ರಂಗಮಂದಿರದ ತುಂಬ ಕುಳಿತು ನಾಟಕ ನೋಡಿದ ಶಿವಮೊಗ್ಗದ ರಂಗಾಸಕ್ತರು ಕೃತಜ್ಞತೆಯಿಂದ ನೆನೆದಿರುವುದರಲ್ಲಿ ಯಾವುದೇ ಅನುಮಾನವಿಲ್ಲ.

• ಸರ್ಜಾಶಂಕರ ಹರಳಿಮಠ

...ಚ್.ಎಸ್.ಅನುಪಮ, ಹಯವದನ ಉಪಾಧ್ಯಾಯ, ಪಿ.ವಿ.ಮೋಹನ್, ...ದೇವ ಬೆಳ್ಳಿ ಮುಂತಾದವರು ಇಂದು ಕರಾವಳಿ ಎದುರಿಸುತ್ತಿರುವ ...ಗಳ ಬಗ್ಗೆ ವಿವರವಾಗಿ ಚರ್ಚಿಸಿದರು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ...ಸು ಲೇಖಕಿ ಸಾರಾ ಅಬೂಬಕ್ಕರ್ ವಹಿಸಿದ್ದರು.

...ಮಧ್ಯಾಹ್ನದ ಗೋಷ್ಠಿ ಕರ್ನಾಟಕದ ಇಂದಿನ ತಲ್ಲಣಗಳ ಕುರಿತು. ಈ ...ವಿಚಾರಮಂಡನೆ ಮಾಡಿದವರು ಚಿಂತಕ ಕೆ.ಫಣಿರಾಜ್, ಕರ್ನಾಟಕ ...ಕ್ತಿ ಸಂಘಟನೆಯ ಮುಖಂಡ ಡಾ.ಎಚ್.ವಿ.ವಾಸು, ವಾರ್ತಾಭಾರತಿ ಪತ್ರಿಕೆಯ ...ದಕ ಬಿ.ಎಮ್.ಬಷೀರ್, ಅರವಿಂದ ಚೊಕ್ಕಾಡಿ, ವಸಂತ ಬನ್ನಾಡಿ ...ತಾದವರು ಭಾಗವಹಿಸಿದ್ದರು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ರಾಜಾರಾಮ್ ...ಡಿ ವಹಿಸಿದ್ದರು.

... ಸಮಾರೋಪ ಸಮಾರಂಭದ ಚರ್ಚಾ ವಿಷಯ ಸಮ್ಮೇಳನದ ಆಶಯವಾದ ...-ಸೌಹಾರ್ದ ಕರ್ನಾಟಕ’ ಎಂಬುದು.

...ಪತ್ರಿಕೆಯ ಕತ್ತು ಹಿಸುಕಲು ಪಟ್ಟಭದ್ರರು ಹಾಗೂ ಕೋಮುವಾದಿಶಕ್ತಿಗಳು ...ತ್ತಿರುವ ಹುನ್ನಾರದ ಬಗ್ಗೆ ಪತ್ರಿಕೆಯ ಸಂಪಾದಕ ಪಾರ್ವತೀಶ ವಿವರಿಸಿದರು.





ಲೇಖಕ ಫಕೀರ್ ಮಹಮದ್ ಕಟ್ಪಾಡಿ ಕರ್ನಾಟಕದ ಸೌಹಾರ್ದ ಪರಂಪರೆಯ ಬಗ್ಗೆ ಮಾತನಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಹಿರಿಯ ಚಿಂತಕರಾದ ಎ.ಕೆ. ಸುಬ್ಬಯ್ಯನವರು ಕೋಮುವಾದಿಗಳ ಪೊಳ್ಳುತನವನ್ನು ಎಳೆಎಳೆಯಾಗಿ ಬಿಡಿಸಿಟ್ಟರು. ಸೌಹಾರ್ದ ಪರಂಪರೆಯ ನಮ್ಮ ನಾಡಿನಲ್ಲಿ ಪ್ರಗತಿಪರ ಶಕ್ತಿಗಳು ಒಂದಾದರೆ ಕೋಮುವಾದವನ್ನು ಕಿತ್ತೊಗೆಯುವುದು ಅಷ್ಟು ಕಷ್ಟದ ವಿಷಯವೇನಲ್ಲ ಎಂಬ ಆಶಾದಾಯಕ ಮಾತುಗಳನ್ನಾಡಿದರು.

ಕೋಮು ಸೌಹಾರ್ದ ವೇದಿಕೆಯ ದಿನಕರ ಬೆಂಗ್ರೆ, ಇಸ್ಮತ್ ಫಜೀರ್, ಲಂಕೇಶ್ ಬಳಗದ ಶಶಿಧರ್ ಹೆಮ್ಮಾಡಿ ಮತ್ತು ದೊಡ್ಡಿಪಾಳ್ಯ ನರಸಿಂಹಮೂರ್ತಿ ಗೋಷ್ಠಿಗಳ ನಿರ್ವಹಣೆ ಮಾಡಿದರು.

ಕಾರ್ಯಕ್ರಮದ ಕೊನೆಯ ಭಾಗವಾಗಿ ಸಾದತ್ ಹಸನ್ ಮಾಂಟೋ ಅವರ ನಾಲ್ಕು ಕತೆಗಳನ್ನಾಧರಿಸಿ ರಚಿಸಲಾದ, ಉಡುಪಿಯ ‘ರಥ ಬೀದಿ ಗೆಳೆಯರು’ ಅಭಿನಯಿಸಿದ ‘ಮಿಸ್ಟೇಕ್’ ಎಂಬ ಮನಕಲಕುವ ನಾಟಕ ಪ್ರದರ್ಶನದೊಂದಿಗೆ ಸಭೆ ಮುಕ್ತಾಯ ಕಾಯಿತು.

ಈ ಕಾರ್ಯಕ್ರಮದ ಯಶಸ್ವಿಗಾಗಿ ಮಂಗಳೂರಿನ ಕೋಮು ಸೌಹಾರ್ದ ವೇದಿಕೆ ಮತ್ತು ಹಲವಾರು ಗೆಳೆಯರು ಬಹಳ ಶ್ರದ್ಧೆಯಿಂದ ದುಡಿದಿದ್ದಾರೆ. ನಿಜವಾಗಿಯೂ ಕಾರ್ಯಕ್ರಮದ ಯಶಸ್ಸು ಮಂಗಳೂರಿನ ಗೆಳೆಯರಿಗೆ ಸಲ್ಲಬೇಕು.


ಒಟ್ಟಾರೆ ಈ ವಾರ್ಷಿಕೋತ್ಸವ ನಮಗೊಂದು ಹಬ್ಬವಾಗಿತ್ತು. ಅಪರೂಪಕ್ಕೊಮ್ಮೆ ಸಿಗುವ ನಮ್ಮ ಎಲ್ಲಾ ಗೆಳೆಯರ, ಹಿತೈಷಿಗಳ ಹಾಗೂ ಪತ್ರಿಕೆಯ ಓದುಗರ ಒಂದು ಅಪರೂಪದ ಮಿಲನವೂ ಆಗಿತ್ತು. ಈ ಕಾರಣಕ್ಕಾಗಿಯೇ ‘ಲಂಕೇಶ್-77’ ಕಾರ್ಯಕ್ರಮ ನಮಗೆ ಖುಷಿ, ಸ್ಫೂರ್ತಿಗಳನ್ನು ನೀಡಿ ನಮ್ಮಲ್ಲಿ ಮತ್ತಷ್ಟು ಚೈತನ್ಯವನ್ನು ತುಂಬಿದೆ. ಅದೇ ಸಂದರ್ಭದಲ್ಲಿ ನಮ್ಮ ಮುಂದೆ ಇರುವ ಅಗಾಧವಾದ ಜವಾಬ್ದಾರಿಗಳ ಬಗ್ಗೆಯೂ ನಮ್ಮನ್ನು ಎಚ್ಚರಿಸಿದೆ.

ಮುಂದಿನ ವರ್ಷದ ಮಾರ್ಚ್‌ನಲ್ಲಿ ಲಂಕೇಶ್-78 ಕಾರ್ಯಕ್ರಮ ನಿಮ್ಮೂರಿನಲ್ಲೇ ನಡೆಸೋಣ. ನೀವು ರೆಡಿ ತಾನೇ?


• ಲಂಕೇಶ್ ಬಳಗ



ಬ್ಯಾರಿ ಚಿತ್ರ ಮತ್ತು ಸಾರಾ ಅಬೂಬಕ್ಕರ್ ಕುರಿತಂತೆ ಕೆಲವು ಮಾತುಗಳು...



ಬೆಳಗ್ಗೆ ಸುಮಾರು ಎಂಟು ಗಂಟೆಯ ಹೊತ್ತು, ನಿದ್ದೆಯಿಂದ ಎದ್ದು ಮೊಬೈಲ್ ನೋಡಿದರೆ ಒಂದು ಮಿಸ್ಡ್ ಕಾಲ್. ಇನ್ನೊಂದು ಮೆಸೇಜ್. ನೋಡಿದರೆ ಬೊಳುವಾರು ಮುಹಮ್ಮದ್ ಕುಂಞಿ ಅವರದು. ಮೆಸೇಜ್ ತೆರೆದು ನೋಡಿದರೆ 'ಬ್ಯಾರಿ' ಚಿತ್ರಕ್ಕೆ ಸ್ವರ್ಣಕಮಲ' ಎಂಬ ಒಂದು ಸಾಲು. ಮನಸ್ಸು ಜುಂ ಎಂದಿತು. ಎದ್ದು ಟಿ.ವಿ. ಆನ್ ಮಾಡಿದೆ. ಗಿರೀಶ್ ಕಾಸರವಳ್ಳಿಯವರ 'ಕೂರ್ಮಾವತಾರ' ಶ್ರೇಷ್ಠ ಕನ್ನಡ ಚಿತ್ರವಾಗಿ ಗುರುತಿಸಿಲ್ಪಟ್ಟರೆ, 'ಬ್ಯಾರಿ' ಚಿತ್ರ ಸ್ವರ್ಣಕಮಲ ಗಳಿಸಿದೆ. ದಿಲ್ಲಿ ಅದೇ ಮೊದಲ ಬಾರಿಗೆ ಒಂದು ಸಿನಿಮಾದ ಮೂಲಕ ಬ್ಯಾರಿ ಎನ್ನುವ ಶಬ್ದವನ್ನು ಕೇಳಿರಬೇಕು. ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯೂ ಸೇರಿದಂತೆ ಆಸುಪಾಸಿನ ಮುಸ್ಲಿಮರ ಒಂದು ಗುಂಪು, ಹಾಗೂ ಬೆಳ್ಚಡ, ಬೋವಿ ಜನಾಂಗದ ಒಂದಿಷ್ಟು ಜನರು ಆಡುವ ಭಾಷೆ ಬ್ಯಾರಿ. ಇಂತಹ ಒಂದು ಪುಟ್ಟ ಭಾಷೆ, ರಾಷ್ಟ್ರ ಭಾಷೆಯನ್ನು ಮಾತ್ರವಲ್ಲ, ಕನ್ನಡ, ತುಳು, ಕೊಂಕಣಿ,



ಕೊಡವ ಎಲ್ಲಾ ಭಾಷೆಗಳನ್ನು ಹಿಂದಿಕ್ಕಿ ಸರ್ವಶ್ರೇಷ್ಠ ಸ್ವರ್ಣ ಕಮಲ ಪ್ರಶಸ್ತಿ ಪಡೆದದ್ದು ನನ್ನ ಮಟ್ಟಿಗೆ ಸಣ್ಣ ವಿಷಯ ಆಗಿರಲೇ ಇಲ್ಲ.

ಅಂದು ಸಂಜೆ ಬೆಂಗಳೂರಿನಿಂದ ನನ್ನ ಪತ್ರಕರ್ತ ಮಿತ್ರ ಫೋನ್ ಕರೆ ಮಾಡಿದ್ದ. ಆತನಿಗೆ ಈ 'ಬ್ಯಾರಿ' ಎನ್ನುವುದು ಒಂದು ಸಮಸ್ಯೆಯಾಗಿ ಬಿಟ್ಟಿತ್ತು, ಇದಾವ ಭಾಷೆ? ಮಲಯಾಳವೆ? ಇವರಿರುವುದು ಎಲ್ಲಿ? ಇದು ಕನ್ನಡಕ್ಕೆ ಸಿಕ್ಕಿದ ಪ್ರಶಸ್ತಿಯೋ ಅಥವಾ ಕೇರಳಕ್ಕೆ ಸಿಕ್ಕಿದ ಪ್ರಶಸ್ತಿಯೋ? ಹಲವು ಗೊಂದಲಗಳನ್ನು ಇಟ್ಟುಕೊಂಡು ಫೋನ್ ಕರೆ ಮಾಡಿದ್ದ.

"ಅಲ್ಲ ಮಾರಾಯ...ಈ ಬ್ಯಾರಿ ಎಂದರೆ ಯಾರು ಮಾರಾಯ?" ಕೇಳಿದ.

"ಈ ಬ್ಯಾರಿ ಅಂದರೆ ನಾನೇ" ಅವನಿಗೆ ಉತ್ತರಿಸಿದ.

"ನೀನು ಮುಸ್ಲಿಂ ಅಲ್ವಾ? ಹಾಗಾದ್ರೆ..."

"ನಾನು ಮುಸ್ಲಿಮನೂ ಹೌದು. ಜೊತೆಗೆ ಬ್ಯಾರಿಯೂ ಹೌದು...ನಾನು ಮಾತನಾಡುವ ಭಾಷೆ ಬ್ಯಾರಿ" ಎಂದೆ.

ಅವನ ಸಮಸ್ಯೆ ಇನ್ನಷ್ಟು ಜಟಿಲವಾಯಿತು "ಅದು ಹೇಗೆ? ನೀನು ಮುಸ್ಲಿಮ್ ಎಂದ ಮೇಲೆ ನಿನ್ನ ಭಾಷೆ ಉರ್ದು ಆಗಿರಬೇಕಲ್ಲ..."

"ನನಗೆ ಉರ್ದು ಗೊತ್ತಿಲ್ಲ ಮಾರಾಯ" ಉತ್ತರಿಸಿದೆ.

"ಮುಸ್ಲಿಮರಿಗೆ ಉರ್ದು ಗೊತ್ತಿಲ್ಲ ಎಂದರೆ ನಾನು ನಂಬುವುದು ಹೇಗೆ? ತಮಾಷೆ ಮಾಡ್ಬೇಡ..."

"ನನಗೆ ಉರ್ದು ಗೊತ್ತಿಲ್ಲ, ಆ ಕುರಿತಂತೆ ನನಗೆ ಹೆಮ್ಮೆಯೇನೂ ಇಲ್ಲ, ಯಾಕೆಂದರೆ ಉರ್ದು ಗೊತ್ತಿಲ್ಲದೆ ನಾನು ತುಂಬಾ ಮಿಸ್ ಮಾಡ್ಕೊಂಡಿದ್ದೇನೆ. ಆದರೆ ನನ್ನದು ಬ್ಯಾರಿ ಮಾತೃಭಾಷೆ. ಮನೆಭಾಷೆ. ಬ್ಯಾರಿ ಬಿಟ್ರೆ ನಾನು ಕಲಿತ ಎರಡನೆ ಭಾಷೆ ತುಳು. ಅದು ಬಿಟ್ರೆ ಶಾಲೆಯ ಒಂದನೆ ತರಗತಿಯಿಂದ ಕಲಿತದ್ದು ಕನ್ನಡ."

"ಬ್ಯಾರಿ ಎಂದರೆ ಮುಸ್ಲಿಮರೊಳಗೆ ಇರುವ ಜಾತಿಯೋ..."

"ಅಲ್ಲ... ಎಲ್ಲ ಜಾತಿ ಧರ್ಮಗಳಲ್ಲಿರುವಂತೆಯೇ ಮುಸ್ಲಿಮರಲ್ಲೂ ಪ್ರಾದೇಶಿಕ ಭಿನ್ನತೆಗಳಿವೆ... ಬ್ಯಾರಿ ಎಂದರೆ ಪ್ರಾದೇಶಿಕ ಭಿನ್ನತೆ. ಮುಖ್ಯವಾಗಿ ಈ ಭಾಷೆಯನ್ನು ಆಡುವವರು ಬರೇ ಮುಸ್ಲಿಮರು ಮಾತ್ರವಲ್ಲ, ಬೋವಿ ಜನಾಂಗ, ಬೆಳ್ಚಡ ಜನಾಂಗದವರೂ ಈ ಭಾಷೆಯನ್ನೇ ಆಡ್ತಾರೆ... ಆದರೆ ಬಹುಸಂಖ್ಯಾತ ಬ್ಯಾರಿಗಳು ಮುಸ್ಲಿಮರು... ಅಮೃತ ಸೋಮೇಶ್ವರರ ಮನೆ ಭಾಷೆಯೂ ಇದೇ ಬ್ಯಾರಿ ಭಾಷೆಗೆ ಸಮೀಪದಲ್ಲಿದೆ. ಒಂದು ರೀತಿಯಲ್ಲಿ ಅವರಾಡುವ ಭಾಷೆಯೂ ಬ್ಯಾರಿಯೇ..."

ಅವನ್ಯಾವುದೋ ಶಾಕ್‌ನಲ್ಲಿದ್ದಂತೆ ನನ್ನಲ್ಲಿ ಮಾತನಾಡುತ್ತಿದ್ದ.

* * * *

ನನ್ನ ಶಾಲಾ ಕಾಲದಲ್ಲಿ 'ಬ್ಯಾರಿ' ಎನ್ನುವ ಐಡೆಂಟಿಟಿ ನನ್ನ ಪಾಲಿಗೆ ಅವಮಾನವಷ್ಟೇ ತರುತ್ತಿತ್ತು, ಆ ಶಬ್ದ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದ ನನ್ನ ಸಮುದಾಯಕ್ಕೆ ಹಿಡಿದ ಕನ್ನಡಿ ಮಾತ್ರವಾಗಿತ್ತು. ಈ 'ಬ್ಯಾರಿ' ಶಬ್ದದಿಂದ ನಾನು ನನ್ನ ಸಮುದಾಯದ ಎಲ್ಲ ತರುಣರು ಬೆನ್ನು ಹಾಕಿ ಓಡುತ್ತಿದ್ದೆವು. ಆಗೆಲ್ಲ ನಮ್ಮನ್ನು ಕಂಡಾಕ್ಷಣ ಇತರ ಹುಡುಗರು "ದಾನೆಂಬೆ ಬ್ಯಾರಿ?" (ಏನೋ ಬ್ಯಾರಿ?) ಎಂದು ಕರೆಯುತ್ತಿದ್ದರು. ಅಥವಾ "ಬ್ಯಾರಿ ಬತ್ತೆ" (ಬ್ಯಾರಿ ಬಂದ) ಎಂದು ಹೇಳುತ್ತಿದ್ದರು. ನಮಗೋ ಸಿಟ್ಟು ಉಕ್ಕಿ ಬರುತ್ತಿತ್ತು. "ಇನ್ನೊಮ್ಮೆ ಬ್ಯಾರಿ ಅಂದ್ರೆ ಜಾಗ್ರತೆ" ಎಂದು ಎಚ್ಚರಿಸುತ್ತಿದ್ದೆವು. ಬ್ಯಾರಿ ಎಂದು ಕರೆದದ್ದಕ್ಕಾಗಿಯೇ ನಮ್ಮ ನಡುವೆ ಅದೆಷ್ಟೋ ಗಲಾಟೆಗಳಾಗಿವೆ. ಬ್ಯಾರಿ ಎನ್ನುವುದು ಅಂದು ನಮ್ಮ ಪಾಲಿಗೇ ಅಕ್ಷರಮಟ್ಟಿಗೆ ಅಸ್ಪೃಶ್ಯವಾಗಿತ್ತು.


ಯಾರಾದರೂ ನಿಮ್ಮ ಮನೆ ಭಾಷೆ ಯಾವುದು ಎಂದು ಕೇಳಿದರೆ "ಮಲಯಾಳಂ" ಎನ್ನುತ್ತಿದ್ದೆವು. ಆದರೆ ಮಲಯಾಳಿಗಳು ನಮ್ಮ ಭಾಷೆಯನ್ನು ಮಲಯಾಳಂ ಎಂದು ಒಪ್ಪುತ್ತಿರಲಿಲ್ಲ. ನಾವೇ ಸಣ್ಣದೊಂದು ಟಿಪ್ಪಣಿಯನ್ನೂ ನೀಡುತ್ತಿದ್ದೆವು "ಮಲಯಾಳಂ ಎಂದರೆ ಮಲಯಾಳಂ ಅಲ್ಲ. ಮಲಯಾಳಂ ಹಾಗೆ ಇರುವ ಭಾಷೆ. ಸ್ವಲ್ಪ ಬೇರೆ" ಇಷ್ಟೆಲ್ಲ ಸಮರ್ಥನೆ ನೀಡುವಷ್ಟರಲ್ಲಿ ಸುಸ್ತಾಗುತ್ತಿದ್ದೆವು. ವಿಚಿತ್ರವೆಂದರೆ ನಮ್ಮ ಭಾಷೆಯನ್ನು ನಾವು 'ನಕ್ಕ್-ನಿಕ್ಕ್' ಎಂದು ಕರೆಯುತ್ತಿದ್ದೆವು. 'ನಕ್ಕ್-ನಿಕ್ಕ್' ಎಂದರೆ 'ನನಗೆ-ನಿನಗೆ' ಎಂದರ್ಥ. ನನಗೂ-ನಿನಗೂ ಮಾತ್ರ ಈ ಭಾಷೆ. ಹೊರಗೆ ತುಳು, ಇನ್ನೂ ತುಸು ಹೊರಗೆ ಹೋದರೆ ಕನ್ನಡ ಭಾಷೆಯನ್ನು ಬಳಸುತ್ತಿದ್ದವರು ನಾವು. ಮದರಸದಲ್ಲಿ ಮುಸ್ಲಿಯಾರ್‌ಗಳು ಕೇರಳದಿಂದಲೇ ಬರುತ್ತಿದ್ದರು. ಅವರು ಮಲಯಾಳಂನಲ್ಲಿ ಅರಬಿಯನ್ನು ಕಲಿಸುತ್ತಿದ್ದರು. ಅತ್ತ ಮಲಯಾಳಂನ್ನೂ ಜೀರ್ಣಿಸದೆ, ಇತ್ತ ಅರೆಬಿಕ್‌ನ್ನೂ ಕಲಿಯಲಾಗದೆ ನಾವು ನಡುನೀರಲ್ಲಿ ಮುಳುಗುತ್ತಿದ್ದೆವು. ಜಮಾಅತ್‌ನ ಲೆಕ್ಕ ಪುಸ್ತಕಗಳೆಲ್ಲ ಕನ್ನಡದಲ್ಲೇ ಇರುತ್ತಿತ್ತು, ಪತ್ರ ವ್ಯವಹಾರಗಳೂ ಕನ್ನಡ ಭಾಷೆಯಲ್ಲೇ ಇರುತ್ತಿತ್ತು, ಬ್ಯಾರಿ ಮೌಖಿಕ ಭಾಷೆ. ಅದಕ್ಕೆ ಲಿಪಿ ಇದ್ದಿರಲೇ ಇಲ್ಲ, ಲಿಪಿಯ ಅಗತ್ಯ ಬಿದ್ದರೆ ನಾವು ಕನ್ನಡವನ್ನು ಬಳಸುತ್ತಿದ್ದೆವು.

ಒಂದಾನೊಂದು ಕಾಲದಲ್ಲಿ ನನ್ನಜ್ಜನಜ್ಜನಜ್ಜನವರೆಲ್ಲ ಬ್ಯಾರಿಗಳೆಂದೇ ದರ್ಬಾರು ನಡೆಸಿದವರು. ಆದಂ ಬ್ಯಾರಿ, ಪೊಡಿಯ ಬ್ಯಾರಿ, ಯೂಸುಫ್ ಬ್ಯಾರಿ ಹೀಗೆ ನೂರಾರು ಹೆಸರುವಾಸಿಯಾದ ಬ್ಯಾರಿಗಳು ಆಗಿಹೋಗಿದ್ದರು. ಒಂದಾನೊಂದು ಕಾಲದ ಯಾವುದೇ ಕಡತ ಬಿಡಿಸಿ ನೋಡಿದರೂ ಹೆಸರಿನ ಮುಂದೆ 'ಬ್ಯಾರಿ' ಎನ್ನುವ ಪದವನ್ನು ಒಂದು ಬಿರುದಿನಂತೆ ಧರಿಸುತ್ತಿದ್ದರು. ಆದರೆ 70ರ ದಶಕದ ನಂತರ ಈ ಸಮುದಾಯಕ್ಕೆ ಅದಾವ ಗ್ರಹಣ ಬಡಿಯಿತೋ ಗೊತ್ತಿಲ್ಲ, ಬ್ಯಾರಿ ಎನ್ನುವ ಶಬ್ದಕ್ಕೆ ನೆರಳಿಗೆ ಅಂಜುತ್ತಾ ಬದುಕತೊಡಗಿತು. ನಿಧಾನಕ್ಕೆ ಈ ಸಮುದಾಯದಲ್ಲಿ ಬಿ.ಎಂ. ಇದಿನಬ್ಬ, ಬಿ.ಎ. ಮೊಯ್ದಿನ್, ಮುಹಮ್ಮದ್ ಕಮಾಲ್, ಬಿ.ಎ. ಉಮರಬ್ಬ, ಬಿ.ಎ. ಹಸನಬ್ಬ... ಬೊಳುವಾರು, ಫಕೀರ್ ಮೊದಲಾದವರ ಪ್ರವೇಶವಾದಂತೆ ಬ್ಯಾರಿಗಳು ಕನ್ನಡದ ಮುಖ್ಯವಾಹಿನಿಯಲ್ಲಿ ಕಾಣಿಸಿಕೊಂಡರು. ಇದು ಸಹಜವಾಗಿಯೇ ಬ್ಯಾರಿಗಳಲ್ಲಿ ಆತ್ಮವಿಶ್ವಾಸವನ್ನು ತುಂಬತೊಡಗಿತು. ಬ್ಯಾರಿ ಸಾಹಿತ್ಯ ಸಾಂಸ್ಕೃತಿಕ ಚಳವಳಿ ಆರಂಭವಾಯಿತು. ಬ್ಯಾರಿ ಹೆಸರಲ್ಲಿ ಸಂಘಟನೆ ಹುಟ್ಟಿಕೊಂಡಿತು. ನನ್ನಂತಹ ವಿದ್ಯಾವಂತನಿಗೇ ಇದು ತಮಾಷೆಯಾಗಿ ಕಾಣುತ್ತಿತ್ತು. ಆದರೂ ಒಂದು ರೀತಿ ಹಿತ ಅನ್ನಿಸುತ್ತಿತ್ತು. ಈ ಚಳವಳಿಯ ಪರಿಣಾಮವಾಗಿಯೇ ಮೂರು ವರ್ಷಗಳ ಹಿಂದೆ ಬ್ಯಾರಿ ಅಕಾಡೆಮಿ ದೊರಕಿತು.

* * * *

'ಬ್ಯಾರಿ' ಸಿನಿಮಾ 'ಚಂದ್ರಗಿರಿ ತೀರದಲ್ಲಿ' ಕಾದಂಬರಿಯನ್ನು ಕದ್ದದ್ದು ಎನ್ನುವುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ. ಇದರಲ್ಲಿ ಸಾರಾ ಅಬೂಬಕ್ಕರ್‌ಗೆ ಅನ್ಯಾಯವಾಗಿರುವುದು ನೂರಕ್ಕೆ ನೂರರಷ್ಟು ನಿಜ. ಆದರೆ ಅದರಿಂದ ಒಂದು ಸಮುದಾಯ ಪಡೆದ ಲಾಭಕ್ಕೆ ಹೋಲಿಸಿದರೆ ಸಾರಾ ಅಬೂಬಕ್ಕರ್‌ಗೆ ಆದ ಅನ್ಯಾಯವನ್ನು ನಾನು ಸಹಿಸಿಕೊಳ್ಳಬಲ್ಲೆ ಮತ್ತು ಇಷ್ಟು ದೊಡ್ಡ ಲಾಭವಾಗುವುದಾದರೆ ಆಗಾಗ ಇಂತಹ ಸಣ್ಣಪುಟ್ಟ ಅನ್ಯಾಯಗಳು ನಡೆದರೂ ಪರವಾಗಿಲ್ಲ ಅನ್ನಿಸುತ್ತದೆ ನನಗೆ.

ತನ್ನ ಇದ್ದಬಿದ್ದ ಶಕ್ತಿಯೊಂದಿಗೆ ಒಂದು ಸಣ್ಣ ಭಾಷೆ, ಸಂಸ್ಕೃತಿ ಸಿನಿಮಾ ರೂಪ ಪಡೆದು ಹಿಂದಿ ಸೇರಿದಂತೆ ರಾಷ್ಟ್ರದ ಎಲ್ಲ ಭಾಷೆಗಳಿಗೆ ಸೆಡ್ಡು ಹೊಡೆದು ಸ್ವರ್ಣಕಮಲವನ್ನು ತನ್ನದಾಗಿಸಿಕೊಳ್ಳುವುದು ಸಣ್ಣ ವಿಷಯ ಅಲ್ಲವೇ ಅಲ್ಲ. ಅದು ಈ ದೇಶದ



ಬಹುಸಂಸ್ಕೃತಿಯನ್ನು ನಾಶಮಾಡಿ ಏಕ ಸಂಸ್ಕೃತಿಯನ್ನು ಪ್ರತಿಷ್ಠಾಪನೆ ಮಾಡುವವರಿಗೆ ಹಾಕಿದ ಸವಾಲು. ಶೈಕ್ಷಣಿಕವಾಗಿ, ಸಾಮಾಜಿಕವಾಗಿ ತೀರಾ ಹಿಂದುಳಿದ ಸಮುದಾಯಕ್ಕೆ ಸಣ್ಣದೊಂದು ಅವಕಾಶ ಕೊಟ್ಟರೆ ಯಾವ ಎತ್ತರಕ್ಕೆ ಏರಬಹುದು ಎನ್ನುವುದಕ್ಕೆ ಉದಾಹರಣೆ.

* * * *

ಬ್ಯಾರಿ ಭಾಷೆಯಲ್ಲಿ ಒಂದು ಚಿತ್ರ ಬರುತ್ತದೆ ಎಂ[...] ನನಗೆ ಗೊತ್ತಾದುದೇ ಸಾರಾ ಅಬೂಬಕ್ಕರ್ ಅವ[...] ದೂರವಾಣಿ ಕರೆ ಮಾಡಿದಾಗ. "ಅಲ್ತಾಫ್ ಎಂಬಾತ 'ಬ್ಯಾ[...] ಎಂಬ ಚಿತ್ರ ಮಾಡುತ್ತಿದ್ದಾನಂತೆ. ಅದು ನನ್ನ ಕತೆಯನ್ನ[...] ಆಧರಿಸಿದೆ ಎಂದು ಟಿವಿ ಸಂದರ್ಶನವೊಂದರಲ್ಲಿ ಕೇರಳ[...] ನಟ ಮಮ್ಮುಕೋಯ ಹೇಳಿದ್ದಾರೆ. ಈ ಹಿಂದೆ ಈ[...] ನನ್ನ ಮನೆಗೆ ಬಂದಿದ್ದ ನಾನು ಅದರ ಹಕ್ಕನ್ನು ಕೊಡುವುದಿ[...] ಎಂದೂ ಹೇಳಿದ್ದೆ. ಮುಖ್ಯವಾಗಿ ಅದರ ಹಕ[...] ಎನ್‌ಎಫ್‌ಡಿಸಿ ಕೈಯಲ್ಲಿದೆ. ಎರಡನೆಯದಾಗಿ ಅದ[...] ಚಿತ್ರ ಮಾಡುವುದಾಗಿ ಜಯಮಾಲ ಅವರು ನನ್ನೊಂದಿ[...] ಹೇಳಿದ್ದಾರೆ. ಇದೀಗ ನನ್ನ ಅನುಮತಿ ಇಲ್ಲದೆ ಚಿತ್ರೀಕರಣ[...] ಇಳಿದಿದ್ದಾನೆ..."

ನಾನು ವಿಚಿತ್ರವಾದ ಸಂದಿಗ್ಧಕ್ಕೆ ಬಿದ್ದಿದ್ದೆ. ಅವರ ಮಾ[...] ಕೇಳಿದಾಕ್ಷಣ ನನಗೆ ನೋವಾಗಿರಲಿಲ್ಲ. ಬದಲಿಗೆ ಒಂ[...] ರೀತಿಯ ಖುಷಿಯಾಗಿತ್ತು, ಅದಕ್ಕೆ ಎರಡು ಮು[...] ಕಾರಣಗಳಿದ್ದವು. ಒಂದು ಕಾಲದಲ್ಲಿ ಸಾರಾ ಅಬೂಬಕ್ಕ[...] ಕಾದಂಬರಿ 'ಚಂದ್ರಗಿರಿ ತೀರದಲ್ಲಿ' ಕೃತಿಯನ್ನು ನ[...] ಸಮುದಾಯದ ಕೆಲ ಜನರು ತೀವ್ರವಾಗಿ ವಿರೋಧಿಸಿದ್ದ[...] ಇದೀಗ ಅವರು ಕದ್ದಾದರೂ ಸರಿ, ಸಿನಿಮಾ ಮಾಡ[...] ಮುಂದಾಗಿದ್ದಾರೆ. ಇದರಲ್ಲಿ ನನಗೆ ಸಂತೋ[...] ಪಡಬೇಕಾದದ್ದು ಬಿಟ್ಟರೆ ಬೇರೇನೂ ಕಂಡಿರಲಿಲ್ಲ. ಇನ್ನೊಂ[...] ಮುಖ್ಯ ಕಾರಣ, ಬ್ಯಾರಿ ಭಾಷೆಯಲ್ಲಿ ಆತ ಸಿನಿಮ[...] ಮಾಡಲು ಹೊರಟಿದ್ದಾನೆ. ಅದೇನೂ ಆತನಿಗೆ ಲಾ[...] ಕೊಡುವ ವಿಷಯವಾಗಿರಲಿಲ್ಲ. ಹೆಚ್ಚೆಂದರೆ ಆತನಿಗೆ ನಟಿಸು[...] ಕೇವಲಿರಬಹುದು. ಅದಕ್ಕಾಗಿ ಆತ ಕನ್ನಡ ಭಾಷೆಯ[...] ಆಯ್ಕೆ ಮಾಡಿಕೊಳ್ಳಬಹುದಿತ್ತು, ಆದರೆ ಬ್ಯಾರಿ ಭಾಷೆಯ[...] ಆಯ್ಕೆ ಮಾಡಿಕೊಂಡು ಮೊತ್ತ ಮೊದಲ ಬಾರಿಗೆ ಚಿ[...] ಮಾಡಲು ಹೊರಟಿದ್ದಾನೆ?. ಆದರೆ ನೋವು ಕೊಡು[...] ವಿಚಾರವೆಂದರೆ, ಆತ ಸಾರಾ ಅಬೂಬಕ್ಕರ್ ಕತೆಯ[...] ಕದ್ದಿದ್ದಾನೆ. ಸಾರಾ ಅಬೂಬಕ್ಕರ್ ತುಂಬಾ ಸಿಟ್ಟು ಮ[...] ನೋವಿನಿಂದ ಮಾತನಾಡುತ್ತಿದ್ದರು. ಯಾವ ರೀತಿಯಲ್ಲಾದರ[...] ಅವರನ್ನು ಸಮಾಧಾನಿಸಬಹುದೋ ಎಂದು ದೂರವಾ[...] ಯಲ್ಲಿ ಸಣ್ಣದೊಂದು ಪ್ರಯತ್ನ ಮಾಡಿದ್ದೇ..."ಪರವಾಗಿ[...] ಮೇಡಂ... ಈ ರೀತಿಯಲ್ಲಾದರೂ ನಿಮ್ಮ ಕಾದಂಬ[...] ನಮ್ಮ ಜನರಿಗೆ ತಲುಪುತ್ತಲ್ಲ..." ಎಂದಿದ್ದೆ. "ಅ[...] ತಲುಪುವುದೆಲ್ಲ ತಲುಪಿಯಾಗಿದೆ. ಇವನು ನನಗೆ ಮೋ[...] ಮಾಡಿ ತಲುಪಿಸುವ ಅಗತ್ಯವಿಲ್ಲ..." ಎಂದು ಕಿಡಿಯಾಗಿದ್ದ[...]

"ಸರಿ, ಅದರ ಬಗ್ಗೆ ನಾನು ವಿಚಾರಿಸಿ ಹೇಳುತ್ತೇ[...] ಮೇಡಂ..." ಎಂದಿದ್ದೆ.

ನನಗೆ ಆಗಲೂ ಈಗಲೂ ಈ ಅಲ್ತಾಫ್ ಚೊಕ್ಕಬೆ[...] ಎಂಬವವರ ಬಗ್ಗೆ ಒಂದಕ್ಷರವೂ ಗೊತ್ತಿಲ್ಲ, ವೈಯಕ್ತಿಕವಾ[...] ಇವರನ್ನು ನೋಡಿಯೂ ಇಲ್ಲ. ಫೋನ್‌ನ[...] ಮಾತನಾಡಿಯೂ ಇಲ್ಲ. ಕೆಲವರಿಂದ ದೊರಕಿ[...] ಮಾಹಿತಿಯನ್ನು ಸಾರಾ ಅಬೂಬಕರ್ ಅವರಿಗೆ ನೀಡಿ[...] "ಈಗಾಗಲೇ ಸಿನಿಮಾದ ಬಹುತೇಕ ಚಿತ್ರೀಕರ[...] ಮುಗಿದಿದೆ."

"ಏನು ಮಾಡೋದು... ಪತ್ರಿಕಾಗೋಷ್ಠಿ ಕರೀಲಾ[...]" ಎಂದು ಕೇಳಿದ್ದರು.

ಬೇಡ... ಇದರಿಂದ ಸುಮ್ಮನೆ ಆ ಚಿತ್ರಕ್ಕೆ ನೀವೇ ಚಾರ ಕೊಟ್ಟ ಹಾಗೆ ಆಗುತ್ತೆ, ಸಾಧ್ಯವಾದರೆ ಇಂಡಸ್ಟ್ರಿಗೆ ಬರೆಯಿರಿ. ಎಸ್‌ಎಫ್‌ಡಿಸಿ ಕೈಯಲ್ಲಿರುವ ಹಕ್ಕುಗಳ ತ ದಾಖಲೆಗಳನ್ನು ಜೊತೆಗಿಡಿ. ಜಯಮಾಲ ಸೇರಿದಂತೆ ಮದ ಎಲ್ಲ ಗಣ್ಯರಿಗೂ ಪತ್ರ ಬರೆಯಿರಿ. ಜೊತೆಗೆ ಉ ನ್ಯಾಯವಾದಿಯನ್ನು ಹಿಡಿದು, ಚಿತ್ರ ರ್ಶನವಾಗದಂತೆ... ಅದಕ್ಕೆ ತಡೆ ತನ್ನಿ... ಇದರಾಚೆಗೆ ಬಗ್ಗೆ ಏನೂ ಮಾಡುವುದು ಅಷ್ಟು ಸರಿಯಲ್ಲ" ಿದ್ದೆ.


ಆಮೇಲೆ ಈ ಬಗ್ಗೆ ಹಲವು ಬಾರಿ ನನ್ನಲ್ಲಿ ತನಾಡಿದ್ದರು. ನನ್ನ ಸಲಹೆಗಳನ್ನು ಕೊಟ್ಟಿದ್ದೆ. ಇದೇ ದರ್ಭದಲ್ಲಿ 'ವಾರ್ತಾಭಾರತಿ' ಪತ್ರಿಕೆಯಲ್ಲೂ ಸಾರಾ ೂಬಕರ್ ಅವರ ನೋವುಗಳನ್ನು ಬರೆದೆ. ಅವರ ೆಗಳನ್ನೂ ಹಾಕಿದೆ. ಹಾಗೆಯೇ ಅಲ್ತಾಫ್ ಎನ್ನುವ ರಿಚಿತ ತರುಣನ ಸಾಧನೆಯ ಕುರಿತಂತೆಯೂ ತೆಜೊತೆಗೆ ಮೆಚ್ಚುಗೆಯ ಮಾತುಗಳನ್ನು ಹಾಕಿದ್ದೆ. ಕೆಂದರೆ ಆತನ ಸಾಹಸವನ್ನು ಮೆಚ್ಚದೇ ಇರುವುದಕ್ಕೆ ್ನ ಕಾರಣವೇ ಇರಲಿಲ್ಲ. ಬಳಿಕ ತುಂಬಾ ಸಮಯ ು ಅಬೂಬಕ್ಕರ್ ಸಂಪರ್ಕದಲ್ಲೇ ಇರಲಿಲ್ಲ. ಚಿತ್ರ ುಗಡೆಯಾಯಿತು. ಆಗಲೂ ಚಿತ್ರದ ಸಾಧನೆಯ ಬಗ್ಗೆ ಚ್ಚುಗೆ ವ್ಯಕ್ತಪಡಿಸಿ ಪುಟ್ಟ ಲೇಖನ ಬರೆದಿದ್ದೆ. ಜೊತೆಗೆ ಸಾರಾ ಅಬೂಬಕ್ಕರ್ ಅವರ ಕದ್ದ ಕತೆ ಎನ್ನುವುದನ್ನೂ ಲ್ಲೇಖಿಸಿದ್ದೆ.

* * * *

ಆದರೆ ಇದೇ ಸಂದರ್ಭದಲ್ಲಿ ಒಂದು ಮುಖ್ಯ ಾವಣೆಯನ್ನು ನಾವು ಗಮನಿಸಬೇಕು. ಒಂದು ಕಾಲದಲ್ಲಿ ದ್ರಗಿರಿ ತೀರದಲ್ಲಿ' ಕೃತಿಯನ್ನು ವಿರೋಧಿಸಿ ನನ್ನ ಜನರಲ್ಲಿ ಮ ಸಣ್ಣ ಗುಂಪು ಪ್ರತಿಭಟನೆ ನಡೆಸಿತ್ತು, ಅಭಿವ್ಯಕ್ತಿ ಂತ್ರ ಆಗ ಚರ್ಚೆಗೊಳಗಾಯಿತು. ಎಲ್ಲಕ್ಕಿಂತ ುಖ್ಯವಾಗಿ, ಆ ಕೃತಿಯ ಮೂಲಕ ಮುಸ್ಲಿಮ್ ಮಹಿಳೆ ಸಕ ಚರ್ಚೆಗೊಳಗಾದಳು.

ಇಂದು ಅದೇ ಸಮುದಾಯ 'ಚಂದ್ರಗಿರಿ ತೀರದಲ್ಲಿ' ಯನ್ನು ಸಿನಿಮಾ ಮಾಡಿದೆ. ಲೇಖಕಿ ಒಪ್ಪಿಗೆ ಕೊಡದ ಾಕ್ಕಾಗಿ ಅದನ್ನು ಕದ್ದು ಸಿನಿಮಾ ಮಾಡಿದೆ. ಇದು ೋಗ್ಯಕರ ಬದಲಾವಣೆ ಎನ್ನುವುದನ್ನು ನಾವು ನಿಸಬೇಕು. 'ಚಂದ್ರಗಿರಿ ತೀರದಲ್ಲಿ' ಕಾದಂಬರಿ ಎತ್ತಿದ ಗಳಿಗೆ ಸಿಕ್ಕಿದ ಉತ್ತರ ಇದು. ಆ ಕೃತಿಯನ್ನು ುದಾಯ ಸ್ವೀಕರಿಸುವ ಮನಸ್ಸನ್ನು ಹೊಂದಿದೆ. ಇಂತಹ ದರ್ಭದಲ್ಲಿ ಲೇಖಕಿ ಅದರ ಮೇಲೆ ಹಕ್ಕುಗಳನ್ನು ಸುತ್ತಾ, ಅವರನ್ನು ಟೀಕೆ ಮಾಡುವುದು ನನಗೆ ಕಾಲದ ್ಯವಾಗಿ ಕಾಣುತ್ತದೆ. 'ಬ್ಯಾರಿ' ಸಿನಿಮಾದ ನಿರ್ದೇಶಕ ಮ ಸಣ್ಣ ಮಾರುಕಟ್ಟೆಯ ಭರವಸೆಯೂ ಇಲ್ಲದೆ ಗಟ್ಟಲೆ ಹಣ ಹೂಡಿ ಆ ಸಿನಿಮಾವನ್ನು ಮಾಡಿದ್ದಾನೆ. ರೋ ಹೇಳಿದಂತೆ ಆತ ಸಾಲ ಸೋಲದಲ್ಲಿ ಳುಗಿದ್ದಾನೆ. ಯಾವುದೋ ಹುಚ್ಚು ತೆವಲು, ಆಸೆ, ಆತನನ್ನು ಆ ಕೃತ್ಯಕ್ಕೆ ಪ್ರೇರೇಪಿಸಿರಬಹುದು. ಸಾರಾ ೂಬಕ್ಕರ್ ಹಕ್ಕು ಕೊಡಲಿಲ್ಲವೆಂದು ಅವನು ಕೈ ್ಲಿಲ್ಲ, ಕದ್ದಾದರೂ ಅದನ್ನು ಮಾಡಿಯೇ ತೀರುತ್ತೇನೆ ು ಹೊರಟ ಅವನ ಹುಂಬ ಸಾಹಸ ನನಗೆ ತುಂಬಾ ವಾಗಿ ಕಾಣಿಸುತ್ತದೆ. (ಒಂದು ವೇಳೆ ಇದಕ್ಕೆ ಸ್ವರ್ಣಕಮಲ ೇ ಇದ್ದಿದ್ದರೆ ಶಾಶ್ವತವಾಗಿ ಕಸದ ಬುಟ್ಟಿ ಸೇರುತ್ತಿತ್ತೇನೋ. ಕೆಂದರೆ ಮಂಗಳೂರಿನ ಥಿಯೇಟರ್‌ಗಳಲ್ಲೇ ಈ ಚಿತ್ರ ದು ವಾರ ಓಡಿಲ್ಲ)

ಇಂತಹ ಕಳವುಗಳು ವ್ಯಾಪಕವಾಗಿ ಾಗಿದೆ. ಸಾರಾ, ಫಕೀರ್, ಳುವಾರರಂತಹ ಅಪರೂಪದ ಕತೆಗಾರರ ಕೃತಿಗಳು ು ಸಮುದಾಯಕ್ಕೆ ಬೆಳಕು ನೀಡುವ ಕಿಟಕಿಗಳು ಡ. ಅದು ನನ್ನ ಕಿಟಕಿ. ನನಗೆ ಮನಸು ಬಂದಾಗ ಯುತ್ತೇನೆ, ಮುಚ್ಚುತ್ತೇನೆ ಎನ್ನುವ ಲೇಖಕ ನನಗೆ ್ವಾರ್ಥವಾಗಿ ಕಾಣುತ್ತಾನೆ. ಇಂತಹ ಸಂದರ್ಭದಲ್ಲಿ ದನ್ನು ಕದಿಯುವುದನ್ನು ನಾನು ಖಂಡಿತವಾಗಿ ್ತೇನೆ. ಫಕೀರ್, ಕಟ್ಪಾಡಿ ವಿಚಾರಗಳನ್ನು ಾದರೂ, ಅದನ್ನು ತಲುಪಬೇಕಾದವರಿಗೆ ತಲುಪಿಸಿ ್ತೇನೆ. ಅನಾರೋಗ್ಯ ಪೀಡಿತ ಜನರಿರುವ ಾಜದಲ್ಲಿ ಒಬ್ಬ ಒಂದು ಔಷಧವನ್ನು ದುಹಿಡಿದಿದ್ದಾನೆ ಎನ್ನುವ ಒಂದೇ ಒಂದು ಣಕ್ಕಾಗಿ, ಅದರ ಹಕ್ಕುಗಳು ತನ್ನದು ಮತ್ತು ತಾನು ುಸಿದರೆ ಮಾತ್ರ ಅದನ್ನು ಕೊಡಬಲ್ಲೆ ್ನುವ ಸಂದರ್ಭದಲ್ಲಿ ಅದನ್ನು ್ಚಿದರೂ ಅಗತ್ಯವಿರುವವರಿಗೆ ...ಪುದನ್ನು, ...ಕೊಂಡವರೆಲ್ಲರೂ ...ಸುತ್ತಾರೆ ಎಂದು ತಿಳಿದಿದ್ದೇನೆ. ...ದು ಫಕೀರ್, ಬೊಳುವಾರು, ... ಮೊದಲಾದವರ ಕತೆಗಳು ಬ್ಯಾರಿ ...ದಲ್ಲಿ ನಾಟಕ, ಸಿನಿಮಾ, ಟಿ.ವಿ.



ಧಾರಾವಾಹಿಯಾಗಿ ಬರಬೇಕು. ಅದಕ್ಕಾಗಿ ಅವರೊಂದಿಗೆ ಅನುಮತಿಯನ್ನು ಕೇಳಬೇಕು. ಕೊಡದಿದ್ದಲ್ಲಿ ಅವರ ಬೆನ್ನು ಬೀಳಬೇಕು. ಮತ್ತೂ ಕೊಡದಿದ್ದಲ್ಲಿ ಅದನ್ನು ಕದಿಯಬೇಕು.

* * * *

ಇದೇ ಸಂದರ್ಭದಲ್ಲಿ ಒಬ್ಬ ಸೃಜನಶೀಲ ಲೇಖಕಿಗೆ ತಕ್ಕುದಲ್ಲದ ಕೆಲವು ಸಾಲುಗಳನ್ನು ಕಳೆದ ವಾರ 'ಲಂಕೇಶ್' ವಾರಪತ್ರಿಕೆಯಲ್ಲಿ ಸಾರಾ ಅಬೂಬಕರ್ ಬರೆದಿದ್ದಾರೆ. ಅದರಲ್ಲಿ ಮುಖ್ಯವಾದುದು ಬ್ಯಾರಿ ಸಾಹಿತ್ಯ ಅಕಾಡೆಮಿ ಒಬ್ಬ ಮುಸ್ಲಿಮನಿಗೆ ಅದರ ಡಿಟಿಪಿ ವರ್ಕ್‌ಗಳನ್ನು ಕೊಡಲಿಲ್ಲ ಎನ್ನುವ ಆರೋಪ. ಮತ್ತು ಅದರ ಹಿಂದೆಯೂ ಹತ್ತು ಹಲವು ಸಂಚುಗಳನ್ನು ಹುಡುಕಲು ಪ್ರಯತ್ನಿಸಿದ್ದಾರೆ.


ತಿಂಗಳ ಹಿಂದೆ ಬ್ಯಾರಿ ಅಕಾಡೆಮಿ ಒಂದು ಸಮಾರಂಭ ಮಾಡಿತ್ತು. ಅದರಲ್ಲಿ ಸಾರಾ ಅಬೂಬಕ್ಕರ್ ಭಾಗವಹಿಸಬೇಕಾಗಿತ್ತು. ಕೊನೆಯ ಕ್ಷಣದಲ್ಲಿ ಅವರು ಭಾಗವಹಿಸುವುದಿಲ್ಲ ಎನ್ನುವ ಸುದ್ದಿ ನನಗೆ ಸಿಕ್ಕಿತು. ಸಂಘಟಕರಲ್ಲಿ "ಸಾರಾ ಅವರು ಯಾಕೆ ಭಾಗವಹಿಸುತ್ತಿಲ್ಲ?" ಎಂದು ನಿಷ್ಠುರವಾಗಿ ಕೇಳಿದ್ದೆ. ಆಗ ಅವರು ಹೇಳಿದ ಮಾತು ನನ್ನಲ್ಲಿ ಯಾಕೋ ಮುಜುಗರ ಸೃಷ್ಟಿಸಿತ್ತು, ಯಾಕೋ ನನಗೆ ನನ್ನ ಕುರಿತಂತೆಯೇ ನಾಚಿಕೆಯಾಯಿತು. "ಸಾರಾ ಅಬೂಬಕ್ಕರ್ ಫೋನ್ ಮಾಡಿದ್ದರು "'ಈಗ ಅಕಾಡೆಮಿಯ ಜಾಬ್‌ವರ್ಕ್ ನನ್ನ ಮಗನಿಗೆ ಕೊಡುತ್ತಿಲ್ಲ ಯಾಕೆ? ಮಗ ಸಮಾರಂಭಕ್ಕೆ ಹೋಗ್ಬೇಡಾ ಎಂದು ಹೇಳಿದ್ದಾನೆ' ಎಂದು ಫೋನಲ್ಲಿ ಹೇಳಿದ್ದಾರೆ ಎಂದರು". ಅಕಾಡೆಮಿಯವರ ಈ ಉತ್ತರ ನನಗೆ ನಂಬುವುದಕ್ಕೆ ಕಷ್ಟವಾಯಿತು. ಆದರೆ 'ಲಂಕೇಶ್'ನಲ್ಲಿ ಸ್ವತಃ ಅವರೇ ಇದನ್ನು ಬರೆದಾಗ ನಾನು ನಂಬಲೇಬೇಕಾಯಿತು. ಅಕಾಡೆಮಿಯವರು ಇದಕ್ಕೆ ತಮ್ಮದೇ ಆದ ಸ್ಪಷ್ಟೀಕರಣವನ್ನೂ ನೀಡುತ್ತಾರೆ. "ಅಕಾಡೆಮಿ ಆಗುವ ಮೊದಲು ನಾವು ಸಾರಾ ಅಬೂಬಕ್ಕರ್ ಅವರ ಮಗನಿಗೇ ಎಲ್ಲ ಜಾಬ್‌ವರ್ಕ್‌ಗಳನ್ನು ನೀಡುತ್ತಿದ್ದೆವು. ಆದರೆ ಅಕಾಡೆಮಿ ಆದ ಮೇಲೆ ನಮಗೆ ಇಚ್ಛಿಸಿದ ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವುದೇ ಜಾಬ್‌ವರ್ಕ್‌ಗಳನ್ನು ಕೊಟೇಶನ್ ಕರೆದು ಆ ಮೂಲಕವೇ ಕೊಡಬೇಕಾಗುತ್ತದೆ. ಹಾಗೂ ಪುಸ್ತಕಗಳನ್ನು ಅತ್ಯಂತ ಸುಂದರವಾಗಿ ಮುದ್ರಿಸುವ ಜವಾಬ್ದಾರಿಯೂ ಅಕಾಡೆಮಿಯ ಮೇಲಿರುತ್ತದೆ. ಈಗ ಆಕೃತಿ ಪ್ರಕಾಶನದ ನಾಗೇಶ್ ಕಲ್ಲೂರು ಎಂಬವರಿಗೆ ನೀಡುತ್ತಿದ್ದೇವೆ. ಈವರೆಗೆ ಬಂದ ಎಲ್ಲ ಕೃತಿಗಳನ್ನು ನಮ್ಮ ಅಕಾಡೆಮಿಗೆ ತಕ್ಕುದಾಗಿ ಸುಂದರವಾಗಿ ಮುದ್ರಿಸಿ ಕೊಟ್ಟಿದ್ದಾರೆ. ಇದರಲ್ಲಿ ಬ್ಯಾರಿ ಅಕಾಡೆಮಿ ಎನ್ನುವ ಕಾರಣಕ್ಕಾಗಿ ತನ್ನ ಮಗನಿಗೇ ಕೊಡಬೇಕು, ಮುಸ್ಲಿಮೇತರನಿಗೆ ಕೊಡಬಾರದು ಎನ್ನುವ ಸಾರಾ ಅಬೂಬಕರ್ ಮಾತು ಎಷ್ಟರಮಟ್ಟಿಗೆ ಸರಿ" ಎಂದು ಅಕಾಡೆಮಿಯ ಸದಸ್ಯರು ಕೇಳುತ್ತಾರೆ.

ಬ್ಯಾರಿ ಅಕಾಡೆಮಿ ಸುಮಾರು ೨೦ ಪುಸ್ತಕಗಳನ್ನು ಈ ಮೂರು ವರ್ಷಗಳ ಅವಧಿಯಲ್ಲಿ ಹೊರತಂದಿದೆ. ಮುದ್ರಣ ಮತ್ತು ಮುಖಪುಟಗಳು ಅತ್ಯದ್ಭುತವಾಗಿ ಮೂಡಿಬಂದಿವೆ. ನಾಗೇಶ್ ಪ್ರತಿಭಾವಂತ, ಸೃಜನಶೀಲ ತರುಣ. ಅವನ ಪ್ರಾಮಾಣಿಕತೆಯ ಬಗ್ಗೆ ಯಾವ ಆಧಾರವೂ ಇಲ್ಲದೆ ಸಾರಾ ಅಬೂಬಕರ್ ಸಂಶಯಿಸಿದ್ದು ನನಗೆ ನೋವು ತಂದಿದೆ.

* * * *

ಇಷ್ಟೆಲ್ಲ ಹೇಳಿದ ಬಳಿಕವೂ 'ಬ್ಯಾರಿ' ಸಿನಿಮಾ 'ಚಂದ್ರಗಿರಿ ತೀರದಲ್ಲಿ' ಕಾದಂಬರಿಯನ್ನು ಕದ್ದದ್ದು ಎನ್ನುವುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ. ಇದರಲ್ಲಿ ಸಾರಾ ಅಬೂಬಕ್ಕರ್‌ಗೆ ಅನ್ಯಾಯವಾಗಿರುವುದು ನೂರಕ್ಕೆ ನೂರರಷ್ಟು ನಿಜ. ಆದರೆ ಅದರಿಂದ ಒಂದು ಸಮುದಾಯ ಪಡೆದ ಲಾಭಕ್ಕೆ ಹೋಲಿಸಿದರೆ ಸಾರಾ ಅಬೂಬಕ್ಕರ್‌ಗೆ ಆದ ಅನ್ಯಾಯವನ್ನು ನಾನು ಸಹಿಸಿಕೊಳ್ಳಬಲ್ಲೆ. ಮತ್ತು ಇಷ್ಟು ದೊಡ್ಡ ಲಾಭವಾಗುವುದಾದರೆ ಆಗಾಗ ಇಂತಹ ಸಣ್ಣ ಪುಟ್ಟ ಅನ್ಯಾಯಗಳು ನಡೆದರೂ ಪರವಾಗಿಲ್ಲ ಅನ್ನಿಸುತ್ತದೆ ನನಗೆ. ಇದೊಂದು ರೀತಿ ಕೆರೆಯ ನೀರು ಕೆರೆಗೆ ಚೆಲ್ಲಿದಂತೆ. ಸಾರಾ, ಬೊಳುವಾರು, ಫಕೀರ್ ಮೊದಲಾದವರೆಲ್ಲ ಬರೆದದ್ದು ತಮ್ಮ ಸಮುದಾಯದ ಹೆಣ್ಣುಮಕ್ಕಳ ಕಣ್ಣೀರನ್ನು. ಆ ಕಣ್ಣೀರಿನ ಹಕ್ಕುಗಳು ಯಾರದ್ದು ಎನ್ನುವುದನ್ನು ತೀರ್ಮಾನಿಸಬೇಕಾದವರು ಸೃಜನಶೀಲ ಲೇಖಕರಾದ ನಾವುಗಳಲ್ಲ, ಆ ಸಮುದಾಯದ ಹೆಣ್ಣು ಮಕ್ಕಳೇ ಅದನ್ನು ನಿರ್ಧರಿಸಬೇಕು. ಮತ್ತು ಅತಿ ಬೇಗನೇ ನಿರ್ಧರಿಸುತ್ತಾರೆ ಕೂಡ.


• ಬಿ.ಎಂ.ಬಷೀರ್



'ದಿ ಆರ್ಟಿಸ್ಟ್' ಕಾಲಪಲ್ಲಟದ ತಳಮಳಗಳ ಸಿನಿಮಾ

ಈಚೆಗೆ ಜಗತ್ತಿನ ಕ್ಲಾಸಿಕ್ ಸಿನಿಮಾಗಳನ್ನು ನೋಡುವ ಹುಚ್ಚಿಗೆ ಬಿದ್ದ ನನಗೆ 'ದಿ ಆರ್ಟಿಸ್ಟ್' ಮತ್ತೆ ಮತ್ತೆ ಕಾಡಿತು. ಕಿವಿಗಡಚಿಕ್ಕುವ ಸದ್ದು, ಕಣ್ಣು ಕೋರೈಸುವ ಬಣ್ಣ, ಅಸಾಧ್ಯ ಸಾಹಸಗಳನ್ನು ಅತಿಮಾನುಷವಾಗಿಸಿ ಅಚ್ಚರಿ ಮೂಡಿಸುವ ತಂತ್ರಜ್ಞಾನ, ಘನ ಗಾಂಭೀರ್ಯ ಕಲಾಕೃತಿಯ ಗತ್ತು ಇವುಗಳನ್ನೆಲ್ಲಾ ನಿರಾಕರಿಸಿದ ಸಾದಾ ಸೀದಾ ಸಿನಿಮಾ ಇದು. ಇಂತಹ ಗದ್ದಲದ ಕಾಲದಲ್ಲಿಯೂ ಮೌನದ ಘನತೆಯನ್ನು ಹೆಚ್ಚಿಸುವ ಕಾರಣಕ್ಕೆ ಈ ಸಿನಿಮಾ ಜಗತ್ತಿನಾದ್ಯಂತ ಜನರನ್ನು ಕಾಡುತ್ತಿದೆ.


ಜಗತ್ತಿನ ಸಿನಿಮಾ ಮಾಧ್ಯಮದಲ್ಲಿ ಅಮೆರಿಕಾ ತನ್ನ ಯಜಮಾನಿಕೆಯನ್ನು ಹೇರುತ್ತಲೇ ಬಂದಿದೆ. ಆಸ್ಕರ್ ಅವಾರ್ಡಿನಲ್ಲಿಯೂ ಮೊದಲ ಸ್ಥಾನವನ್ನು ಕಾಯ್ದುಕೊಂಡಿದೆ. ಈ ಬಾರಿ ಜಗತ್ತಿಗೆ ಶ್ರೇಷ್ಠ ಸಿನಿಮಾಗಳನ್ನು ನೀಡುವ ಅಮೆರಿಕಾದ ಅಹಂಅನ್ನು ಫ್ರೆಂಚ್ ಸಿನಿಮಾ ಸ್ವಲ್ಪಮಟ್ಟಿಗೆ ತಗ್ಗಿಸಿದೆಯೆಂದೇ ಹೇಳಬೇಕು. ಮೈಖೆಲ್ ಹಝನಾವಿಸಿ ನಿರ್ದೇಶನದ 'ದಿ ಆರ್ಟಿಸ್ಟ್' ಅಮೆರಿಕಾದ ಸಿನಿಮಾಗಳನ್ನು ಹಿಮ್ಮೆಟ್ಟಿಸಿ ಐದು ಆಸ್ಕರ್ ಅವಾರ್ಡುಗಳನ್ನು ಪಡೆದಿದೆ.



ಇದೊಂದು ಸರಳ ಕಥೆಯ ಸಿನಿಮಾ. 1920-30ರ ದಶಕದ ಮೂಕಿ ಚಿತ್ರಗಳ ಕಾಲಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಮೂಕಿ ಸಿನಿಮಾ ಜಗತ್ತು ಟಾಕಿ ಜಾಯಮಾನಕ್ಕೆ ಹೊರಳಿಕೊಳ್ಳುವಾಗ ಇದ್ದ ಕಾಲಪಲ್ಲಟದ ಸೂಕ್ಷ್ಮಗಳನ್ನು ಇದು ಹಿಡಿದಿದೆ. ಸಿನಿಮಾ ತಂತ್ರಜ್ಞಾನ ಉನ್ನತವಾಗಿರುವ ಈ ಕಾಲದಲ್ಲಿ, ಹಳೆ ಕಾಲದ ತಂತ್ರಜ್ಞಾನ ಬಳಸಿಯೂ ಸಿನಿಮಾ ಗೆಲ್ಲಿಸುವ ಶಕ್ತಿ ಶ್ರೇಷ್ಠ ಕಲಾಕೃತಿಯೊಂದಕ್ಕೆ ಇರುತ್ತದೆ ಎನ್ನುವ ಸತ್ಯವನ್ನು ಈ ಸಿನಿಮಾ ತೋರಿಸಿದೆ. ಆ ಮೂಲಕ ಅತ್ಯಾಧುನಿಕ ತಂತ್ರಜ್ಞಾನವೇ ಸಿನಿಮಾದ ಶಕ್ತಿ ಎನ್ನುವ ನಂಬಿಕೆಯನ್ನು ಹುಸಿಗೊಳಿಸಿದೆ. ಯಂತ್ರಜಗತ್ತಿನ ಅಬ್ಬರವನ್ನು ಮೌನವಾಗಿಯೇ ಈ ಸಿನಿಮಾ ಅಲ್ಲಗಳೆದಿದೆ.

ಜಾರ್ಜ್ ವ್ಯಾಲಂಟಿನ್ ಮೂಕಿ ಚಿತ್ರದ ಜನಪ್ರಿಯ ನಾಯಕ. ಜನಪ್ರಿಯತೆಯ ಉತ್ತುಂಗದಲ್ಲಿ ಹೆಚ್ಚುಕಾಲ ನಿಲ್ಲಲಾಗುವುದಿಲ್ಲ ಎನ್ನುವ ಮಾತಿದೆ. ಆ ಮಾತು ವ್ಯಾಲಂಟಿನ್ ಜೀವನದಲ್ಲೂ ಸಂಭವಿಸುತ್ತದೆ. ಜಾರ್ಜ್ ಹೋದಲ್ಲೆಲ್ಲ ಪತ್ರಕರ್ತರು, ಫೋಟೋಗ್ರಾಫರುಗಳು ಮುತ್ತಿಗೆ ಹಾಕುತ್ತಾರೆ. ಹುಡುಗಿಯರು ಆತನ ನಗುವಿಗಾಗಿ ತಹತಹಿಸುತ್ತಾರೆ. ಒಮ್ಮೆ ಪೆಪ್ಪಿ ಮಿಲ್ಲರ್ ಎನ್ನುವ ಹುಡುಗಿ ಆಕಸ್ಮಿಕವಾಗಿ ವ್ಯಾಲಂಟಿನ್‌ಗೆ ಮುತ್ತಿಡುವ ಪ್ರಸಂಗವೊಂದು ಬರುತ್ತದೆ. ಪತ್ರಿಕೆಗಳಲ್ಲಿ ಈ ಚುಂಬಕ ಚಿತ್ರ ಮಿಂಚುತ್ತದೆ. ಇದೇ ಚಿತ್ರ ವ್ಯಾಲಂಟಿನ್‌ನ ಸಾಂಸಾರಿಕ ಜೀವನದಲ್ಲೂ ಒಡಕು ತರುತ್ತದೆ. ಇದನ್ನೇ ಬಳಸಿಕೊಂಡು ಸಿನಿಮಾದಲ್ಲಿ ಸಹ ನರ್ತಕಿಯ ಪಾತ್ರವನ್ನು ಮಿಲ್ಲರ್ ಗಿಟ್ಟಿಸಿಕೊಳ್ಳುತ್ತಾಳೆ.

ಈ ನಡುವೆ ಚಿತ್ರದಲ್ಲಿ ಮಾತನ್ನೂ ಸೇರಿಸುವ ಶೋಧದಿಂದಾಗಿ ಮೂಕಿ ಸಿನಿಮಾದಿಂದ ಟಾಕಿ ಸಿನಿಮಾಕ್ಕೆ ಸಿನಿಜಗತ್ತು ಮಗ್ಗಲು ಬದಲಿಸುತ್ತದೆ. ಸಿನಿಮಾ ನಿರ್ಮಾಣ ಸಂಸ್ಥೆ ಮೂಕಿ ಚಿತ್ರಗಳನ್ನು ನಿಲ್ಲಿಸಿ ಟಾಕಿ ಸಿನಿಮಾ ನಿರ್ಮಿಸಲು ಮುಂದಾಗುತ್ತದೆ. ಆನಂತರ ವ್ಯಾಲಂಟಿನ್ ಜೀವನದಲ್ಲೂ ಕೂಡ ಮೌನ ಆವರಿಸುತ್ತದೆ. ಹೊಸ ಛಾಯಮಾನದ ಹುಡುಗಿ ಪೆಪ್ಪಿ



ಮಿಲ್ಲರ್ ಟಾಕಿ ಸಿನಿಮಾದಲ್ಲಿ ಜನಪ್ರಿಯ ತಾರೆಯಾಗುತ್ತಾಳೆ. ಹೊಸ ಬದಲಾವಣೆಗೆ ಹೊಂದಿಕೊಳ್ಳದ ನಾಯಕ ದಿನದಿನಕ್ಕೂ ಅಂತರ್ಮುಖಿಯಾಗುತ್ತಾನೆ.

ಪೆಪ್ಪಿ ಮಿಲ್ಲರ್‌ಗೆ ವ್ಯಾಲಂಟಿನ್ ಬಗೆಗಿನ ಮೋಹ ಗಟ್ಟಿಯಾಗತೊಡಗುತ್ತದೆ. ಇದನ್ನು ವ್ಯಕ್ತಪಡಿಸುವ ಸಂದರ್ಭಗಳಲ್ಲಿ ವ್ಯಾಲಂಟಿನ್ ಅವಳ ಮಾತಿಗೆ ಕಿವುಡಾಗುತ್ತಾನೆ. ಮಿಲ್ಲರ್ ಸಂದರ್ಶನವೊಂದರಲ್ಲಿ ಹೊಸ ನೀರು ಬಂದರೆ ಹಳೆನೀರು ಕೊಚ್ಚಿ ಹೋಗುತ್ತೆ ಅಂತೆಲ್ಲಾ ಹೇಳುತ್ತಾಳೆ. ಇದರಿಂದ ಅವಳ ಬಗೆ ತಿರಸ್ಕಾರದ ಭಾವ ಬೆಳೆಯುತ್ತದೆ. ನಿರುದ್ಯೋಗಿಯಾಗಿ ತನ್ನೆಲ್ಲಾ ವಸ್ತುಗಳನ್ನು ಹರಾಜಿನಲ್ಲಿ ಮಾರಾಟ ಮಾಡುವ ಜನಪ್ರಿಯ ನಟನೊಬ್ಬ ದುಸ್ಥಿತಿಗೆ ತಲುಪುತ್ತಾನೆ.

ಹತಾಶನಾದ ನಾಯಕ ತನ್ನ ಸಿನಿಮಾದ ರೀಲುಗಳನ್ನು ಸುಡುವಾಗ, ಮಿಲ್ಲರ್‌ನ ಮೋಹಕ್ಕೆ ಬಿದ್ದ ತುಣುಕೊಂದಿರುವ ಸಿನಿಮಾದ ರೀಲನ್ನು ಅಪ್ಪಿಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿ ಬದುಕುಳಿಯುತ್ತಾನೆ. ಇದನ್ನು ನೋಡಿದ ಪೆಪ್ಪಿಯಲ್ಲಿ ಮಡುಗಟ್ಟಿದ್ದ ಪ್ರೀತಿ ಕಾರಂಜಿಯಂತೆ ಚಿಮ್ಮುತ್ತದೆ. ತನ್ನ ಮನೆಯಲ್ಲಿಟ್ಟುಕೊಂಡು ಆರೈಕೆ ಮಾಡುತ್ತಾಳೆ. ಈ ನಡುವೆ ತಾನು ಮಾರಿದ ವಸ್ತುಗಳೆಲ್ಲಾ ಅವಳು ಕಾಪಿಟ್ಟಿದ್ದನ್ನು ಕಂಡು ವಿಚಲಿತನಾಗುತ್ತಾನೆ. ತನ್ನ ಬಗೆಗೇ ಜಿಗುಪ್ಸೆ ಬಂದಂತಾಗಿ ಕೊನೆಗೆ ಆತ್ಮಹತ್ಯೆಗೆ ಪ್ರಯತ್ನಿಸುತ್ತಾನೆ. ಆಗಲೂ ಮಿಲ್ಲರ್ ಕಾಪಾಡುತ್ತಾಳೆ. ಮತ್ತೆ ತನ್ನದೇ ಟಾಕಿ ಸಿನಿಮಾದಲ್ಲಿ ನಟಿಸಲು ನಿರ್ಮಾಪಕರ ಮನವೊಲಿಸಿ ಅವಕಾಶ ಕೊಡಿಸುತ್ತಾಳೆ. ಕೊನೆಗೆ ನೃತ್ಯವೊಂದಕ್ಕೆ ಅದ್ಭುತವಾದ ಹೆಜ್ಜೆ ಹಾಕಿ ನಿರ್ಮಾಪಕರಿಂದ ಮೆಚ್ಚುಗೆ ಮಾತನ್ನು ಕೇಳುವ ಮೂಲಕ ಸಿನಿಮಾ ಅಂತ್ಯವಾಗುತ್ತದೆ. ಮೂಕ ಸಿನಿಮಾ ಮಾತಾಡತೊಡಗುತ್ತದೆ.

ಕಾಲವೊಂದು ಬದಲಾದಾಗ, ಹೊಸದರ ಸ್ವೀಕಾರ ಮತ್ತು ನಿರಾಕಾರವನ್ನು ಎರಡು ತಲೆಮಾರುಗಳು ಭಿನ್ನವಾಗಿ ಸ್ವೀಕರಿಸುತ್ತವೆ. ಹಳೆತಲೆಮಾರು ಹೊಸತನ್ನು ನಿರಾಕರಿಸಿದರೆ, ಹೊಸ ತಲೆಮಾರು ಸ್ವೀಕರಿಸಿ ಅನುಭವಿಸಲು ಉತ್ಸುಕವಾಗಿರುತ್ತದೆ. ಹಾಗಾಗಿ ಈ ಸಿನಿಮಾ ಎರಡು ತಲೆಮಾರುಗಳ ನಡುವಿನ ಸಂಘರ್ಷವನ್ನೂ, ಮಾತು ಮೌನದ ನಡುವಣ ತಾಕಲಾಟವನ್ನೂ, ಕಪ್ಪು ಬಿಳುಪಿನ ಮಧ್ಯೆಯೇ ಬಣ್ಣದ ಬದುಕಿನ ತಳಕುಬಳಕನ್ನೂ, ಆಧುನಿಕತೆ ದಿಢೀರನೆ ತಂದೊಡ್ಡುವ ಅನಾಥ ಪ್ರಜ್ಞೆಯನ್ನು ತೀರಾ ಹೊಸದಾಗಿ ನಿರೂಪಿಸಲಾಗಿದೆ.

ಇಡೀ ಸಿನಿಮಾದಲ್ಲಿ ನವಿರಾದ ಪ್ರೀತಿಯ ಎಳೆಯನ್ನು ಮುಕ್ಕಾಗದಂತೆ ಜೋಡಿಸಲಾಗಿದೆ. ಮನುಷ್ಯನ ಬದುಕಿನ ಏರಿಳಿತಗಳನ್ನು ಸಮಾನವಾಗಿ ಸ್ವೀಕರಿಸುವ ನಾಯಿ ಮನುಷ್ಯನ ಒಳಗಿಳಿಯುತ್ತದೆ. ಜಾರ್ಜ್ ವ್ಯಾಲೆಂಟಿನ್‌ನ ಪಾತ್ರದಲ್ಲಿ ಜೀನ್ ದುಜಾರ್ಡಿನ್‌ನ ಅದ್ಭುತ ಅಭಿನಯ ನಮ್ಮನ್ನು 1920ರ ಕಾಲಘಟ್ಟಕ್ಕೆ ಕರೆದೊಯ್ಯುವ ಶಕ್ತಿಯನ್ನು ಹೊಂದಿದೆ. ನಿರ್ದೇಶಕ ಮೈಕೆಲ್ ಹಝನಾವಿಸಿಯಸ್ ಪ್ರತಿಭೆ ಸಿನಿಮಾದ ಇಂಚಿಂಚಿನಲ್ಲೂ ಕಾಣುತ್ತದೆ. ಇಲ್ಲಿ ಸಂಗೀತವೂ ಒಂದು ಪಾತ್ರದಂತೆ ಆವರಿಸಿ ನೋಡುಗರನ್ನು ಸಿನಿಮಾದ ಒಳ ಸೆಳೆದುಕೊಳ್ಳುತ್ತದೆ. ನಾವು ಬದುಕುತ್ತಿರುವ ಗದ್ದಲದ ಜಗತ್ತಿನ ಒಳಗೇ ಒಂದು [illegible] ಧ್ಯಾನದಂತೆ, 'ದಿ ಆರ್ಟಿಸ್ಟ್' ನನ್ನೊಳಗನ್ನು ಕಾಡುತ್ತದೆ

• ಅರುಣ್ ಜೋಳದಕೂಡ್ಲಿಗಿ

ಅಜಿತು ಮದುವೆ



ನಮ್ಮ ಹಿರಿ ಮಗಳು ಗೌರಿ ಪತ್ರಕರ್ತೆಯಾಗಿ ನೆಲೆಕಂಡು ಕೊಂಡಿದ್ದಳು. ಹಾಗೆಯೇ ಕಿರಿ ಮಗಳು ಕವಿತಾ ಜಾಹೀರಾತು ಏಜನ್ಸಿ ತೆರೆದು ಕೈತುಂಬ ದುಡಿಯುತ್ತಿದ್ದಳು. ಜೊತೆಗೆ ಕೆಲವು ಕಾರ್ಪೊರೇಟ್ ಸಿನಿಮಾಗಳನ್ನು ಅನಂತರ ಹಲವಾರು ಸಾಕ್ಷ್ಯ ಚಿತ್ರಗಳನ್ನೂ ಮಾಡಿದ ಕವಿತಾ ಎಲ್ಲರಿಂದಲೂ ಸೈ ಎನಿಸಿಕೊಂಡಳು.

ಈ ಮಧ್ಯೆ ಮಗ ಇಂದ್ರಜಿತ್‌ನನ್ನು ಲಂಕೇಶರು ತಮ್ಮ ಆಫೀಸಿಗೆ ಕರೆದುಕೊಂಡು ಹೋಗಲು ಶುರು ಮಾಡಿದರು. ಆಫೀಸಿನ ಕೆಳ ಅಂತಸ್ತಿನಲ್ಲಿ ಒಂದು ಪ್ರಿಂಟಿಂಗ್ ಪ್ರೆಸ್ ಹಾಕಿಸಿದ ಲಂಕೇಶರು ಅದನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಅಜಿತುಗೆ ವಹಿಸಿದರು. ಅಜಿತುಗೆ ಮೊದಲಿನಿಂದಲೂ ಕ್ರೀಡೆಯಲ್ಲಿ ಅಪಾರ ಆಸಕ್ತಿ ಇದ್ದಿದ್ದರಿಂದ ಒಂದು ಸ್ಪೋರ್ಟ್ಸ್ ಪತ್ರಿಕೆಯನ್ನು ಯಾಕೆ ಮಾಡಬಾರದೆಂದು ಲಂಕೇಶರು ಯೋಚಿಸಿದರು. ಆನಂತರ 'ಆಲ್‌ರೌಂಡರ್' ಎಂಬ ಕ್ರೀಡಾ ಪತ್ರಿಕೆಯನ್ನು ಪ್ರಾರಂಭಿಸಿ ಅದಕ್ಕೆ ಅಜಿತುನನ್ನೇ ಸಂಪಾದಕನನ್ನಾಗಿ ಮಾಡಿದರು. ಆ ಪತ್ರಿಕೆಗೂ ಲಂಕೇಶರು ಲೇಖನಗಳನ್ನು ಬರೆಯಲಾರಂಭಿಸಿದರು.

ಅಜಿತ್‌ಗೆ ಮದುವೆಯ ವಯಸ್ಸಾಯಿತು. "ನೀನು ಯಾವಾಗ ಮದುವೆ ಮಾಡಿಕೊಳ್ಳುತ್ತೀಯ?" ಅಂತ ನಾನು ಅವನನ್ನು ಕೇಳುತ್ತಲೇ ಇದ್ದೆ. ಕೊನೆಗೊಂದು ದಿನ "ಮದುವೆ ಆಗ್ತೀನಿ, ಹುಡುಗಿಯನ್ನು ಹುಡುಕು. ಆದರೆ ನಾನು ಹುಡುಗಿಗಿಡಗ ನೋಡಲು ನಿನ್ನ ಜೊತೆ ಬರುವುದಿಲ್ಲ, ನೀನೇ ನೋಡಿ ಮೂರು ಅಥವಾ ನಾಲ್ಕು ಹುಡುಗಿಯರನ್ನು ಸೆಲೆಕ್ಟ್ ಮಾಡು. ನಾನು ಅವರಲ್ಲಿ ಒಬ್ಬಳನ್ನು ಆರಿಸುತ್ತೇನೆ" ಎಂದು ಅಜಿತ್ ತನ್ನ ಒಪ್ಪಿಗೆ ಕೊಟ್ಟ. ಅವನು "ಹೂ" ಅಂದಿದ್ದೇ ತಡ ನಾನು ನನ್ನ ಅಂಗಡಿಯ ಜವಾಬ್ದಾರಿಯನ್ನು ಶಾಂತಾಳಿಗೆ ವಹಿಸಿ ನನ್ನ ಮಗನಿಗೆ ಹುಡುಗಿ ಹುಡುಕುವ ಕೆಲಸ ಶುರು ಮಾಡಿದೆ.



ಹುಡುಗಿ ನಮ್ಮ ಜಾತಿಯವಳೇ ಆಗಿರಬೇಕು ಎಂಬ ಅನ್ನಿಸಿಕೆ ನನ್ನದಾಗಿರಲಿಲ್ಲ, ಆದರೆ ಹೀಗೆ ಅರೇಂಜ್ಡ್ ಮದುವೆಗೆ ಹುಡುಗಿಯನ್ನು ನೋಡುವಾಗ ಅದ್ಯಾಕೋ ನಮ್ಮ ಜಾತಿಯವರ ಮನೆಗಳೇ ಸಿಗುತ್ತವೆ.

ಲಂಕೇಶರು ಇದ್ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದೆ ಸುಮ್ಮನಿದ್ದರು. ಎಲ್ಲಾ ಜವಾಬ್ದಾರಿಯನ್ನು ನನಗೇ ಬಿಟ್ಟರು.

ಮದುವೆಗೆ ಗಂಡುಗಳು ಸಿಗುವುದು ಕಷ್ಟ ಎಂದು ಕೆಲವರು ಹೇಳುತ್ತಾರೆ. ಆದರೆ ನನ್ನ ಪ್ರಕಾರ ಹುಡುಗಿಯನ್ನು ಹುಡುಕುವುದು ಅದಕ್ಕಿಂತ ಕಷ್ಟಕರವಾದ ಮತ್ತು ಮುಜುಗರ ಮೂಡಿಸುವ ಕೆಲಸ. ಹುಡುಗಿಯ ಮನೆಗೆ ಹೋಗಿ, ತಿಂಡಿ ತಿಂದು, ಕಾಫಿ ಕುಡಿದು ಆನಂತರ ಹುಡುಗಿ ಬೇಡ ಎಂದು ಹೇಳುವುದು ನನಗೆ ತುಂಬಾ ಸಂಕಟ ತರುತ್ತಿತ್ತು. ಹುಡುಗಿಯರ ಮನೆಗೆ ಹೋಗುವುದಕ್ಕಿಂತ ಅವರನ್ನು ಎಲ್ಲಿಯಾದರೂ ಆಚೆ ನೋಡಿದರೆ ಅವರಿಗೂ, ನನಗೂ ಅಷ್ಟು ಹಿಂಸೆ ಅಥವಾ ಮುಜುಗರ ಆಗುವುದಿಲ್ಲ ಎಂದುಕೊಳ್ಳುತ್ತಿದ್ದೆ. ಆದರೆ ಜನರು ತಮ್ಮ ಮನೆಗೆ ಕರೆಯುತ್ತಿದ್ದರಿಂದ ವಿಧಿ ಇಲ್ಲದೆ ಹೋಗುತ್ತಿದ್ದೆ.

ಮಗನಿಗೆ ಒಂದು ಹೆಣ್ಣು ಬೇಕು ಎಂದು ನನ್ನ ಕೆಲವು ಸ್ನೇಹಿತೆಯರಿಗೆ ಹೇಳಿದ್ದರಿಂದ ಅವರೂ ಬಹಳಷ್ಟು ಹುಡುಗಿಯರ ಫೋಟೋ ಮತ್ತು ಬಯೊಡೇಟಾಗಳನ್ನು ತಂದುಕೊಟ್ಟರು. ಅವುಗಳಲ್ಲಿ ಕೆಲವು ಹೆಣ್ಣುಮಕ್ಕಳು ಬೇರೆ ಜಾತಿಯವರೂ ಇದ್ದರು. ಆದರೆ ಅವರ್‍ಯಾರೂ ನನ್ನ ಮಗನಿಗೆ ಸೂಕ್ತವಾಗಿ ಕಾಣಿಸಲಿಲ್ಲ. ಒಮ್ಮೆ ಒರ್ವ ಹಿರಿಯ ಲಿಂಗಾಯತ ಪೊಲೀಸ್ ಆಫೀಸರ್ ಅವರ ಮಗಳ ಬಗ್ಗೆ ಮಾಹಿತಿ ಸಿಕ್ಕಿತು. ಹುಡುಗಿ ಚೆನ್ನಾಗಿದ್ದಾಳೆ, ಎಲ್ಲ ರೀತಿಯಲ್ಲೂ ಅಜಿತುಗೆ ಸೂಟ್ ಆಗುತ್ತಾಳೆ ಅನ್ನಿಸಿತು. ಆದರೆ ಸ್ವಲ್ಪ ವಿಚಾರಿಸಿದಾಗ ಆಕೆಯ ತಂದೆ ತುಂಬಾ ಭ್ರಷ್ಟ ಎಂದು ಗೊತ್ತಾಯಿತು. ಅಷ್ಟೇ ಅಲ್ಲ, ಆ ಐಪಿಎಸ್ ಆಫೀಸರ್ ವಿರುದ್ಧ ಲಂಕೇಶ್ ಪತ್ರಿಕೆಯಲ್ಲೇ ವರದಿಗಳು ಪ್ರಕಟವಾಗಿದ್ದವು. ಆ ಹುಡುಗಿಯ ಬಗ್ಗೆ ಲಂಕೇಶರಿಗೆ ಹೇಳಿದಾಗ ಅವರು "ಬೇಡವೇ ಬೇಡ" ಎಂದಿದ್ದರಿಂದ ಸುಮ್ಮನಾದೆ.

ಕೊನೆಗೆ ಪರಿಚಿತರೊಬ್ಬರಿಂದ ತುಮಕೂರಿನ ಒಂದು ಹುಡುಗಿಯ ಫೋಟೋ ಬಂತು: ನಾನು ಆಕೆಯನ್ನು ನೋಡಲು ಹೋದೆ. ಆಕೆ ಚೆನ್ನಾಗಿದ್ದಳು. ಆಕೆಯನ್ನು ನನ್ನ ಹೆಣ್ಣುಮಕ್ಕಳ ಜೊತೆ ನಿಲ್ಲಿಸಿದರೆ ಆಕೆ ಅವರಿಬ್ಬರ ತಂಗಿ ಇರಬಹುದು ಎನ್ನುವಂತಿದ್ದಳು. ಆಕೆ ಆಗ ಸೆಕೆಂಡ್ ಇಯರ್ ಪಿಯುಸಿ ಓದುತ್ತಿದ್ದಳು. ನಾನು "ಮದುವೆ ಆದನಂತರವೂ ಓದುತ್ತೀಯಾ?" ಎಂದು ಕೇಳಿದೆ. ಆಕೆ "ಹೂ" ಅಂದಳು.

ಅವಳ ಬಗ್ಗೆ ಅಜಿತುಗೆ ತಿಳಿಸಿ ಅವನನ್ನು ಕರೆದುಕೊಂಡು ಹೋಗಲು ರೆಡಿ ಆದೆ. ಆದರೆ ಆಗ ನನ್ನ ಮಗನಿಗೆ 27 ವರ್ಷವಾಗಿತ್ತು, ಆ ಹುಡುಗಿಗೆ ಆಗಿನ್ನು 18 ತುಂಬಿರಲಿಲ್ಲ, ಅದರಲ್ಲೂ ಅಜಿತು ಮುಂಚೆಯೇ ಹುಡುಗಿಗೆ 22 ವರ್ಷವಾದರೂ ಆಗಿರಬೇಕು ಎಂದು ಷರತ್ತು ಹಾಕಿದ್ದ. ಈ ಪೀಕಲಾಟದಿಂದ ತಪ್ಪಿಸಿಕೊಳ್ಳಲು "ಹುಡುಗಿಗೆ 19 ವರ್ಷ ತುಂಬಿ ಈಗ 20ರಲ್ಲಿ ನಡೆಯುತ್ತಿದೆ" ಎಂದು ಸುಳ್ಳು ಹೇಳಿದೆ. ಆಗ ಅಜಿತು "ಹಾಗಿದ್ದರೆ ಅವಳು ಇನ್ನೂ ಯಾಕೆ ಪಿಯುಸಿಯಲ್ಲಿ ಇದ್ದಾಳೆ?" ಎಂದ. ಅದಕ್ಕೆ ನಾನು "ಅವಳನ್ನು ತಡವಾಗಿ ಸ್ಕೂಲ್‌ಗೆ ಸೇರಿಸಿದ್ದರಂತೆ" ಎಂದು ಮತ್ತೊಂದು ಸುಳ್ಳನ್ನು ಹೇಳಿದೆ.

ಆ ಹುಡುಗಿಯ ಹೆಸರು ಅರ್ಪಿತಾ. ಅಜಿತು ಅವಳನ್ನು ನೋಡಿ ತನ್ನ ಒಪ್ಪಿಗೆ ಸೂಚಿಸಿದ.

ಇದೆಲ್ಲಾ ಆದನಂತರ ಒಂದು ದಿನ ಹುಡುಗಿಯ ಕಡೆಯವರು ನಮ್ಮ ಮನೆಗೆ ಬಂದರು. ಲಂಕೇಶರು ಅವರೊಂದಿಗೆ ಕೇವಲ 10 ನಿಮಿಷ ಮಾತಾಡಿ "ನಾನು ಆಫೀಸ್‌ಗೆ ಹೋಗಬೇಕು. ನಿಮ್ಮ ಜೊತೆ ಇಂದಿರಾ ಮಾತಾಡುತ್ತಾಳೆ" ಎಂದು ಹೇಳಿ ಹೊರಟರು. ಇಷ್ಟು ಸಲೀಸಾಗಿ ಮದುವೆಯ ಮಾತುಕತೆ ಮುಗಿಯಿತಲ್ಲ ಎಂದು ಹೆಣ್ಣಿನ ಕಡೆಯವರಿಗೆ ತುಂಬಾ ಸಂತೋಷವಾಯಿತು.

ನಿಶ್ಚಿತಾರ್ಥ ತುಮಕೂರಿನಲ್ಲಿ ನಡೆಯಿತು. ಲಂಕೇಶರು ತಮ್ಮ ಸೊಸೆ ಆಗಲಿರುವ ಅರ್ಪಿತಾಳನ್ನು ಅವತ್ತೇ ಮೊದಲನೆ ಬಾರಿಗೆ ನೋಡಿದ್ದು. ಆಕೆಯೊಂದಿಗೆ ಲಂಕೇಶರು ಮಾತನಾಡಿದರು. ಅರ್ಪಿತಾ ನಾಚಿಕೆ ಮತ್ತು ಭಯದಿಂದ ತತ್ತರಿಸಿಹೋಗಿದ್ದಳು.

ಅರ್ಪಿತಾಳಿಗೆ ಆಗಸ್ಟ್ 21ಕ್ಕೆ 18 ವರ್ಷ ತುಂಬಿತು. ಅದರ ಮಾರನೆ ದಿನ ಆಗಸ್ಟ್ 22ಕ್ಕೆ ಅಜಿತು ಮತ್ತು ಅರ್ಪಿತಾಳ ಮದುವೆ ತುಮಕೂರಿನಲ್ಲಿ ನಡೆಯಿತು. ಲಂಕೇಶರು ತಮ್ಮ ಕೆಲವು ಸ್ನೇಹಿತರೊಂದಿಗೆ ಮದುವೆಗೆ ಬಂದಿದ್ದರು. ಅಷ್ಟೇ ಅಲ್ಲ, "ನೋಡ್ರಿ, ಲಿಂಗಾಯತರ ಹುಡುಗಿ, ಅದರಲ್ಲೂ ಒಂದೇ ಉಪಜಾತಿಯ ಹುಡುಗಿಯನ್ನೇ ನನ್ನ ಹೆಂಡತಿ ತನ್ನ ಸೊಸೆಯಾಗಿ ಆಯ್ಕೆ ಮಾಡಿದ್ದಾಳೆ" ಎಂದು ತಮ್ಮ ಸ್ನೇಹಿತರ ಮುಂದೆ ತಮಾಷೆ ಮಾಡಿದರು. ನನಗೆ ಖಂಡಿತ ನಮ್ಮಲ್ಲೇ ಮಾಡಿಕೊಳ್ಳಬೇಕು ಅಂತ ಹಠವೇನು ಇರಲಿಲ್ಲ, ಹಾಗೇ ಆಯಿತು ಅಷ್ಟೇ.

****

ಅರ್ಪಿತಾ ಜಾಣೆ ಆಗಿದ್ದರಿಂದ ಪಿಯುಸಿ ಸೆಕೆಂಡ್ ಇಯರ್ ಪರೀಕ್ಷೆಗಳಲ್ಲಿ ಚೆನ್ನಾಗಿ ಮಾರ್ಕ್ಸ್ ಪಡೆದಿದ್ದಳು. ಆಕೆ ಬಿಇ ಮಾಡಬೇಕೆಂಬ ಆಸೆ ವ್ಯಕ್ತಪಡಿಸಿದಳು. ಆಗ ಲಂಕೇಶರು "ಬಿಇ ಯಾಕೆ? ಬಿಎ ಮಾಡು" ಎಂದರು. ಆಗ ನಾನು "ಅವಳಿಗೆ ಏನು ಇಷ್ಟಾನೋ ಅದೇ ಮಾಡಲಿ" ಎಂದೆ. ಅರ್ಪಿತಾ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟು ಪಡೆದಳು.

****


ಲಂಕೇಶರ ಒಂದು ಕಣ್ಣಲ್ಲಿ ಸಣ್ಣದಾಗಿ ಸಮಸ್ಯೆ ಕಾಣಿಸಿಕೊಂಡಿತು. ಆದರೆ ಅದು ಡಯಾಬಿಟೀಸ್‌ನಿಂದಾಗಿರುವ ಸಮಸ್ಯೆ ಎಂದು ಆರಂಭದಲ್ಲಿ ಲಂಕೇಶರಿಗೆ ಗೊತ್ತಾಗಲಿಲ್ಲ, ಬದಲಾಗಿ ಕಣ್ಣಿನ ಪವರ್ ಹೆಚ್ಚುಕಡಿಮೆ ಆಗಿರಬೇಕೆಂದು ಭಾವಿಸಿದ ಅವರು ಸುಮ್ಮನಿದ್ದರು. ಅಷ್ಟೇ ಅಲ್ಲ, ಕಣ್ಣಿನಲ್ಲಿ ಸಮಸ್ಯೆ ಆಗಿದೆ ಎಂದು ಅವರು ಯಾರಿಗೂ ಹೇಳಲಿಲ್ಲವಾದ್ದರಿಂದ ಅದರ ಬಗ್ಗೆ ಮನೆಯಲ್ಲಿದ್ದ ಯಾರಿಗೂ ಗೊತ್ತಾಗಲಿಲ್ಲ.

ಕಣ್ಣಿನ ಚಿಕಿತ್ಸೆಗೆಂದು ಲಂಕೇಶರು ಬೆಂಗಳೂರಿನ ಪ್ರಭಾ ಐ ಕ್ಲಿನಿಕ್‌ಗೆ ಹೋದಾಗಲೇ ಅವರ ಕಣ್ಣುಗುಡ್ಡೆಯಿಂದ ರೆಟಿನ ಕಳಚಿಕೊಂಡಿದೆಯೆಂದೂ, ಅದಕ್ಕೆ ಸೂಕ್ತ ಚಿಕಿತ್ಸೆ ಬೇಕೆಂದರೆ ಮದ್ರಾಸ್‌ನಲ್ಲಿರುವ ಶಂಕರ್ ನೇತ್ರಾಲಯಕ್ಕೆ ಹೋಗಬೇಕೆಂದೂ ಎಲ್ಲರಿಗೆ ಗೊತ್ತಾಗಿದ್ದು.

ಶಂಕರ್ ನೇತ್ರಾಲಯಲದಲ್ಲಿ ಕಣ್ಣನ್ನು ಪರೀಕ್ಷೆ ಮಾಡಿಸಿಕೊಳ್ಳಲು ಲಂಕೇಶರು ಹೊರಟರು. ಆಗ ಅವರು ಎಂದಿನಂತೆ ಮನೆಯ ಯಾರಾದರೂ ಒಬ್ಬರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುವ ಬದಲಾಗಿ ತಮ್ಮ ಸಹಾಯಕ ಗಿರಿಯನ್ನು ಮತ್ತು ಮದ್ರಾಸ್ ನಗರದ ಪರಿಚಯವಿದ್ದ ಮಿತ್ರರೊಬ್ಬರನ್ನು ತಮ್ಮ ಜೊತೆ ಕರೆದುಕೊಂಡು ಹೋದರು.

ಶಂಕರ್ ನೇತ್ರಾಲಯದ ವೈದ್ಯರು ಲಂಕೇಶರ ಕಣ್ಣನ್ನು ಪರೀಕ್ಷೆ ಮಾಡಿ ಅವರನ್ನು ಅವತ್ತೇ ಆಸ್ಪತ್ರೆಗೆ ಸೇರಿಸಿಕೊಂಡು ಆದಷ್ಟು ಬೇಗ ಆಪರೇಶನ್ ಮಾಡಬೇಕೆಂದರು. ಆ ಸುದ್ದಿಯನ್ನು ಅವರೊಂದಿಗೆ ಹೋಗಿದ್ದ ಮಿತ್ರರು ನಮಗೆ ಫೋನ್ ಮಾಡಿ ಹೇಳಿದರು. ಅದನ್ನು ಕೇಳಿ ನಮಗೆಲ್ಲ ಶಾಕ್ ಆಯಿತು. ಆಗ ಲಂಕೇಶರೊಂದಿಗೆ ಆಸ್ಪತ್ರೆಯಲ್ಲಿರಲು ಗೌರಿ ಮದ್ರಾಸಿಗೆ ಹೋದಳು. ಆದರೆ ಆಪರೇಶನ್ ಮಾಡುವ ಮುನ್ನ ಲಂಕೇಶರ ಡಯಾಬಿಟಿಸ್ ಹಿಡಿತಕ್ಕೆ ಬರಬೇಕಿದ್ದರಿಂದ ಸ್ವಲ್ಪದಿನ ಅವರಿಗೆ ಅಲ್ಲೇ ಚಿಕಿತ್ಸೆ ನೀಡಲಾರಂಭಿಸಿದರು. ಆಗ ಬೇಬಿ ಕೂಡ ಗಂಟುಮೂಟೆ ಕಟ್ಟಿಕೊಂಡು ಮದ್ರಾಸಿಗೆ ಹೋದಳು. ಗೌರಿ ಮತ್ತು ಬೇಬಿ ಸರದಿ ಮೇಲೆ ಆಸ್ಪತ್ರೆಯಲ್ಲಿದ್ದು ಲಂಕೇಶರನ್ನು ನೋಡಿಕೊಳ್ಳಲಾರಂಭಿಸಿದರು.

ನಾನು ಮತ್ತು ಲಂಕೇಶರು ಮದುವೆಯಾದ ಆರಂಭದಲ್ಲಿ ಒಂದು ಜೊತೆ ಸ್ಟೀಲ್ ಲೋಟಗಳನ್ನು ಖರೀದಿಸಿದ್ದೆವು. ಲಂಕೇಶರು ಪ್ರತಿ ದಿನ ಆ ಲೋಟದಲ್ಲೇ ನೀರು ಮತ್ತು ಕಾಫಿ ಕುಡಿಯುತ್ತಿದ್ದದ್ದು. ನಾನು ಬೇಬಿ ಜೊತೆ ಮದ್ರಾಸಿಗೆ ಆ ಲೋಟಗಳನ್ನು ಕಳುಹಿಸಿದ್ದೆ. ಅದನ್ನು ಗಮನಿಸಿದ ಲಂಕೇಶರು



"ನೋಡು, ನಿಮ್ಮಮ್ಮ ನೆನಪಿಟ್ಟುಕೊಂಡು ನನ್ನ ಲೋಟಗಳನ್ನು ಕಳಿಸಿದೆ" ಎಂದು ಸಂತೋಷಪಟ್ಟಿದ್ದರು.

ಕೆಲದಿನಗಳ ನಂತರ ಆ ಆಸ್ಪತ್ರೆಯ ವೈದ್ಯರು ಲಂಕೇಶರ ಕಣ್ಣಿಗೆ ಆಪರೇಷನ್ ಮಾಡಿದರು. ಆದರೆ ಅದರಿಂದ ಏನೂ ಉಪಯೋಗವಾಗಲಿಲ್ಲ. ಆದಾದನಂತರ ಹಲವಾರು ಬಾರಿ ಅವರು ಮದ್ರಾಸ್‌ಗೆ ಹೋಗಿ ಕಣ್ಣನ್ನು ತೋರಿಸಿಕೊಂಡು ಬಂದರು. ಆದರೆ ಆ ಕಣ್ಣಿನಲ್ಲಿ ಅವರಿಗೆ ಮತ್ತೆ ದೃಷ್ಟಿ ಬರಲೇ ಇಲ್ಲ. ಸರಿಯಾದ ಸಮಯಕ್ಕೆ ತೋರಿಸಿಕೊಂಡಿದ್ದರಿಂದ ಅವರ ಇನ್ನೊಂದು ಕಣ್ಣು ಕೊನೆಯವರೆಗೂ ಯಾವ ಸಮಸ್ಯೆಯನ್ನು ಕೊಡಲಿಲ್ಲ ಸದ್ಯ....

ಒಮ್ಮೆ ಮದ್ರಾಸಿನಲ್ಲಿ ಕಣ್ಣು ತೋರಿಸಲು ಲಂಕೇಶರ ಜೊತೆ ಬೇಬಿ ಹೋಗಿದ್ದಳು. ಕಣ್ಣುಗಳನ್ನು ಪರೀಕ್ಷಿಸುವ ಮುನ್ನ ಕಣ್ಣಿಗೆ ಡ್ರಾಪ್ಸ್ ಹಾಕುತ್ತಾರೆ. ಅದನ್ನು ಹಾಕಿದಾಗ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ, ಆಗ ಬೇಬಿ ಲಂಕೇಶರ ಕೈಹಿಡಿದು ನಡೆಸಲು ಮುಂದಾದಳಂತೆ. ಅದಕ್ಕೆ ಲಂಕೇಶರು "ಬೇಡ, ನಾನೇ ನಡೆಯುತ್ತೇನೆ" ಎಂದರಂತೆ. ಆದರೆ ಬೇಬಿ ಸುಮ್ಮನಾಗುವ ಪೈಕಿ ಅಲ್ಲ, ಅವಳು "ನೋಡಿದವರು ಪರವಾಗಿಲ್ವಲ್ಲಾ, ಈ ಓಲ್ಡ್ ಮ್ಯಾನ್‌ನನ್ನು ಒಬ್ಬಳು ಬ್ಯೂಟಿಫುಲ್ ಹುಡುಗಿ ಕೈಹಿಡಿದುಕೊಂಡು ಹೋಗುತ್ತಿದ್ದಾಳೆ ಎಂದು ಹೊಟ್ಟೆಕಿಚ್ಚು ಪಡುತ್ತಾರೆ, ಸುಮ್ಮನಿರು" ಎಂದಳಂತೆ. ಲಂಕೇಶರು ಜೋರಾಗಿ ನಕ್ಕು ಅವಳ ಕೈಹಿಡಿದು ನಡೆದರಂತೆ.

ಅವತ್ತು ಲಂಕೇಶರ ಕಣ್ಣಿಗೆ ಆಪರೇಷನ್ ಮಾಡುವ ಸಲುವಾಗಿ ಸುಂದರವಾಗಿದ್ದ, ದಟ್ಟವಾಗಿದ್ದ ಅವರ ಕಣ್ಣುರೆಪ್ಪೆಗಳನ್ನು ಕತ್ತರಿಸಿದ್ದರು. ಅವರ ರೆಪ್ಪೆ ಮುಂಚಿನಂತೆ ಬೆಳೆಯಲು ತುಂಬಾ ದಿನಗಳೇ ಬೇಕಾಯಿತು...

(ಮುಂದುವರೆಯುವುದು)

ಸದನದಲ್ಲಿ ಕುಳಿತು



ಬ್ಲೂ ಫಿಲಂ ನೋಡಿ
ಬೆತ್ತಲಾದ ಸರ್ಕಾರ
ಈಗ
ವಿಧಾನಸೌಧಕ್ಕೆ
ಅಂಗಿ ಹೊಲಿಸುತ್ತಿದೆ!
****
ಮೊನ್ನೆ ಹೋಲಿ ಹಬ್ಬದ ದಿನ
ತನ್ನ ಮುಖಕ್ಕೆ
ನೀಲಿ ರಂಗನ್ನು ಲೇಪಿಸಲು ಬಂದ
ಪುಟ್ಟ ಮೊಮ್ಮಗನನ್ನು ನೋಡಿ
ಬೆಚ್ಚಿಬಿದ್ದು
ಬ್ಲೂ ಫಿಲಂ ಪ್ರಕರಣದಲ್ಲಿ
ಸಿಕ್ಕಿಹಾಕೊಂಡ ಕುಟುಂಬ ಕಲ್ಯಾಣ ಸಚಿವ
ಮನೆಬಿಟ್ಟು ಓಡಿಹೋದನಂತೆ!

****
ಸದನದಲ್ಲಿ ಬ್ಲೂ ಫಿಲಂ ನೋಡಿ
ಸಿಕ್ಕಿಬಿದ್ದ ಮಂತ್ರಿ
ತನ್ನೂರ ಜಾತ್ರೆಯಲ್ಲಿ
ಸೀರೆ ಹಂಚಿದ್ದನ್ನು ನೆನೆದು
ನನಗೆ ನಾಚಿಕೆಯಾಯ್ತು!
****
"ನಾನು ಪರದೇಶದಲ್ಲಿ
ಅತ್ಯಾಚಾರಿಗಳಿಗೆ ಶಿಕ್ಷೆ ನೀಡುವ
ದೃಶ್ಯಗಳನ್ನು ನೋಡುತ್ತಿದ್ದೆ"
ಎಂದನಂತೆ ಬ್ಲೂ ಫಿಲಂ ನೋಡಿ
ಸಿಕ್ಕಿಬಿದ್ದ ಮಂತ್ರಿ.
ಇದೂ ಸರಿ ಎನ್ನಿ-
ಅತ್ಯಾಚಾರ, ಭ್ರಷ್ಟಾಚಾರ ನಮ್ಮ ದೇಶದಲ್ಲಿ
ಎಲ್ಲೆಲ್ಲೂ ಕಣ್ಣಿಗೆ ಕಾಣುತ್ತವೆ.
ಆದ್ರೆ ಶಿಕ್ಷೆ ಕೊಡುವ ದೃಶ್ಯ
ನೋಡಲು ಮಾತ್ರ
ಪರದೇಶದ ದೃಶ್ಯಾವಳಿಗಳೇ ಬೇಕಾದಾವು!
****
ಊರಗಲ್ಲಿ ಗಲ್ಲಿಗಳಲ್ಲಿ
ರಾರಾಜಿಸುತ್ತಿರುವ
ಕೋಮುವಾದಿ ಬಾವುಟಗಳೇ
ಶಿಸ್ತಾಗಿ ಸೇರಬನ್ನಿ-
ನಿಮ್ಮ ಸಿಪಾಯಿಗಳೇ ಬೆತ್ತಲಾಗಿದ್ದಾರೆ
ಅವರ ಮಾನ ಉಳಿಸಲು
ಲಂಗೋಟಿಯಾಗಿ!

• ವಿಲ್ಸನ್, ಕಟೀಲ್

ವಳ್ಳೆ ಸರ್ಕಾರ ಇದ್ರೆ, ಇಂತ ಹ್ವಡದಾಟ ನ್ಯಡಿತಿರಲಿಲ್ಲ

ಸೀರನಿಗೆ ಹೊಡೆದಾಟದ ಸುದ್ದಿಗಿಂತ ಕುತೂಹಲಕರ ತಿಯೇ ಇರಲಿಲ್ಲ, ಏಕೆಂದರೆ ಅವನ ಹುಟ್ಟಾಣಿಕೆಯೇ ದ್ದು ಎಲ್ಲಾದರೂ ಜಗಳಕ್ಕೆ ಮುನ್ನ ಕೂಗಾಟ ನಡೆಯು ಹಠಾತ್ತನೆ ಅಲ್ಲಿಗೆ ಬಂದು ಯಾರಿಗೂ ಹೊಡೆದು ವ ಅಪಾಯಕರ ವ್ಯಕ್ತಿ. ಆ ಕಾರಣಕ್ಕೆ ಕೈ ಮುರಿದು ಗಿ ದಬ್ಬೆ ಕಟ್ಟಿ ಸರಿಮಾಡಿಕೊಂಡದಕ್ಕೆ ಅದು ಡೊಂಕಾ . ಅವನಂತವರು ಪೊಲೀಸು, ವಕೀಲರು, ಮಾಧ್ಯಮ

ಯಲು ಸೀಮೆ

ಕಷ್ಟಪುರಾಣ

▶ ಬಿ. ಚಂದ್ರೇಗೌಡ

ಇರುವುದು ಗೊತ್ತಾಗಿ ಅವನಿಗೆ ಅತೀವ ಸಂತೋಷ ತ್ತು, ಆದ್ದರಿಂದ ಉಗ್ರಿ ಬಂದಕೂಡಲೇ

"ಎಲ್ಲಿಗೆ ಬತ್ಲ ಉಗ್ರಿ ಬೆಂಗಳೂರು ಹ್ವಡದಾಟ?" ವ.

"ಬೆಂಗಳೂರ ಹ್ವಡದಾಟ ಯಾವುದ್ಲ?" ಎಂದ ಮಾವ. ಆಗ ಉಗ್ರಿ

"ಅಯ್ಯೋ ನಿನಿಗೆ ಹೇಳಕ್ಕೆ ಮರತಿದ್ದೆ ಕಣಮಾವ. ಗಳೂರಲ್ಲಿ ಲಾಯರ್‌ಗಳು, ಟಿ.ವಿ.ಯೋರು, ಪೊಲೀಸ್ ರು ಸರಿಯಾಗಿ ಹ್ವಡದಾಡಿಕಂಡುಬಟ್ಟವುರೆ" ಎಂದ.

"ಆಗೊಳೊ, ಅವುರೆ ಹ್ವಡದಾಡಿದ್ರೆ ಉಳದೋರ ಮೇನೂ ಅಂತ?"

"ಅದೇ ಕಣಮಾವ ಈಗ ಆಗಿರೊಕತೆ. ನಮ್ಮೂರಲ್ಲೇ ನಾವು ಹ್ವಡದಾಟ ಮಾಡಿಕಂಡ್ರೆ ಹೋಗಿ ಪೊಲೀಸ್ ರಿಗೆ ಕಂಪ್ಲೇಂಟ್ ಕೊಡ್ತಿವಿ. ಅವುರದ ನೋಡಿಕತ್ತರೆ. ಏನು ನ್ಯಡಿತು ಅನ್ನದ ಪೇಪರ್‌ನೋರು ಬರಿತರೆ. ಮ್ಯಾಲೆ ಲಾಯರ್ ಮಡಗತಿವಿ. ಅವುರು ವಾದ ಮಾಡ್ತರೆ, ಮ ಕೊಡುಸ್ತರೆ. ಈ ತರಕೆ ನಮ್ಮ ಸಮಾಜವ ನಟ್ಟಗೆ ಡಿಕಳೋರೆ ಹ್ವಡದಾಡಿಕಂಡ್ರೆ ಗತಿಯೇನು?"

"ಅದ್ಯಾಕೆ ಹ್ವಡದಾಡಿದುರ್ಲ ಉಗ್ರಿ?" ಎಂದು ಜುಮ್ಮಿ ಲ ಪ್ರಶ್ನೆ ಹಾಕಿದಳು.

"ಅಯ್ಯೋ ಕಾರಣನೆ ಭಾಳ ಕ್ಯಟ್ಟದಾಗ್ಯದೆ ಕಣೆ. ಆ ಂಡೆ ಮಗವುನಲ್ಲ ಮನಿಯಾಳ, ಅವುನ ದ್ಯಸಿಂದ ಗಾಯ್ತು."

"ಅವುನ್ಯಾರು ಬುಡಿಸಿ ಹೇಳ್ಳ?"

"ಅವುನೆ ಕಣೆ, ಜನಾರ್ದನ ರೆಡ್ಡಿ. ಅವುನ್ನ ಹೈದರಾ ಸ್ ಜೈಲಿಂದ ಬೆಂಗಳೂರಿಗೆ ತಂದಿದ್ರಂತೆ. ಅವುನ್ನ ರ್ಟಿಗೆ ತಗಂಡೋದಾಗ ಟಿವಿ ಮಂದಿ ತಮ್ಮ ಕ್ಯಾಮರಾ ತ್ತಗಂಡು, ಮೈಕು ಲೈಟ್ ಹಿಡಕಂಡು, ಕೋರ್ಟಿಗೆ ದರಂತೆ. ಕೋರ್ಟು ತುಂಬ ಇವುರೆ ಆದ್ರೆ ಲಾಯರೆಲ್ಲಿ ಗಗಂಡು ವಾದ ಮಾಡಬೇಕಪ್ಪ? ಆಗ ನ್ಯೂಕ್ಯಾಟ ಶುರುವಾಯ್ತಂತೆ. ಮದ್ಲೆ ಪೊಲೀಸ್‌ನೋರಿಗೂ ಲಾಯರ್‌ಗಳಿಗೂ ಯಾವುದೊ ಹಳೆಮುಸಮ ಇತ್ತಂತೆ. ಆಗ ಹತ್ತಿಗತ್ತಂತೆ. ಯಾರು ಯಾರಿಗೆ ಹ್ವಡೀತಾ ಅವುರೆ ಅನ್ನದೆ ಗೊತ್ತಾಗಲಿಲ್ಲ, ದೊಂಬಿ ನ್ಯಡದೋಯ್ತು."

"ದೊಂಬಿ ಅಂದಮ್ಯಾಲೆ ಮುಗೀತು ಬುಡು. ಅಲ್ಲಿ ಯಾವನು ಯಾವನಿಗೊಡದ ಅಂತ ಗೊತ್ತಾಗದಿಲ್ಲ, ಗೂಸ ಕೊಟ್ಟದ್ದೆ ಬಂತು, ಗೂಸ ತಿಂದಿದ್ದೆ ಬಂತು" ಎಂದ ಕಾಳ ಮಾವ.

"ಕರಟ್ಟಾಗೇಳಿದೆ ದೊಡಪ್ಪ, ತನಿಖಾಧಿಕಾರಿ ಮುಂದಿಡೋ ಅಂತ ಅಭಿಪ್ರಾಯ ನಿಂದು" ಎಂದು ಕೊಂಡು ವಾಟಿಸ್ಸೆ ಬಂದ.

"ಅದ್ಯಂಗೇಳ್ತಿಲಾ?"

"ನೋಡಪ್ಪ, ಪೊಲೀಸ್‌ನೋರಿಗೂ ಲಾಯರ್‌ಗೂ ಹಳೆದೊಂದು ಜಗಳ ಇತ್ತು, ಇನ್ನು ಮಾಧ್ಯಮದವರೂ ಮಿತಿಮೀರಿದ್ರು. ಆ ಮುಂಡೆ ಮಕ್ಕಳಿಗೆ ಹೇಳೋರು ಕೇಳೋರು ಇಲ್ದೆ ತಲೆ ತಿರುಕರಂಗಾಗಿದ್ರು. ಅವುರಕಂಡ್ರೆ ಲಾಯರ್‌ಗಳಿಗಾಗದಿಲ್ಲ. ಆದ್ರಿಂದ ಇದೊಂದು ಮೂರು ಮೂಲೆ ಹ್ವಡದಾಟ. ಹರಿಯಮುರಿಯ ಹ್ವಡಕಂಡ್ರು. ವಳ್ಳೆ ಸರಕಾರ ಇದ್ದಿದ್ರೆ ಇಂತವ್ಯಲ್ಲ ನ್ಯಡಿತಿರಲಿಲ್ಲ ದ್ವಡಪ್ಪ"

"ಸರಕಾರ ಎಲ್ಲಿದ್ದತ್ಲ?"

"ಪೈನ್. ಇಲ್ಲಿ ಕುಂತಿರೊ ನಿನಿಗೆ ಸರಕಾರ ಇಲ್ಲ ಅಂತ ಗೊತ್ತಾಗ್ಯದಲ್ಲಾ, ಇಟೀಸ್ ರಿಯಲಿ ವಂಡ್ರುಪುಲ್ಲು, ಬೆಂಗಳೂರಲ್ಲಿ ನ್ಯಡದ ಗಲಾಟಿಗೆ ಇನ್ನು ಒಂದಿಷ್ಟು ಕಾರಣ ಸೇರಿಸಬೇಕಾಗ್ಯದೆ. ಏನಪ್ಪಾ ಅಂದ್ರೆ, ಅವುರು ಮೂರು ಜನಕ್ಕೂ ಯಂಗೆ ಆಗದಿಲ್ಲವೊ, ಅಂಗೆ ಎಡೂರಪ್ಪನಿಗೂ, ಸದಾನಂದ ಗೌಡನಿಗೂ ಆಗಲ್ಲ, ಅಂಗೆ ಈಶ್ವರಪ್ಪನಿಗೂ, ಎಡೂರಪ್ಪನಿಗೂ ಆಗಲ್ಲ, ಶಂಕರ ಬಿದ್ರಿಗೂ, ಮಿರ್ಜಿಗೂ ಜಗಳವಂತೆ. ಸಾಲದಕ್ಕೆ ಕೆಂಡಸುರಿಯೋ ಬಿಸಿಲು ಬೇರೆ. ಅಂತೂ ನ್ಯಡಿಬಾರದ್ದು ನ್ಯಡದೋಯ್ತು. ಅದು ಬಳ್ಳಾರಿನೆ ಲೂಟಿ ಮಾಡಿರೊ ಜನಾರ್ದನ ರೆಡ್ಡಿಯಿಂದ."

"ಆದ್ರು ಈ ಟಿವಿಯೋರದು ಜಾಸ್ತಿಯಾಯ್ತಲ್ಲವೆ?"

"ನಿಜ ಕಣೊ ಉಗ್ರಿ. ಯರಡು ಮೂರು ಪೊಲೀಸ್‌ನೋರು ಸತ್ತೇ ಹೋದ್ರು ಅಂತ ತೋರಿದ್ರು. ನೋಡಿದ್ರೆ ಸುಳ್ಳಾಗಿತ್ತು. ಅಲ್ಲಿಗೆ ಯಾವುದೇ ಮ್ಯಾಟ್ರನ್ನ ಇವರು ಪರಿಶೀಲನೆ ಮಾಡಲ್ಲ, ಆತುರಗೆಟ್ಟು ಆಂಜನೇಯನಂಗೆ ಹಾರಿ ಹೋಗಿ ತೋರಿಬುಡ್ತವೆ."

"ಆಂಜನ್ಯೆಯ್ಯನಿಗ್ಯಾಕ್ಲ ಟಿವಿಯೋರ ಓಲುಸ್ತಿ."

"ನೀನು ಹನುಮಾನ ಭಕ್ತಿ, ಆದ್ರು ಹೇಳ್ತಿನಿ ಕೇಳಕ್ಕ ಆಂಜನೇಯ ಮದ್ಲೆ ಕೋತಿ. ಬಿಲ್ಡಿಂಗ್ ಹತ್ತದ್ರಲ್ಲಿ ನಿಸ್ಸೀಮ. ಲಂಕಾಪಟ್ಟಣದ ಅರಮನೆ ಹತ್ತಿ ರಾವಣ್ಣ ಮಂಡೋದರಿ ಜ್ವತೆ ಮನಿಗಿರೊ ಜಾಗಕ್ಕೆ ಹೋಗಿಬುಟ್ಟ, ಮದ್ಲೆ ಅವುನು ಸೀತೆ ನೋಡಿರಲಿಲ್ಲ, ಆದ್ರಿಂದ ರಾವಣ ಸೀತೆ ಜ್ವತೆಲೆ ಮನಿಗ್ಯವುನೆ ಅಂತ ತಿಳಕಂಡು ಬುಡ್ತನೆ. ಅಂಗೆ ಈ ಟಿವಿಯೋರು ಪೊಲೀಸರಿಗೆ ಏಟುಬಿತ್ತು ಅಂತ ಯಾರೊ ಹೇಳಿದ ಕೂಡ್ಲೆ ಸತ್ರು ಅಂತ್ಲೆ ತೋರಿಸಿಬುಟ್ರು. ಆಗ ಪೊಲೀಸ್‌ನೋರು ಲಾಯರ್‌ಗಳ ಹಿಡಕಂಡು ತರುದು ಮಡಗಿದರಂತೆ."

"ನಿಜಕಂಡ್ಯ. ನಮ್ಮ ಪುಡಸಮ್ಮಿ ಹುಡುಗ, ಮಂಜೇಗೌಡನ ಹುಡುಗ್ನೂ ಬೆಂಗಳೂರಲ್ಲಿ ಲಾಯರಾಗ್ಯವೆ. ಅವುಕೂ ಬಾಸುಂಡೆ ಬರಂಗೆ ವಡದಿದ್ದರಂತೆ."

"ನನಿಗಿವತ್ತಿಗೂ ಆಶ್ಚರ್ಯ ಅಂದ್ರೆ ಪೊಲೀಸ್ನೋರು ಸುಮ್ಮನಿರೋರಿಗೆ ಯಾಕೆ ವಡಿತರೆ ಅಂತೆ" ಎಂದು ವಾಟಿಸ್ಸೆ ಒಳಗಣ್ಣಾದ.

"ಸುಮ್ಮನಿರೋನಿಗೆ ತೆಪ್ಪು ಮಾಡಿಲ್ಲ ಅನ್ನೊ ಧೈರ್ಯ ಇರತದೆ ಕಂಡ್ಯ. ಅದ್ಕೆ ನಿಂತಿರತನೆ" ಎಂದ ಕಾಳಮಾವ.

"ಅಂತೂ ಕೋ ಆಪರೇಶನ್ನಲ್ಲಿ ಇರಬೇಕಾದೋರು ಜಗಳಾಡಿಕಂಡವುರೆ. ಆದ್ರಿಂದ ಜನಗಳಿಗೆ ತುಂಬಾ ಕಷ್ಟ."

"ಏನೇ ಆಗ್ಲಿ ಟಿವಿಯೋರಿಗೆ ಇನ್ನೊಂದ್ಯರಡು ಸರಿಯಾಗಿ ಬುಡಬೇಕಾಗಿತ್ತು ಕಣೊ ವಾಟಿಸ್ಸೆ."

"ಇದ್ಯಾಕೊ ಉಗ್ರಿ ಹಿಂಗಂತಿ? ನಿನಿಗೇನು ಮಾಡಿದ್ರು ಅವುರು?"

"ನನಿಗೇನೂ ಮಾಡಿಲ್ಲ, ನನ್ನ ಮಾತಲ್ಲ ಇದು. ಚವುರದ ಗೋಪಾಲಣ್ಣ ಅಂಗಂದ. ಆ ನನ ಮಕ್ಕಳಿಗೆ ಯಾವ ಜವಾಬ್ದಾರಿನೂ ಇಲ್ಲಂತೆ. ಎಲ್ಲೊ ಯಾವನೊ ಮದಿಕಂಡವ್ರನೆ ಅಂದ್ರೆ ಕ್ಯಾಮರ ಹೊತ್ತಗಂಡು ಓಡಿಬಂದುಬುಡ್ತರಂತೆ. ಬರೀ ಹಾದರ, ಕಳ್ಳತನ, ಕೊಲೆ, ಸುಲಗೆ ಸುದ್ದಿ ಬುಟ್ಟು ಇನ್ಯಾವ ಸುದ್ದಿನೂ ಇಲವಂತೆ ಅವುರಿಗೆ."

"ನಿಜ ಕಣೊ ಉಗ್ರಿ. ಪಾಪ ರಾಜಕಾರಣಿಗಳು ತೂಕಡಸದು, ಆಕಳಸದು, ಕಂಕಳು ಕ್ಯರಕಳದು, ಮೂಗಿಗೆ ಬೆಟ್ಟು ತೂರಸದ್ನೂ ಮ್ಯೂಜಿಕ್ ಹಾಕಿ ತೋರಸ್ತವೆ. ಯಾವುದು ಇಂಪಾರ್ಟೆಂಟು, ಯಾವ್ದು ಇಂಪಾರ್ಟೆಂಟ್ ಅಲ್ಲ ಅನ್ನದೆ ಅವುಕೆ ಗೊತ್ತಿಲ್ಲ, ಇಷ್ಟಾದ್ರು ಅವುರಿಂದ ಒಂದಿಷ್ಟು ಒಳ್ಳೆ ಕೆಲಸ ಆಗ್ಯವೆ. ಹರತಾಳಪ್ಪ, ರೇಣಕಾಚಾರಿ, ಸವದಿ ಇಂತವ್ಯರಲ್ಲ ಯಂಥೋರು ಅಂತ ಅವುರಿಂದ್ಲೆ ಗೊತ್ತಾಗಿದ್ದು."

"ಅದೇನೊ ಸರಿ. ಈ ಕಸ್ತೂರಿ ಚಾನಲ್‌ನೋರ ಕತೆ ಯಾರಿಗೂ ಬ್ಯಾಡ. ಪಾಪ ಇಡೀ ದಿನ ದೇವೇಗೌಡ, ರೇವಣ್ಣ, ಕುಮಾರಣ್ಣ, ರಾಧಿಕನ ಸುದ್ದಿನೆ ತೋರಬೇಕು. ಆವ್ಮ್ಯಾಲೆ ಉಳದೋರ ಸುದ್ದಿ ತೋರಬೇಕು."

"ಅದ್ಯಾಕ್ ತೋರತರ್ಲ? ಅವ್ರುರೇನು ದುಡ್ಡು ಕೊಟ್ಟದ್ದರೆ?"

"ಏ, ಚಾನಲ್ಲೇ ಅವುರುದು ಕಣಕ್ಕ. ಈಗ ಟಿವಿಯೋರಿಗೆ ಯಂಗೆ ಪೈಪೋಟಿಯದೊ, ಅಂಗೆ ರಾಜಕಾರಣಿಗಳೂ ಪೈಪೋಟಿಗೆ ಬಿದ್ದವೆ. ಜನಾರ್ದನ ರೆಡ್ಡಿ ಜನಶ್ರೀ ತಗದೇಟಿಗೆ ಕಪ್ಪುಗಿರೊ ಕುಮಾರಣ್ಣ ಕಸ್ತೂರಿ ಚಾನಲ್ ತಗದ. ಇಂಗೆ ಇನ್ನು ಯಾರ್ಯಾರೋ ಹಿಂದಗಡಿಂದ ದುಡ್ಡಾಕಿ, ಮಾರಿಕಂಡಿರೊ ಪತ್ರಕರ್ತರ ಕೊಂಡಕಂಡು ಟಿವಿ ಚಾನೆಲ್ ನ್ಯಡಸ್ತಾಯಿದ್ದರಂತೆ" ಎಂದ ವಾಟಿಸ್ಸೆ.



"ಈ ಎಡೂರಪ್ಪಂದು ಎಲ್ಲಿಗೆ ಬಂತ್ಲ?"

"ದೊಡಪ್ಪ, ಅವುನ ಪ್ರಾಬ್ಲಮ್ಮು ಯಾರೂ ಸಾಲುಮಾಡಕ್ಯಾಗದಿಲ್ಲ, ಸಾರ್ವಜನಿಕವಾಗಿ ನನಿಗೆ ಯಾವ ಸ್ಥಾನಮಾನಾನೂ ಬ್ಯಾಡ, ಹಿಂಗೇ ಇರತಿನಿ ಅಂತನೆ. ಕೂಡ್ಲೆ ಕಾರ್ಯಕ್ರಮ ಹಾಯ್ಕಳ್ತನೆ. ಹುಟ್ಟಿದಬ್ಬ ಮಾಡಿಕಳ್ತನೆ. ಅಭಿನಂದನೆ ಸಭೆ ಏರ್ಪಡಿಸ್ತನೆ. ಇಂತ ಕ್ಯಲಸಕ್ಕೆ ಅವುನ ಖರ್ಚು ಮಾಡಿರೊ ಹಣ ಲ್ಯಕ್ಕ ಹಾಕಿದ್ರೆ ಕರ್ನಾಟಕದ ಬರಗಾಲದ ಪ್ರದೇಶಕ್ಕೆ ನೀರು ಕೊಡಬವುದಿತ್ತು, ಆದ್ರು ಅವುನ ಕಾರ್ಯಾಚರಣೆಯಿಂದ ಬಿಜೆಪಿಗೆ ಒಂದು ಲೈಟ್ ಶಾಕ್ ಟ್ರೀಟ್‌ಮೆಂಟ್ ಕೊಡ್ತನೆ ಅಂತ ಅನ್ನಸ್ತಾ ಅದೆ."

"ಅದ್ಯಾವ ಟ್ರೀಟುಮೆಂಟಪ್ಪ?"

"ಉಡುಪಿ ಚಿಕ್ಕಮಗಳೂರಲ್ಲಿ ಲೋಕಸಭೆ ಯಲಕ್ಷನ್ ನ್ಯಡೀತಾ ಅದೆ. ಅಲ್ಲಿ ಕಾಂಗ್ರೆಸ್ ಕ್ಯಾಂಡೇಟ್ ಗುಡ್ ಪರಸನ್ನು. ಅವುನ್ನ ಗೆಲ್ಲುಸೊ ಶಕ್ತಿ ಇರದು ಎಡೂರಪ್ಪನ ಕಡಿಯವರಿಗೆ. ಆಮ್ಯಲೇಳ್ತಿನಿರಿ ಅದ" ಎಂದು ವಾಟಿಸ್ಸೆ ಹೋದ.

❧

ಜಂಗಮ ▶▶▶

ಇದು ನನಗೆ ಪರಿಚಿತಳಾಗಿದ್ದ ಹೆಣ್ಣುಮಗಳೊಬ್ಬಳು ಹಾಡಿದ್ದು ಎಂದೋ, ಇದರ ಸಾಲುಗಳು ನನ್ನಲ್ಲಿದ್ದ ಸುಪ್ತ ಪುಗಳನ್ನು ಕೆದಕಿತು ಎಂದೋ? ಏಕೆ ಹೀಗೆ ನನ್ನಲ್ಲಿ ಹರ್ಷದ ಅಲೆಗಳು ಏಳುತ್ತಿವೆ? 'ಕೆಂದೆತ್ತು' ಎಂಬುದನ್ನು ಕೇಳಿ ಳ ದಿನವಾಗಿತ್ತು, ಕೆಂದೆತ್ತು, ಹಂಡೆತ್ತು, ಗಂಡೊಗಲು, ಗಳೇವು.... ನೋ ನೆನಪಾಗುತ್ತಿವೆ. ನೊಗಸುತ್ತು, ಪಟಗಣ್ಣೆ, ಗಾಡಿಯ ಗುಂಬ, ಗೆ ಮುಂತಾದ್ದರ ಜೊತೆಗೆ ಅದರ ಕೆಲವು ಅಂಗಗಳು ನೆನಪಾಗುತ್ತಿಲ್ಲ; ಡಿ. ಕಾಳ್ಯ ಗಾಡಿಯನ್ನು ತುಂಬಿದ್ದ ಕಟ್ಟಿಗೆ (ಅಂದರೆ ಸೌದೆ), ಅವುಗಳನ್ನು ದಿಂದ (ಅಂದರೆ ಅರಣ್ಯದಿಂದ) ತರುವಾಗ ಅಪ್ಪ ಮತ್ತು ಕಾಳ್ಯನ ದುರು ನಾನು ಚಂಡಿ ಹಿಡಿದು ಕಾಡಿಗೆ ಹೋದದ್ದು. ಗಾಡಿ ಡೆಯುವವನ ಬೆನ್ನುಹಿಂದೆ ಕೂತಿದ್ದಾಗ ಇನ್ನೂ ಹಸಿಯಿದ್ದ ಸೌದೆಯ ಪ್ಪಿನ ವಾಸನೆ, ಗಾಡಿ ಕೊರಕಲಿಗೆ ಬಿದ್ದು ನನ್ನೆದುರು ಇದ್ದ ಅಪ್ಪ ವಾ ಕಾಳ್ಯ ಹಿಂದಕ್ಕೆ ಜಾರಿ ನಾನು ಕಾಳ್ಯ ಮತ್ತು ಸೌದೆಯ ನಡುವೆ ಸಿಕ್ಕಿಯಾಗುವ ಭಯದಿಂದ ತತ್ತರಿಸುತ್ತಿದ್ದದ್ದು.... ಎಲ್ಲವೂ ನನ್ನ ವನದಿಂದ ಗಾಡಿ ಹೊರಟುಹೋದಾಗಲೇ ದೂರ ಸರಿದವು; ನೆನೆದರೆ ಗ ಅದೆಲ್ಲ ರೊಮ್ಯಾಂಟಿಕ್. ನೆನೆದದ್ದು ಎಲ್ಲವೂ ಆಕರ್ಷಕವಾಗಿ ನುತ್ತದೆ; ಸತ್ಯ ಸ್ವಲ್ಪ ಕಟುವಾಗಿರುತ್ತದೆ. ಹುಡುಗನ ಹಸಿವು, ಬಾಯಾರಿಕೆ, ಗಾಳಿ, ರಣಬಿಸಿಲು–ಯಾವುದೂ ನೆನಪಿನೊಟ್ಟಿಗೇ ಬರುವುದಿಲ್ಲ. ಈ ಜಂಗಮನ ವಿಷಯ ಹಾಗಲ್ಲ, 'ಎಲ್ಲೋ ಜೋಗಪ್ಪ ನಿನ್ನರಮನೆ' ಎಂದು ಳುತ್ತಲೇ ಜೋಗಿಯ ಹಾಡು, ರೂಪ, ಆತ ಪ್ರತಿನಿಧಿಸುವ ಮಾಂತ್ರಿಕ ಲೋಕಕ್ಕೆ ಸೆಳೆಯಲ್ಪಟ್ಟ ಗೃಹಿಣಿಯಂತೆಯೇ ಇದು ಇನ್ನೊಂದು ಹಾಡು. ಗಮ ಜೀವಂತ; ಅವಳ ದೃಷ್ಟಿಯಲ್ಲಿ ಆತ ಯೋಗಿ, ಶುದ್ಧ ಸುಂದರ. ನಲ್ಲಿ ಆ ಹೆಂಗಸಿಗೆ ತನ್ನ ಗಂಡನಲ್ಲಿ ಕಾಣದ ಅನೇಕ ಗುಣಗಳಿವೆ.



ಚಿಕ್ಕ ಚಿಕ್ಕ ಬೆಲೆಳೋಣೆ ಜಂಗಮ
ಚಿತ್ರ್ಯಮುಂಗುರದೋಣೆ ಜಂಗಮ.....


ಎತ್ತಾಲಿಂದ ಬಂದೆ ಜಂಗಮ,
ಕೆಂದೆತ್ತನೇರಿಕೊಂಡು ಜಂಗಮ....

ಬೆಟ್ಟಾದ್ನೆಲ್ಲಿಕಾಯಿ ಜಂಗಮ

ದೊಡ್ಡಂಚಿನಾ ಸೀರಿ ಜಂಗಮ
ಉಟ್ಟು ನಾ ಬಂದಿವ್ನಿ ಜಂಗಮ

ಕಸ್ತೂರಿ ತಿಡಿದೀವ್ನಿ ಜಂಗಮ
ನಿನ್ನ ಕಾಲೀಗೆ ಬೀಳ್ತೀನಿ ಜಂಗಮ

ಕತ್ತಾಲೆ ಕರಿದ್ಯೆತಿ ಜಂಗಮ
ನಂ–ಮನೀತಂಕ ಬಾರಯ್ಯ ಜಂಗಮ....



ಜಂಗಮನ ಬಗೆಗಿನ ಭಕ್ತಿ ಗೌರವವಾಗಿ, ಆಚ್ಚರಿ ಆಸೆಯಾಗಿ, ತೀವ್ರ ಪ್ರೇಮವಾಗುವ ಈ ಪರಿ ಅದ್ಭುತವಾಗಿದೆ; ಇಲ್ಲಿ ಆ ಹೆಣ್ಣು ತನ್ನ ಬದುಕಿಗೆ ಹೊಸ ಮಂತ್ರ ಮತ್ತು ಮಾಂತ್ರಿಕೆಯನ್ನು ತಂದುಕೊಳ್ಳುತ್ತಿದ್ದಾಳೆ. ಬದುಕೆನ್ನುವುದು ದಿನನಿತ್ಯದ ಕೆಲಸಗಳಲ್ಲ; ದಿನನಿತ್ಯದ ಲೈಂಗಿಕತೆ ಅಲ್ಲ; ಅದು ಆದಾಯ, ವ್ಯಯ, ಗಂಡ ಮಕ್ಕಳು ಎಲ್ಲವನ್ನೂ ಮೀರಿದ ನಿರಂತರ ಅಭೀಪ್ಸೆ. ನಿರಂತರ ಕನಸು ಕೂಡ. ಮನುಷ್ಯ ಆಗಿರುವುದೇ ಹಾಗೆ; ಆತನಿಗೆ ಕಂಡದ್ದು ಸಾಲದು, ನೆನೆದದ್ದು ಬೇಕು, ಕನಸಿದ್ದು ಬೇಕು–ಈ ರಕ್ತಮಾಂಸಗಳ ದೇಹವನ್ನು ಇನ್ನೊಂದು ಸ್ತರಕ್ಕೆ ಒಯ್ಯುವ 'ಅದು' ಬೇಕು... ಇದನ್ನು ಚಿಂತಿಸುತ್ತಾ ಈ ಹಾಡನ್ನು ಹಾಡಿದ ಹೆಣ್ಣುಮಗಳು ಬಿ.ಕೆ. ಸುಮಿತ್ರಾ. ಅವಳ ನೆಮ್ಮದಿಯ ಕುಟುಂಬ. ಕಾಲ ಎಲ್ಲವನ್ನೂ ಮಾಗಿಸಿಹೋದಮೇಲೆ ಇರುವ ಸೌಭಾಗ್ಯದ ಜೊತೆಗೆ ನಾನೇಕೆ ಇದನ್ನೆಲ್ಲ ಕೇಳುತ್ತಾ ಯೋಚಿಸುತ್ತಾ ಕೂತಿದ್ದೇನೆ ಎಂದು ಕೇಳಿಕೊಂಡೆ. 'ನಾನು ಬೆಳಗ್ಗೆ ಒಂದೂಕಾಲು ಗಂಟೆ ನಡೆಯುತ್ತೇನೆ' ಅಂದಾಗ ಆ ಡಾಕ್ಟರು. 'ಹೌದಾ? ಈ ವಯಸ್ಸಿನಲ್ಲಿ ಮಸ್ಟ್ ಆಯಿತು' ಅಂದ. ನನಗೆ ನಗೆ ತಡೆಯಲಾಗಲಿಲ್ಲ, ಯಾವ ವಯಸ್ಸಲ್ಲಿ? ಯಾರಿಗೆ ವಯಸ್ಸಾಯಿತು? ನನಗಂತೆ ಹೌದೆ? ಎಂದುಕೊಂಡು ವಿಷಾದದಿಂದ ನಕ್ಕೆ. ವಸಂತದ ಮರಗಳ ಜೊಂಗೆ ಕೂಡ ಹೆಣ್ಣುಮಕ್ಕಳ ಚೆಲುವನ್ನು ಏಕೆ ಜ್ಞಾಪಿಸುತ್ತವೆ. ಶಂಕರಾಚಾರ್ಯರ 'ಬ್ರಹ್ಮಸೂತ್ರ ಭಾಷ್ಯ' ಓದಬೇಕಾದ ದಿನಗಳಲ್ಲಿ ಹೀಗೆ ನನ್ನ ದಿನಗಳು ವ್ಯರ್ಥವಾಗುತ್ತಿವೆ ಎಂದುಕೊಂಡೆ. ಖುಷಿ ತಡೆಯಲಾಗಲಿಲ್ಲ!

–ಫೆಬ್ರವರಿ 26, 1997

ಖಾದಿಗಿಂತ ಕಾವಿಯೇ ಅಪಾಯಕಾರಿ

ಎಂಟು ಹತ್ತು ವರ್ಷಗಳ ಹಿಂದಿನ ಮಾತು. ಶಿವಮೂರ್ತಿ ಮುರುಘಾ ಶರಣರನ್ನು ನಾನು ನೇರವಾಗಿ ಕಂಡಿರಲಿಲ್ಲ. ಮೈಸೂರಿನ ಕೆ.ರಾಮದಾಸ್ ಅವರಿಗೂ ಉತ್ತಮ ಬಾಂಧವ್ಯ ಇದ್ದಿತು. ಮಠಾಧೀಶರನ್ನು ಕುರಿತಂತೆ ರಾಮದಾಸ್‌ಗೆ ಒಳ್ಳೆಯ ಅಭಿಪ್ರಾಯ ಇರಲಿಲ್ಲ. ಶರಣರ ವಿಷಯದಲ್ಲಿ ಮಾತ್ರ ಇದು ಭಿನ್ನವಾಗಿತ್ತು. ಮೆಚ್ಚುಗೆಯ ಮಾತನ್ನು ಆಡುತ್ತಿದ್ದರು. ಇಂತಹ ನಡವಳಿಕೆ ಕೆಲವೊಮ್ಮೆ ಹೇಳಿದವರ ವ್ಯಕ್ತಿತ್ವವನ್ನೇ ಸಂಶಯಿಸುವಂತೆ ಮಾಡುತ್ತಿತ್ತು. ಆದರೆ ಶರಣರ ಜನಪರ ಕಾಳಜಿಯನ್ನು, ವೈಜ್ಞಾನಿಕ ನಿಲುವುಗಳನ್ನು ತಿಳಿದಾಗ ರಾಮದಾಸರ ನಡೆ-ನುಡಿಗಳಲ್ಲಿ ಏನೂ ವೈರುಧ್ಯ ಇಲ್ಲ ಎಂಬುದರ ಅರಿವಾಗುತ್ತಿತ್ತು. ಶರಣರ ಬಗ್ಗೆ ಪರೋಕ್ಷವಾಗಿ ಗೌರವಭಾವನೆ ಮೂಡಿಸುತ್ತಿತ್ತು.

ಶರಣರು ಮೈಸೂರಿಗೆ ಬಂದಾಗ ಕೆಲವು ವೇಳೆ ಅವರಿಬ್ಬರ ಭೇಟಿ ಆಗುತ್ತಿತ್ತು. ಹಲವು ವಿಷಯಗಳನ್ನು ಕುರಿತು ಚಿಂತನ-ಮಂಥನ ನಡೆಸುತ್ತಿದ್ದರು. ತಮ್ಮ ಮನದಾಳದ ನೋವುಗಳನ್ನು ಶರಣರ ಎದುರು ತೋಡಿಕೊಳ್ಳುತ್ತಿದ್ದುದು ಉಂಟು. ರಾಮದಾಸ್ ಅವರ ಪತ್ನಿ ನಿರ್ಮಲಾ ಅವರು ಕರುಳುಬೇನೆಯಿಂದ ನರಳುತ್ತಿದ್ದರು. ಇದರಿಂದ ಮಾನಸಿಕವಾಗಿ ಬಹಳವಾಗಿ ರಾಮದಾಸ್ ನೊಂದಿದ್ದರು. ಶರಣರ ಒಂದು ಭೇಟಿಯಲ್ಲಿ ತಮ್ಮ ಆಂತರಿಕ ತುಮುಲವನ್ನು ಅವರ ಮುಂದೆ ಇಟ್ಟರು. ಶರಣರು ಸಾಂತ್ವನ ಹೇಳಿಕಳುಹಿಸಿದರು.

ಈ ಭೇಟಿಯ ನಂತರದ ವಿದ್ಯಮಾನಗಳನ್ನು ಶಿವಮೂರ್ತಿ ಶರಣರೇ ಈ ರೀತಿ ಉಲ್ಲೇಖಿಸಿದ್ದಾರೆ.

"ನಂತರ ಶ್ರೀಮಠದ ಕಾರ್ಯಕರ್ತರಾದ ಜಯಶಂಕರರಿಗೆ 'ರಾಮದಾಸರಲ್ಲಿಗೆ ಹೋಗಿ ಔಷಧಿ ಖರ್ಚಿಗಾಗಿ ಹತ್ತು ಸಾವಿರ ರೂ.ಗಳನ್ನು ಕೊಡಿ' ಎಂದು ಆದೇಶಿಸಿದ್ದೆ. ಅದರಂತೆ ಜಯಶಂಕರರು ಹಣ ಕೊಡಲು ಹೋದಾಗ ರಾಮದಾಸ್‌ರವರು ಸೌಜನ್ಯದಿಂದಲೇ ಅದನ್ನು ನಿರಾಕರಿಸಿದ್ದರು.

"ಅವರು ನನ್ನೊಡನೆ ಫೋನ್‌ನಲ್ಲಿ ಮಾತನಾಡುತ್ತಾ 'ಸ್ವಾಮೀಜಿ, ನನಗೆ ನಿಮ್ಮ ಅಂತಃಕರಣ ಮತ್ತು ಪ್ರೀತಿಯು ಧೈರ್ಯ ತುಂಬಿದೆ. ನನಗೆ ಆರ್ಥಿಕ ತೊಂದರೆಯೇನೂ ಇಲ್ಲ. ನನಗೆ ಬೇಕಾಗಿರುವುದು ನಿಮ್ಮ ನೈತಿಕ ಬೆಂಬಲ ಅಷ್ಟೇ" ಎಂದು ಹೇಳಿದರು.

"ಅವರೆಗೆ ಅವರ ನುಡಿಯನ್ನು ಮೆಚ್ಚಿದ್ದ ನಾನು, ಈಗ ಅವರ ನಡೆಯನ್ನೂ ಮೆಚ್ಚಿದೆ.

ಇನ್ನೂ ಮುಂದುವರೆದು ಸ್ವಾಮೀಜಿ ಅವರು ಹೇಳುತ್ತಾರೆ:

"ವಿಚಾರವಂತರಿಗೆ ಕಷ್ಟ ಯಾವುದು ಗೊತ್ತೇ?
ಸ್ವಾಭಿಮಾನವನ್ನು ಉಳಿಸಿಕೊಳ್ಳುವುದು.
ಅದಕ್ಕಾಗಿ ಅವರು ಕೊನೆಯ ಉಸಿರಿನತನಕ ಹೋರಾಡುತ್ತಾರೆ."

ಅದ್ಭುತವಾದ ಮಾತುಗಳು!

****

ಮಾಂಸಾಹಾರಿಗಳಿಗೆ ಲಿಂಗದೀಕ್ಷೆ ನೀಡಬಹುದೇ?

ಇದು ಶಿವಮೂರ್ತಿ ಶರಣರ ಜಿಜ್ಞಾಸೆ.

ಇದರ ಪರಿಹಾರಕ್ಕಾಗಿ ಹಲವಾರು ಸಮಾಲೋಚನಾ ಸಭೆಗಳನ್ನು ನಡೆಸಿದರು. ಮೈಸೂರಿನಲ್ಲಿಯೂ ಇದು ನಡೆಯಿತು. ನಾನಾ ಭಾಗಗಳಿಂದ ಪ್ರಗತಿಪರರು ಬಂದಿದ್ದರು. ರಾಮದಾಸ್ ಅವರು ನನ್ನನ್ನು ಹಾಗೂ ನನ್ನ ಒಬ್ಬ ಗೆಳೆಯರನ್ನು ಭಾಗವಹಿಸಲು ಆಹ್ವಾನಿಸಿದ್ದರು. ನಾವಿಬ್ಬರು ಸಭೆಗೆ ಹೋದೆವು. ಅದು ಮೈಸೂರಿನ ಶ್ರೀಮಠದ ಆವರಣದಲ್ಲಿ



ನಡೆದ ಸಭೆಯಾಗಿತ್ತು.

ನನ್ನ ಮಾತಿನ ಸರದಿ ಬಂದಾಗ ಹೇಳಿದ್ದರ ಸಾರಾಂಶ ಇದು:

'ಮಾಂಸಾಹಾರಿಗಳು ಎಂದರೆ ದಿನವೂ ಮಾಂಸ ತಿನ್ನುವವರು ಎಂಬ ಭ್ರಮೆ ಹಲವರಿಗೆ ಇದೆ. ಆದರೆ ಬಹಳಷ್ಟು ಜನರು ಮಾಂಸದ ರುಚಿ ನೋಡುವುದು ಮೂರು ತಿಂಗಳಿಗೋ, ಆರು ತಿಂಗಳಿಗೋ ಒಮ್ಮೆ... ಸ್ವಾಮಿಗಳು ಮಾಂಸಾಹಾರಿಗಳಿಗೆ ಲಿಂಗದೀಕ್ಷೆ ನೀಡುವುದು ಸರಿಯೆ ಎಂಬ ಸಮಸ್ಯೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನನ್ನ ಮೂಲಭೂತ ಪ್ರಶ್ನೆ ಎಂದರೆ ಲಿಂಗಧಾರಣೆಯನ್ನು ಯಾಕೆ ಮಾಡಬೇಕು? ಲಿಂಗಾಯತರ ಜನಸಂಖ್ಯೆಯನ್ನು ಹೆಚ್ಚಿಸುವ ಹುನ್ನಾರ ಇಲ್ಲಿ ಇರುವಂತಿದೆ.

ನನ್ನ ಮಾತು ಇನ್ನೂ ಪೂರ್ತಿಗೊಂಡಿರಲೇ ಇಲ್ಲ, ಒಂದಿಬ್ಬರು 'ಅವರ ಅಭಿಪ್ರಾಯ ಸೂಚಿಸಲಿ' ಎಂದು ಹೇಳಿದರಾದರೂ ಮಿಕ್ಕ ಎಲ್ಲ ಬುದ್ಧಿಜೀವಿಗಳೂ 'ಲಿಂಗಾಯತ ಜನಸಂಖ್ಯೆ ಹೆಚ್ಚಿಸುವ ಹುನ್ನಾರ' ಎಂಬ ಮಾತಿಗೆ ಅಸಮಾಧಾನ ತೋರಿದರು.

ಮುರುಘಾಶರಣರು ಮಾಡಿರುವ, ಮಾಡುತ್ತಿರುವ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಕಂಡೂ ಈ ರೀತಿಯ ಚಿಂತನೆ ಪ್ರಗತಿಪರ ಸ್ವಾಮೀಜಿಗಳಿಗೆ ಬಗೆದ ದ್ರೋಹ ಎಂದೇ ಅರ್ಥೈಸಲಾಯಿತು. ನನ್ನ ಆಲೋಚನೆಯಲ್ಲೇ ಏನೋ ತಪ್ಪಿರಬಹುದು ಎಂದು ಭಾವಿಸಿದೆ. ಶಿವಮೂರ್ತಿ ಶರಣರ ಬಗೆಗಿನ ಗೌರವ ಮಾತ್ರ ಕಡಿಮೆ ಆಗಲಿಲ್ಲ.

****

ನಾಲ್ಕು, ಐದು ವರ್ಷಗಳ ಹಿಂದೆ ಒಂದು ಸನ್ಮಾನ ಸಮಾರಂಭ. ರೈತ ಸಂಘ ಮತ್ತು ದಲಿತ ಸಂಘರ್ಷ ಸಮಿತಿ ಜಂಟಿ ಆಶ್ರಯದಲ್ಲಿ ನಡೆದ ಸಭೆ ಅದು. ಅದರ ಅಂಗವಾಗಿ ಮಂಡ್ಯದ ಗಾಂಧಿಭವನದಲ್ಲಿ ಶರಣರ ಜೊತೆ ಸಂವಾದ ಕಾರ್ಯಕ್ರಮವೂ ಇತ್ತು. ನನ್ನದೊಂದು ಪ್ರಶ್ನೆ ಹೀಗಿತ್ತು:


'ಜಾತಿಯ ಬೇರುಗಳು ಆಳವೂ ವಿಸ್ತಾರವೂ ಆಗುವಂತೆ ಮಠಗಳು ಸತತವಾಗಿ ಪ್ರಯತ್ನಿಸುತ್ತಿವೆ. ನಾವು ಜಾತಿವಿನಾಶ ಆಗಬೇಕೆಂದು ಬಯಸುತ್ತೇವೆ. ಅದಕ್ಕಾಗಿ ನಮ್ಮದೇ ಆದ ರೀತಿಯಲ್ಲಿ ಪ್ರಯತ್ನಿಸುತ್ತಿದ್ದೇವೆ. ಆದರೆ ನೀವು ಜಾತಿಗೊಂದು ಮಠ ನೀಡಲು ಹೊರಟಿದ್ದೀರಿ. ಜಾತಿವಿನಾಶ ಮಾಡುವತ್ತ ಸಾಗಬೇಕಾಗಿದ್ದ ನೀವು ಜಾತಿ ಭದ್ರಪಡಿಸಲು ಹೊರಟಿದ್ದೀರಿ. ಜಾತಿವಿನಾಶ ಮಾಡುವತ್ತ ಸಾಗಬೇಕಾಗಿದ್ದ ನೀವು ಜಾತಿ ಭದ್ರಪಡಿಸಲು ಹೊರಟಿರುವುದು ಎಷ್ಟು ಸರಿ?

ನನ್ನ ಪ್ರಶ್ನೆಯಿಂದ ಶರಣರ ಮನಸ್ಸಿನಲ್ಲಿ ಏನಾಯಿತೋ ಅರಿಯೆ. ಬಹಿರಂಗವಾಗಿ ಮಾತ್ರ 'ತುಂಬಾ ಒಳ್ಳೆಯ ಪ್ರಶ್ನೆ' ಎಂದುಹೇಳಿ ಸಭಿಕರನ್ನು ಉದ್ದೇಶಿಸಿ 'ಸುಮ್ಮನೆ ಕುಳಿತಿದ್ದೀರಲ್ಲ ಚಪ್ಪಾಳೆ ಮೂಲಕ ನಿಮ್ಮ ಸಂತೋಷ ವ್ಯಕ್ತಪಡಿಸಿ' ಎಂದು ಹೇಳಿದರು. ಚಪ್ಪಾಳೆಗಳ ಸುರಿಮಳೆಯಾಯಿತು. ನಂತರ ಶರಣರು 'ಜಾತಿವಿನಾಶ ಬಹಳ ಒಳ್ಳೆಯದು. ಅದಕ್ಕಾಗಿ ಪ್ರಯತ್ನಿಸಬೇಕಿದೆ. ಆದರೆ ಇವತ್ತಿನ ಪರಿಸ್ಥಿತಿ ಹೇಗಿದೆ ಎಂದರೆ ಹಲವು ಜಾತಿಗಳಿಗೆ ತಮ್ಮದೇ ಆದ ಮಠಗಳಿಲ್ಲ. ಅವರು ಕೀಳರಿಮೆಯಿಂದ ನರಳುತ್ತಿದ್ದಾರೆ. ಆದ್ದರಿಂದ ಅವರಿಗಾಗಿ ಮಠಗಳನ್ನು ಸ್ಥಾಪಿಸುವುದು ಅನಿವಾರ್ಯ ಆಗಿದೆ' ಎಂಬರ್ಥದ ಮಾತುಗಳನ್ನು ಆಡಿದರು.

ಪ್ರಗತಿಪರ ಚಿಂತಕರಾದ ಶಿವಮೂರ್ತಿ ಶರಣರ ಉತ್ತರ ನನಗೆ ಸಮಾಧಾನ ನೀಡಲಿಲ್ಲ. ಇವರನ್ನೂ ಜಾತಿಯ ಸೆಲೆ ಅಂತರ್ಗಾಮಿಯಾಗಿ ಇರಬಹುದಾ ಎಂಬ ಸಂಶಯ ಕಾಡತೊಡಗಿತು.

ಗೆಳೆಯರೊಡನೆ ಇದನ್ನು ಪ್ರಸ್ತಾಪಿಸಿದ್ದೆ. ಅವರಿಗೆ ಶಿವಮೂರ್ತಿ ಶರಣರಲ್ಲಿ ಅಪಾರ ನಂಬಿಕೆ. 'ಶರಣರಿಗೆ ಈ ರೀತಿಯ ಕ್ಷುದ್ರ ಆಲೋಚನೆ ಎಂದಿಗೂ ಬರಲಾರದು. ದಲಿತರಿಗೆ, ಹಿಂದುಳಿದವರಿಗೆ ಮಠ ಮಾಡಿದರೆ ಲಿಂಗಾಯತರಿಗೆ ಹೇಗೆ ಸಹಾಯವಾಗುತ್ತೆ?' ಎಂಬುದು ಅವರ ವಾದ. 'ಯೋಚನೆ ಮಾಡಿ. ಇಲ್ಲಿ ಒಂದು ರೀತಿಯ

ಎಚ್.ಎಲ್. ಕೇಶವಮೂರ್ತಿ



ಅಣಕ

ಕ್ಯಾಸ್ಕೇಡಿಂಗ್ ಎಫೆಕ್ಟ್ ಇರುವುದಿಲ್ಲವಾ. ಮೂಲಗುರು ತನ್ನ ಮರಿಗೆ ಒಂದು ಆದೇಶ ನೀಡುತ್ತಾನೆ. ಆ ಮರಿ ತನ್ನ ಭಕ್ತರಿಗೆ ಅದನ್ನು ಹೇಳುತ್ತಾನೆ. ಹೀಗಾಗಿ ಮೂಲ ಗುರುವಿನ ಆಶಯವೇ ಸಮಗ್ರ ಸಮುದಾಯದ ಆಶಯ ಆಗುವುದಿಲ್ಲವೆ?' ಎಂದರೆ ಅವರು ಸುತರಾಂ ಒಪ್ಪಲು ಸಿದ್ಧರಿಲ್ಲ!

****

ಮಠಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆ. ಅವುಗಳ ರಾಜಕೀಯ ಪ್ರಾಬಲ್ಯವೂ ಹೆಚ್ಚುತ್ತಿದೆ. ಹೆಚ್ಚು ಮಠಗಳನ್ನು ಉಳ್ಳ ಜಾತಿ ರಾಜಕೀಯವಾಗಿ ಹೆಚ್ಚು ಪ್ರಭಾವಶಾಲಿ ಆಗುತ್ತಿದೆ.

ಯಡಿಯೂರಪ್ಪ ಭ್ರಷ್ಟ.
ಜಗಜ್ಜಾಹೀರು ಆಗಿರುವ ಸತ್ಯ ಇದು.
ಆದರೂ ಅವರೇ ನಮ್ಮ ನಾಯಕ!
ಯಾಕೆ?
ವೀರಶೈವ ಸಮುದಾಯಕ್ಕೆ ಸೇರಿದವರು ಅವರು!
ಹಾಗಾದರೆ ಯಡಿಯೂರಪ್ಪ-ವೀರಶೈವರು-ಏನು?
ದೊಡ್ಡ ಸೊನ್ನೆ!
ಇಂತಹವರೇ ನಮ್ಮ ನಾಯಕರು!

ಇವರು ಅಪರಾಧ ಎಸಗಿ ಜೈಲಿಗೆ ಹೋದರೆ ಮಠಾಧೀಶರು ಅಲ್ಲಿಗೆ ಹೋಗಿ 'ಸಾಂತ್ವನ' ಹೇಳುತ್ತಾರೆ. ಅವರ ಹುಟ್ಟುಹಬ್ಬದಂದು ಆಶೀರ್ವಚನ ನೀಡಲು ಕಾವಿಯ ಹಿಂಡೇ ಬರುತ್ತದೆ. ಆ ಹಿಂಡಿನಲ್ಲಿ ಶಿವಮೂರ್ತಿ ಶರಣರೂ ಇದ್ದರೆಂದರೆ... ನಿಮಗೆ ಶಾಸಕರ ಬೆಂಬಲ ಇದೆ. ನೀವು ಸುಮ್ಮನೆ ಕೂರಬಾರದು ಎಂದು ಓರ್ವ ಭ್ರಷ್ಟನಿಗೆ ಮತ್ತೆ ಮುಖ್ಯಮಂತ್ರಿಯಾಗಲು ಹೋರಾಡು ಎಂದು ಪರೋಕ್ಷವಾಗಿ ಸೂಚಿಸಿದರು ಎಂದರೆ...

ಶಿವಮೂರ್ತಿ ಶರಣರ
ನುಡಿಯನ್ನು ಮೆಚ್ಚಿದ್ದ ಜನ
ಈ ನಡೆಯನ್ನು ಮೆಚ್ಚುವುದೆಂತು?

ಈಗ ಜನರ ಮುಂದಿರುವ ಪ್ರಶ್ನೆ-ಮಠಾಧಿಪತಿಗಳು ಹಾಗೂ ರಾಜಕಾರಣಿಗಳಲ್ಲಿ ಪ್ರಜಾಪ್ರಭುತ್ವಕ್ಕೆ ಯಾರು ಹೆಚ್ಚು ಅಪಾಯಕಾರಿ?

ರಾಜಕಾರಣಿಗಳ ನಡೆ ಬೇರೆ, ನುಡಿ ಬೇರೆ. ಅವರನ್ನು ಅರ್ಥಮಾಡಿಕೊಳ್ಳಬಹುದು.

ಆದರೆ ಮಠಾಧಿಪತಿಗಳು?

ರಾಜಕಾರಣಿಗಳ ನಡೆಯೇ ಇವರಿಗೆ ಆದರ್ಶ!

ಒಬ್ಬರು ಅಭಿವೃದ್ಧಿ ಹೆಸರಿನಲ್ಲಿ ಸುಲಿಗೆ ಮಾಡುತ್ತಾರೆ. ಇನ್ನೊಬ್ಬರು ದೇವರು, ಧರ್ಮ, ಆಧ್ಯಾತ್ಮದ ಹೆಸರಿನಲ್ಲಿ ಅದನ್ನು ಮಾಡುತ್ತಾರೆ.

ಖಾದಿಗಿಂತ ಕಾವಿ, ಅದರಲ್ಲೂ ಪ್ರಗತಿಪರ ಕಾವಿ ಪ್ರಜಾಪ್ರಭುತ್ವಕ್ಕೆ ಹೆಚ್ಚು ಅಪಾಯಕಾರಿ...

ಜನರ ದಾರಿ ತಪ್ಪಿಸುತ್ತಿರುವ ನಾಯಕರು

ಹೆತ್ತವರಿಗೆ ತಮ್ಮ ಮಕ್ಕಳ ಮೇಲೆ ಎಷ್ಟೇ ಪ್ರೀತಿಯಿದ್ದರೂ, ದುಂದುವೆಚ್ಚ ದುರಭ್ಯಾಸ ಮತ್ತಿತರ ಅಭ್ಯಾಸಗಳಿಗೆ ಬಲಿಯಾಗದಂತೆ ತಡೆಯುತ್ತಾರೆ. ಸಿಹಿ ಅದೂ ಇದೂ ತಿಂದರೆ ಎಲ್ಲಿ ಹಲ್ಲು ಹುಳುಕಾಗುತ್ತದೋ ಎಂಬ ಕಾಳಜಿ ವಹಿಸುತ್ತಾರೆ. ಹಲವು ವ್ಯಸನಗಳಿಗೆ ದಾರಿಯಾಗಬಹುದೆಂದು ಮಕ್ಕಳ ಕೈಗೆ ಹಣ ಸಿಗದಂತೆ ನೋಡಿಕೊಳ್ಳುತ್ತಾರೆ. ಒಂದಷ್ಟು ಬೆಳೆದು ದೊಡ್ಡವರಾಗುತ್ತಿದ್ದಂತೆ ಅವರು ಬಳಸುವ ಅಂತರ್ಜಾಲ, ಮೊಬೈಲ್ ಫೋನ್‌ಗಳ ಬಗ್ಗೆ ಆತಂಕ ಇದ್ದೇ ಇರುತ್ತದೆ. ಒಟ್ಟಾರೆ ಮಕ್ಕಳು ಅಡ್ಡಹಾದಿ ಹಿಡಿಯಬಾರದು ಎಂಬ ಮೂಲಭೂತ ಕಾಳಜಿ ಹೆತ್ತವರಿಗೆ. ಇದು ಒಂದು ಕುಟುಂಬದ ಚೌಕಟ್ಟಿನ ವಿಷಯ. ಆದರಿಂದ ಹೊರಗೆ ಈ ಕಾಳಜಿಯನ್ನು ನಿರೀಕ್ಷಿಸಲಾಗುವುದಿಲ್ಲ. ಈರ್ಷೆ, ಅಸೂಯೆ, ಮನೆಮುರುಕುತನಗಳು ಜಾಲ ಬೀಸಿರುತ್ತವೆ. ಕುಡಿಸಿ, ತಿನ್ನಿಸಿ ಆಸ್ತಿಪಾಸ್ತಿ ಬರೆಸಿಕೊಂಡ ಅದೆಷ್ಟೋ ನಿದರ್ಶನಗಳು ನಮ್ಮ ಮುಂದಿವೆ.


ಜನನಾಯಕರು ಅಥವಾ ಜನಪ್ರತಿನಿಧಿಗಳೆನಿಸಿಕೊಂಡವರು ಮೇಲೆ ಪ್ರಸ್ತಾಪಿಸಿದ ಎರಡು ಮಜಲುಗಳಲ್ಲೊಂದಾದ ಮೊದಲ ಜವಾಬ್ದಾರಿಯುತ ಸ್ಥಾನದಲ್ಲಿರಬೇಕಾದುದು ನಿರ್ವಿವಾದ. ಏಕೆಂದರೆ ಅವರದು ಬಹು ವ್ಯಾಪಕವಾದ ಮಾತೃ ಸ್ಥಾನ. ಆದರೆ ಇವತ್ತು ಎಲ್ಲ ಜನಪ್ರತಿನಿಧಿಗಳು ಎರಡನೇ ಮಜಲಿನ ಮನೆಮುರುಕುತನದ ಸ್ಥಾನವನ್ನಲಂಕರಿಸಿರುವುದು ಸಮಾಜದ ದುರ್ದೈವ. ಇದೀಗ ಯುಗಾದಿ ಹಬ್ಬ ನೆಪಮಾಡಿಕೊಂಡು ಬೆಂಗಳೂರು ನಗರ ಭಾಗದ ಶಾಸಕನೊಬ್ಬ (ಆದಾಯಕ್ಕಿಂತಲೂ ಅಧಿಕ ಸಂಪತ್ತು ಕ್ರೋಢೀಕರಿಸಿರುವ ಗಂಭೀರ ಆರೋಪ ಎದುರಿಸುತ್ತಿದ್ದಾನೆ) ತನ್ನ ಕ್ಷೇತ್ರದ ಜನತೆಗೆ ಹೊಸ ಬಟ್ಟೆ ಹಂಚುವ ಕಾರ್ಯಕ್ಕೆ ಚಾಲನೆ ನೀಡಿದ್ದಾನೆ. ಸಂಘ-ಸಂಸ್ಥೆಗಳು, ಸ್ತ್ರೀ ಸಂಘಗಳು, ಆಟೋ ಚಾಲಕರ ಸಂಘಗಳು ಮುಂತಾದ ಹೆಸರಿನಲ್ಲಿರುವ ಹಿಡಿ ಹುಡಿ ಗುಂಪುಗಳ ಲೀಡರುಗಳು ತಮ್ಮ ಹಿಂಬಾಲಕರ ಹಿಂಡುಗಳನ್ನು ಶಾಸಕರ ಮುಂದೆ ಪ್ರದರ್ಶಿಸಿ ಹೊಸ ಬಟ್ಟೆ ಮತ್ತು ಯುಗಾದಿ ಹಬ್ಬದ ಮಾರನೇ ದಿನದ ವರ್ಷತುಡುಕು(ಮಾಂಸದೂಟ)ಗೆ ಆಹ್ವಾನ ಪಡೆದು ಬರುತ್ತಿದ್ದಾರೆ. ಅವತ್ತು ತುಂಡಿನ ಜೊತೆಗೆ ಗುಂಡು ಇರುತ್ತದೆಂಬುದು ಹೇಳಬೇಕಾಗಿಲ್ಲ.

ಇದೇ ಬೆಂಗಳೂರಿನ ಕೆ.ಆರ್.ಪುರಂ ಕ್ಷೇತ್ರದ ನೂತನ ಶಾಸಕ ಆಕಾಂಕ್ಷಿಯೊಬ್ಬ ಈಗ ಎರಡು ವರ್ಷಗಳಿಂದ ಇಂಥದೇ ಹತ್ತು ಹಲವು 'ಪುಣ್ಯ' ಕಾರ್ಯಗಳಿಗೆ ಹಣವನ್ನು ನೀರಿನಂತೆ ಚೆಲ್ಲಾಡುತ್ತಿದ್ದಾನೆ. ಇನ್ನು ಕೃಷ್ಣಯ್ಯಶೆಟ್ಟಿಯ ಹಳಸಲು ವಶೀಕರಣ ತಂತ್ರ ಎಲ್ಲರಿಗೂ ಗೊತ್ತಿರುವ ವಿಷಯ. ಇವು ಕೆಲವು ನಿದರ್ಶನಗಳಷ್ಟೆ. ರಾಜಕೀಯದ ಎಲ್ಲ ಕ್ಷೇತ್ರಗಳ ಎಲ್ಲ ನಾಯಕರು ಇಂಥ ಒಂದಲ್ಲ ಒಂದು ರೀತಿಯ 'ಕೊಡುಗೈ ದಾನಿ'ಗಳಾಗಿ ಬದಲಾಗಿದ್ದಾರೆ. ಸರ್ವಸಂಘ ಪರಿತ್ಯಾಗಿಗಳೆನಿಸಿಕೊಂಡ ಕಾವಿಧಾರಿಗಳೇ ಇವರ ಭಿಕ್ಷೆ ಸ್ವೀಕರಿಸುತ್ತಾರೆಂದ ಮೇಲೆ ಜನಸಾಮಾನ್ಯರ ನಡೆ ಏನು ಎಂಬುದು ಇತ್ತೀಚಿನ ಆಪರೇಷನ್ ಕಮಲದ ಪಾಪದ ಚುನಾವಣೆಗಳಲ್ಲಿ ನೋಡಿದ್ದೇವೆ!

ದುಡಿಮೆಗೆ ಅನುಕೂಲ ಮಾಡಿಕೊಡಬೇಕು. ದುಡಿಯಲು ಪ್ರೇರೇಪಿಸಬೇಕು. ದುಡಿದುಣ್ಣಲು ಕಲಿತರೆ ಆನಂದಿಸಬೇಕು. ಕೈ ಚಾಚಿದರೆ ಕಪಾಳಕ್ಕೆ ಬಾರಿಸಬೇಕು. ಇದು ಜನನಾಯಕರ ಲಕ್ಷಣ. ಜನರನ್ನು ಭಿಕ್ಷುಕರನ್ನಾಗಿ ಮಾಡುವುದು, ದಾರಿ ತಪ್ಪಿಸುವುದು ದೂರ್ತರ ಲಕ್ಷಣ. ಇಂಥ ದೂರ್ತರ ಕೈ ಮೇಲಾಗುತ್ತಿರುವುದು ಆತ್ಮಹತ್ಯಾತ್ಮಕ ವಿಷಯ. ಇದು ಎಲ್ಲರಿಗೂ ಅರ್ಥವಾಗುವ ಸರಳ ವಿಷಯ. ಆದರೂ ಬಹು ಜನರು ಯಾಚಕ ಪ್ರವೃತ್ತಿಗೇ ಜೋತು ಬಿದ್ದು ದೂರ್ತರನ್ನು ಬೆಳೆಸುತ್ತಿರುವುದು ನಾಚಿಕೆಗೇಡಿನ ಸಂಗತಿ. ನಿಸರ್ಗ ನಮಗೆ ನೀಡಿರುವ ಆಯ್ಕೆ ಮತ್ತು ಅನುಕೂಲಗಳ ಮುಖಾಮುಖಿಯಲ್ಲಿ ಒಮ್ಮೆ ಅವಲೋಕಿಸಿದರೆ ನಾವೆಂಥ ಕ್ರಿಮಿಗಳಾಗುತ್ತಿದ್ದೇವೆ ಎಂಬುದು ವೇದ್ಯವಾಗುತ್ತದೆ. ನಾವು ಕ್ರಿಮಿಗಳಲ್ಲ, ಜೀವಂತ ಜನ ಎನಿಸಿಕೊಳ್ಳಬೇಕಾದರೆ ಸ್ವಾಭಿಮಾನ, ಸ್ವಾವಲಂಬನೆಯೇ ಅದರ ದ್ಯೋತಕ. ಆಮಿಷಗಳಿಗೆ ಕೈಯೊಡ್ಡುವುದಂತೂ ಅಲ್ಲವೇ ಅಲ್ಲ.

- ಟಿ.ಎಂ.ಕೃಷ್ಣ ಬೆಂಗಳೂರು


"ವಿಶೇಷಾಂಕವೆಂದರೆ ಅದು ಮಾಮೂಲಿ ಸ್ವರೂಪದ ಬರಿಯ ಬದಲಾವಣೆಯ ಪ್ರಯತ್ನವಲ್ಲ, ಅದು ಕಾಳಜಿ, ಅಂತಃಕರಣ, ಆಲೋಚನೆ, ಬೌದ್ಧಿಕ ಎಚ್ಚರ, ಉಲ್ಲಾಸ ಎಲ್ಲವುಗಳ ಸಂಗವಾಗಿರಬೇಕಿದೆ"



ವಿಶೇಷಾಂಕ ತುಂಬಾ ಚೆನ್ನಾಗಿದೆ

ಎಂದು ಲಂಕೇಶರು ಶ್ರಮ ವಹಿಸುತ್ತಿದ್ದರು. ಈ ವಾರದ ವಿಶೇಷಾಂಕ ನಿಮ್ಮ ಹಾಗು ನಿಮ್ಮ ತಂಡದ ಕಳಕಳಿಯ ಪ್ರಯತ್ನವಾಗಿದೆ. ಪ್ರತಿ ಪುಟದಲ್ಲೂ ಗಟ್ಟಿ ಮನಸ್ಸಿನ ಸೃಜನಾತ್ಮಕ ಛಾಪು ಇದೆ. ಎಷ್ಟೋ ಪತ್ರಿಕೆಗಳು ವಿಶೇಷಾಂಕದ ಪುಟಗಳನ್ನು ಜಾಹೀರಾತಿಗಾಗಿಯೇ ಮೀಸಲಿಡುವಾಗ ಗೌರಿ ಲಂಕೇಶ್ ಯಾವಾಗಲೂ ವಿಭಿನ್ನ, ವಿಶಿಷ್ಟವೇ.

- ರವಿಕುಮಾರ್, ಹಾಸನ



ಮಾರ್ಚ್ 7, 2012ರ 'ಲಂಕೇಶ್' ವಾರ ಪತ್ರಿಕೆಯ ಸಂಚಿಕೆ ಉತ್ತಮವಾಗಿ ಮೂಡಿಬಂದಿದೆ. ಚಾರ್ವಾಕ, ಕಂಡಹಾಗೆ, ಕಟ್ಟೆಪುರಾಣ, ಬದಲಾಗದ ದರ್ಶನ್‌ನ ಹಳೇ ಚಾಳಿ, ಯಾಗದ ಕುದುರೆ, ಕತೆ... ಒಂದಕ್ಕಿಂತ ಒಂದು ಚೆನ್ನಾಗಿವೆ. ಪತ್ರಿಕೆ ಹೀಗೆ ಮೂಡಿಬರಲಿ.

- ಶಿವಲಿಂಗಸ್ವಾಮಿ, ತುಮಕೂರು

ದರ್ಶನ್ ತೂಗುದೀಪ ಓರ್ವ ಸಾಮಾನ್ಯ ನಟ ಅಷ್ಟೇ. ಆತ ದೇವ ಪುರುಷನಲ್ಲ. ಆತ ತನ್ನ ಹೆಂಡತಿ ಮೇಲೆ, ನಿರ್ಮಾಪಕರ ಮೇಲೆ ದಾಳಿ ಮಾಡುವುದು ಸರಿಯಲ್ಲ. ಬದಲಾಗದ ಆತನ ಹಳೇ ಚಾಳಿ ವರದಿ ಸೂಪರ್ ಆಗಿತ್ತು.


-ಸ್ವಾಮಿ, ಎಸ್‌ಎಂಎಸ್ ಮೂಲಕ

ಹೊಲಸು ರಾಜಕಾರಣಿಗಳ ಬಗ್ಗೆ ಪತ್ರಿಕೆಯಲ್ಲಿ ಬರುವ ವರದಿಗಳನ್ನು ಓದಿ ಓದಿ ಸಾಕಾಗಿದೆ. ಬೇರೆಯ ರೀತಿಯಲ್ಲಿ ಪತ್ರಿಕೆ ಮಾಡಿ ಪ್ಲೀಸ್. ಕಂಡಹಾಗೆ ಸೂಪರ್. ದರ್ಶನ್ ವರದಿಯಲ್ಲಿ 'ದುಶ್ಮನ್‌ಗಳ ಮಸಲತ್ತು' ಎಂದು ಬರೆದಿರುವ ಬಾಕ್ಸ್ ನಿಜವಾಗಲೂ ನೂರು ಪರ್ಸೆಂಟ್ ಸರಿ ಅನ್ನಿಸಿತು. ಶಿವಣ್ಣ ಮತ್ತು ಅವರ ಸಹೋದರರಿಗೆ ಇವರಿಬ್ಬರ ನೆರಳು ಸಹ ತಾಕುವುದಿಲ್ಲ.

- ಸವಿತಾ, ಮಂಡ್ಯ

2012ರ ಮಾರ್ಚ್ 14 ಸಂಚಿಕೆಯ ಮುಖಪುಟ ಮತ್ತು ವರದಿಗಳು ಸೂಪರ್ ಆಗಿದ್ದವು.

ಅಂಕಲ್ 'ಅವ-ಲೋಕನಾ'ಥ್



ಚಿತ್ರರಂಗದಲ್ಲಿ ಎಲ್ಲರಿಂದ ಪ್ರೀತಿಯಿಂದ 'ಅಂಕಲ್' ...ದೇ ಕರೆಸಿಕೊಳ್ಳುವ 83ರ ಹಿರಿಯ ನಟ ಲೋಕನಾಥ್ ...ನ್ನೆ ಮಾತನಾಡಲು ಸಿಕ್ಕಾಗ ಒಂದು ಅಪರೂಪದ ...ಶ್‌ಬ್ಯಾಕ್ ಕಥೆಯನ್ನು ನಮ್ಮ ಮುಂದಿಟ್ಟರು.


ಲೋಕನಾಥ್ ಅವರು ಹೇಳಿದ ಪ್ರಕಾರ ಸುಮಾರು ...ವರ್ಷಗಳ ಹಿಂದೆ ತುಮಕೂರು ರೈಲ್ವೆ ಗೇಟ್ ಕ್ರಾಸ್ ... ಅಪಘಾತಕ್ಕೀಡಾಗಿ ನಿಧನ ಹೊಂದಬೇಕಿತ್ತು. ಆದರೆ ...ದು ಅವರು ಬದುಕುಳಿದದ್ದೇ ಆಕಸ್ಮಿಕ. ಇದೀಗ 40 ...ರ್ಷಗಳ ನಂತರ ಮೊನ್ನೆ ಮೊನ್ನೆ ಮತ್ತೆ ಅದೇ ತುಮಕೂರು ...ಲ್ವೆ ಗೇಟ್ ಕ್ರಾಸ್ ಬಳಿ ಅವರಿದ್ದ ವಾಹನ ಮತ್ತೊಮ್ಮೆ ...ಪಘಾತಕ್ಕೀಡಾಯಿತು. ಈ ಬಾರಿಯೂ ಅವರು ...ದಲೆಳೆಯ ಅಂತರದಿಂದ ಪ್ರಾಣಾಪಾಯದಿಂದ ...ಾದರು.

ಈ ಎರಡೂ ಘಟನೆಗಳನ್ನು ನೆನೆಸಿಕೊಂಡ ಅಂಕಲ್ ...ೋಕನಾಥ್ ಭಾವಪರವಶರಾದರು. 'ನನಗೀಗ ವಯಸ್ಸು ... ನಾನು 40ರ ಹರೆಯದಲ್ಲಿದ್ದಾಗ ಅದೇ ರೈಲ್ವೆ ಗೇಟ್ ...ಸ್ ಬಳಿ ನಡೆದ ಅಪಘಾತದ ನೆನಪು ನನ್ನ ಮನಸ್ಸಿನ ...ದಿಂದ ಇನ್ನೂ ಮಾಸಿಲ್ಲ. ಏಕೆಂದರೆ ಆ ಕಾಲದಲ್ಲಿ ...ು ದೊಡ್ಡ ನಟನೂ ಅಲ್ಲ, ಈಗಿನ ತರಹ ಮೊಬೈಲ್‌ಗಳು ...ವಾ ಫೋನ್‌ಗಳ ಸೌಲಭ್ಯವೂ ಇರಲಿಲ್ಲ. ಅವತ್ತು ...ಟ್ಟಣ್ಣ ಕಣಗಾಲ್ ನಿರ್ದೇಶನದ 'ನಾಗರಹಾವು' ಚಿತ್ರದ ...ತ್ರೀಕರಣ ಮುಗಿಸಿ ದಿನಪತ್ರಿಕೆಗಳನ್ನು ಸರಬರಾಜು ...ಡುವ ಟೆಂಪೋದಲ್ಲಿ ಬೆಂಗಳೂರಿಗೆ ವಾಪಸ್ಸಾಗುತ್ತಿದ್ದೆ. ...ದರೆ ಯಾಕೋ ಏನೋ ತುಮಕೂರು ರೈಲ್ವೆ ಸ್ಟೇಷನ್ ... ನಾನು ಟೆಂಪೋದಿಂದ ಇಳಿದು ಅಲ್ಲಿಂದ ಸರ್ಕಾರಿ ...ಸ್‌ನಲ್ಲಿ ಬೆಂಗಳೂರಿಗೆ ಬಂದೆ. ಹಾಗೆ ಬೆಂಗಳೂರಿಗೆ ...ದವನೇ ಮನೆಗೂ ಹೋಗದೇ ನೇರವಾಗಿ ಫ್ಯಾಕ್ಟರಿಗೆ ...ಸಕ್ಕೆ ಹೋದೆ. ಈ ಮಧ್ಯೆ ನಾನು ಪ್ರವಾಸ ಮಾಡಿದ್ದ ...ೆಂಪೋ ವಾಹನ ಅಪಘಾತಕ್ಕೊಳಗಾಗಿ ಅದರಲ್ಲಿದ್ದವರು ...ಧನ ಹೊಂದಿದ ಸುದ್ದಿ ಪತ್ರಿಕೆಯಲ್ಲಿ ಬಂದಿತ್ತು. ಅದನ್ನು ...ದ ನಿರ್ಮಾಪಕ ವೀರಾಸ್ವಾಮಿಯವರು ತಮ್ಮ ಕಡೆಯ ...ವರನ್ನು ನಮ್ಮ ಮನೆಗೆ ಕಳುಹಿಸಿದರು. ನಾನು ಮನೆಗೆ ತಲುಪದಿರುವುದನ್ನು ನೋಡಿ ನಾನು ಕೂಡ ಆ ಅಪಘಾತದಲ್ಲಿ ಸತ್ತಿರಬಹುದೆಂದು ನಮ್ಮ ಮನೆಯವರು ಮತ್ತು ಉಳಿದವರೆಲ್ಲ ಭಾವಿಸಿದ್ದರು. ಕೊನೆಗೆ ಫ್ಯಾಕ್ಟರಿ ಕೆಲಸ ಮುಗಿಸಿ ನಾನು ಮನೆಗೆ ಸಂಜೆ ಬಂದಾಗಲೇ ಎಲ್ಲರಿಗೂ ನಿಜ ವಿಷಯ ಗೊತ್ತಾದದ್ದು" ಎಂದು ಲೋಕನಾಥ್ ಫ್ಲ್ಯಾಶ್ ಬ್ಯಾಕ್ ಕತೆಯನ್ನು ತೆರೆದಿಟ್ಟರು.

ಮೊನ್ನೆ ಕೂಡ ಲೋಕನಾಥ್ ಅವರು ಓಂ ಪ್ರಕಾಶ್ ರಾವ್ ನಿರ್ದೇಶನದ 'ಭೀಮಾ ತೀರದ ದಡದಲ್ಲಿ' ಸಿನಿಮಾದ ಚಿತ್ರೀಕರಣ ಮುಗಿಸಿ ಬರುವಾಗ ಅದೇ ಸ್ಥಳದಲ್ಲಿ ಅವರಿದ್ದ ವಾಹನ ಅಪಘಾತಕ್ಕೀಡಾಯಿತು. ಮೊದಲೇ ಹೇಳಿದಂತೆ ಅವರು ಈ ಬಾರಿಯೂ ಸ್ವಲ್ಪದರಲ್ಲೇ ಯಮನಿಂದ ಬಚಾವಾಗಿ ಬಂದಿದ್ದಾರೆ.

ಈ ಎರಡೂ ಘಟನೆಗಳು ಕಾಕತಾಳೀಯವಾಗಿ ಸಂಭವಿಸುವಂತಹದ್ದು. ಆದರೆ ಸಿನಿಮಾ ಜಗತ್ತಿನಲ್ಲಿ ಮೂಢನಂಬಿಕೆಗಳನ್ನು ಅನುಸರಿಸುವ ಜನರೇ ತುಂಬಿರುವುದರಿಂದ ಇಂತಹ ಘಟನೆಗೆ ಹೆಚ್ಚು ಪ್ರಾಶಸ್ತ್ಯ ದೊರಕುತ್ತದೆ. ಈ ಹಿನ್ನೆಲೆಯಲ್ಲಿ ಅಂಕಲ್ ಲೋಕನಾಥ್ ಜೀವನದಲ್ಲಿ ತುಮಕೂರಿನ ರೈಲ್ವೆ ಗೇಟ್ ಕ್ರಾಸ್‌ಗೆ ವಿಶೇಷವಾದ ಮಹತ್ವ ಇದ್ದೇ ಇರುತ್ತದೆ.

ಕಾಲಿವುಡ್‌ಗೆ ಕಿಟ್ಟಣ್ಣ




ಶ್ರೀನಗರ ಕಿಟ್ಟಿ ತೆಲುಗು ಚಿತ್ರರಂಗಕ್ಕೆ ಕಾಲಿಡುತ್ತಿದ್ದಾರೆ. ಆದರೆ ಈ ವಿಷಯ ಕೇಳಿ ಕಿಟ್ಟಿ ಅಭಿಮಾನಿಗಳು ಭಾರಿ ಖುಷಿ ಪಡುವಂತಿಲ್ಲ. ಏಕೆಂದರೆ ಕಿಟ್ಟಿ ತೆಲುಗಿಗೆ ಹೋಗುತ್ತಿರುವುದು ಕನ್ನಡದಲ್ಲಿ ಸೋತು ಮೂಲೆಗುಂಪಾದ 'ಕೋ...ಕೋ' ಚಿತ್ರದ ಮೂಲಕ.

ಶ್ರೀನಗರ ಕಿಟ್ಟಿ ಮತ್ತು ಪ್ರಿಯಾಮಣಿ ಜೋಡಿಯಾಗಿ ನಟಿಸಿದ 'ಕೋ...ಕೋ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಅಮೋಘವಾಗಿ ನೆಲಕಚ್ಚಿದ್ದು ನಿಮಗೆಲ್ಲ ಗೊತ್ತಿದೆ. ಆದರೂ ಈ ಚಿತ್ರವನ್ನು ಈಗ ತೆಲುಗು ಭಾಷೆಗೆ ಡಬ್ ಮಾಡಿ ಬಿಡುಗಡೆ ಮಾಡುವ ಪ್ರಯತ್ನದಲ್ಲಿದ್ದಾರೆ ಆ ಚಿತ್ರದ ನಿರ್ಮಾಪಕರು ಅದಕ್ಕೆ ಕಾರಣ ಅವರು ಈ ಚಿತ್ರಕ್ಕೆ ಹಾಕಿದ ಬಂಡವಾಳದಲ್ಲಿ ಒಂದಿಷ್ಟನ್ನಾದರೂ ವಾಪಸ್ ಪಡೆಯಬೇಕಾದರೆ ಈ ತರಹದ ಪ್ರಯತ್ನವನ್ನು ಮಾಡಲೇಬೇಕು.

'ಕೋ...ಕೋ' ಚಿತ್ರ ಕನ್ನಡದಲ್ಲಿ ಬಿಡುಗಡೆಯಾದಾಗ ಅದು ತೆಲುಗು ಚಿತ್ರದ ತರಹ ಕಾಣಿಸುತ್ತೆ ಎಂಬ ಮಾತು ಕೇಳಿಬಂದಿತ್ತು. ಅದಕ್ಕೆ ಮುಖ್ಯ ಕಾರಣ ಆ ಚಿತ್ರದಲ್ಲಿ ತೆಲುಗು ಕಲಾವಿದರು ವಿಜೃಂಭಿಸಿದ್ದು. ಅದನ್ನೇ ಈಗ ಬಂಡವಾಳ ಮಾಡಿಕೊಂಡು ಅದರ ನಿರ್ದೇಶಕ ಚಂದ್ರು ಅದನ್ನು ತುಂಬಾ ಜಾಣ್ಮೆಯಿಂದ ತೆಲುಗಿಗೆ ರೂಪಾಂತರಿಸುತ್ತಿದ್ದಾರೆ. ಚಿತ್ರದ ಸುಮಾರು 20 ನಿಮಿಷಗಳ ಕಾಲಾವಧಿಯ ದೃಶ್ಯಗಳನ್ನು ಕತ್ತರಿಸಿ ಆ ಭಾಗದಲ್ಲಿ ತೆಲುಗು ಕಲಾವಿದರನ್ನು ಹಾಕಿ ಪುನಃ ಚಿತ್ರೀಕರಣ ಮಾಡುವ ಇರಾದೆಯಲ್ಲಿದ್ದಾರೆ ಚಂದ್ರು. ಹೀಗೆ ಮಾಡುವ ಮುಖಾಂತರ ತೆಲುಗು ಚಾನಲ್‌ಗಳಿಗೆ ಸಿನಿಮಾವನ್ನು ಮಾರಾಟ ಮಾಡಿ ಒಂದಿಷ್ಟು ನಷ್ಟವನ್ನು ನಿರ್ಮಾಪಕರು ತುಂಬಿಕೊಳ್ಳಬಹುದು. ಹಾಗೆಯೇ ನಾಯಕಿ ಪ್ರಿಯಾಮಣಿ ಮತ್ತು ಖಳನಾಯಕ ಹರಿಪ್ರಸಾದ್ ನಾಮಬಲದಲ್ಲಿ ಚಿತ್ರದ ಬಿಡುಗಡೆಗೆ ಕೂಡ ನಿರ್ಮಾಪಕರು ಪ್ರಯತ್ನಿಸಬಹುದು.

ಮಳೆ ಕೃಷ್ಣಪ್ಪನ ಅಲೆ



'ಮುಂಗಾರು ಮಳೆ' ಚಿತ್ರದ ಮುಖಾಂತರ ಸ್ಟಾರ್ ವ್ಯಾಲ್ಯೂ ಗಿಟ್ಟಿಸಿಕೊಂಡ ನಿರ್ಮಾಪಕ ಇ. ಕೃಷ್ಣಪ್ಪ ಈಗ ತಮ್ಮ ಸಹೋದರ ಶಿವಣ್ಣನವರ ಮಗ ಧನುಷ್‌ನನ್ನು 'ಅಲೆ' ಎಂಬ ಚಿತ್ರದ ಮುಖಾಂತರ ಗಾಂಧಿನಗರಕ್ಕೆ ನಾಯಕ ನಟನಾಗಿ ಪರಿಚಯಿಸುತ್ತಿದ್ದಾರೆ. ಈ ಚಿತ್ರದ ನಿರ್ಮಾಪಕರು ಕಿರಣ್‌ಕುಮಾರ್ ರೆಡ್ಡಿ ಎಂಬುವವರಾದರೂ ಪರೋಕ್ಷವಾಗಿ ಈ ಕೃಷ್ಣಪ್ಪ ಅವರ ಕೃಪಾಕಟಾಕ್ಷ ಈ ತಂಡದ ಮೇಲಿದೆಯಂತೆ.


ಅಂದು ಗಣೇಶನನ್ನು ಹೀರೋ ಮಾಡಿದ ಕೃಷ್ಣಪ್ಪನವರು ಈಗ ತಮ್ಮ ಸಹೋದರನ ಮಗ ಧನುಷ್‌ನನ್ನು ಹೀರೋ ಮಾಡಲು ಹೊರಟಿದ್ದಾರೆ. ಅಂದಹಾಗೆ ಬಹುತೇಕ ಹೊಸ ನಟ-ನಟಿಯರೇ ಈ ಚಿತ್ರದಲ್ಲಿ ತುಂಬಿತುಳುಕುತ್ತಿದ್ದಾರೆ. ಸುಮಾರು 22 ಬಾಲಿವುಡ್ ಚಿತ್ರಗಳಿಗೆ ಛಾಯಾಗ್ರಹಣ ಮಾಡಿರುವ ಸೆಬೆಸ್ಟಿನ್ ಈ ಚಿತ್ರದ ಛಾಯಾಗ್ರಾಹಕರಾಗಿ ಕನ್ನಡ ಚಿತ್ರರಂಗಕ್ಕೆ ಕಾಲಿಡುತ್ತಿರುವುದು ವಿಶೇಷ.

'ಮುಂಗಾರು ಮಳೆ' ಕನ್ನಡ ಚಿತ್ರರಂಗದಲ್ಲಿ ಹಲವಾರು ದಾಖಲೆಗಳ ಅಲೆಗಳನ್ನೇ ಸೃಷ್ಟಿಸಿತ್ತು. ಈಗ ಅದೇ ಕೃಷ್ಣಪ್ಪನವರ ಆಶೀರ್ವಾದದಲ್ಲಿ ನಿರ್ಮಾಣವಾಗುತ್ತಿರುವ 'ಅಲೆ' ಚಿತ್ರ ಮತ್ತೊಮ್ಮೆ ಗಾಂಧಿನಗರದಲ್ಲಿ ಅಂತಹ ಅಲೆಯನ್ನು ಸೃಷ್ಟಿಸುತ್ತೋ ನೋಡಬೇಕು.

...ಡ್ಡಿಯ ಯಾಗದ ಕುದುರೆ ಶೆಟ್ಟರ್' ವರದಿ ಚೆನ್ನಾಗಿತ್ತು. ... ದರ್ಶನ್ ಬದಲಾಗಿದ್ದಾನೆ ಎಂಬುದು ಬರೀ ...ಮಾ ಎಂದು ನನ್ನ ಸಂದೇಹವಾಗಿತ್ತು. ಆದರೆ ...ಮ್ಮ ವರದಿಯನ್ನು ಓದಿದ ಮೇಲೆ ಅದು ...ತ್ರಿಯಾಯಿತು. ನಿಮ್ಮ ಸತ್ಯ ನಿಷ್ಠತೆಗೆ ಥ್ಯಾಂಕ್ಸ್.

- ಸುರೇಶ್‌ಚಂದ್ರ, ಟಿ.ಎಚ್. ಹಳ್ಳಿ

...ವಕೀಲರು ಮಾಧ್ಯಮದವರ ಮೇಲೆ ನಡೆಸಿದ ...ಕ್ಕೆ ಖಂಡನೀಯ. ಪ್ರಜಾಪ್ರಭುತ್ವದ ನಾಲ್ಕನೇ ...ಭವಾದ ಮಾಧ್ಯಮದ ಮೇಲೆ ವಕೀಲರು ಹಲ್ಲೆ ...ಡಿದ್ದು ಸರಿಯಲ್ಲ. ಇದರಿಂದಾಗಿ ನಾಗರಿಕ ...ಮಾಜ ತಲೆತಗ್ಗಿಸುವಂತಾಗಿದೆ. ... ಹಾಗೆಯೇ ಅಮಾಯಕ ವಕೀಲರ ಮೇಲೆ ...ೊಲೀಸರು ನಡೆಸಿದ ದೌರ್ಜನ್ಯವೂ ಖಂಡನೀಯ. ... ಮಾಧ್ಯಮದ ಮೇಲೆ ವಕೀಲರು, ವಕೀಲರ ಮೇಲೆ ...ೊಲೀಸರು ದಾಳಿ ಮಾಡಿರುವ ದೃಶ್ಯಗಳು ಕಣ್ಣೆದುರಿಗೆ ...ದ್ದರೂ ಸರ್ಕಾರ ಪೊಲೀಸರ ತನಿಖೆ, ನ್ಯಾಯಾಂಗ ...ನಿಖೆಗೆ ಎಂದು ...ೇಳುತ್ತಿರುವುದನ್ನು ಎಲ್ಲರೂ ...ಖಂಡಿಸಬೇಕು.



... ಭಾಜಪ ಸರ್ಕಾರಕ್ಕೆ ...ಮಾನಮರ್ಯಾದೆ ಇದ್ದರೆ ...ೂಡಲೇ ರಾಜೀನಾಮೆ ...ಲಿ. ಗೃಹಖಾತೆ ನಿಭಾಯಿಸಲಾಗದ ಮಂತ್ರಿಗಳು ...ಾತಕ್ಕೆ?

- ಡಿ.ಎಲ್.ನಾಗರಾಜ್, ಚೆನ್ನಗಿರಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ/ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ಸೈಲೆಂಟ್ ಸಿನಿಮಾ

ಮುಂದಿನ ವಾರ 'ಸೈಲೆನ್ಸ್' ಎಂಬ ಚಿತ್ರ ಬಿಡುಗಡೆಯಾಗುತ್ತಿದೆ. ಇದು ಸುಮಾರು ಐವತ್ತು ವರ್ಷಗಳಷ್ಟು ಹಳೆಯ ಚಿತ್ರ. ವೇಣುಗೋಪಾಲ್ ಎಂಬವವರು ಈ ಚಿತ್ರದ ನಿರ್ದೇಶಕರು. ಹಲವಾರು ಅಡೆ-ತಡೆ, ಅಡ್ಡಿ-ಆತಂಕಗಳ ನಡುವೆ ಈ ಚಿತ್ರವನ್ನು ಅವರು ಸಂಪೂರ್ಣ ಮಾಡಿದ್ದೇ ಒಂದು ದೊಡ್ಡ ಸಾಹಸ. ಏನೇ ಆದರೂ ಇದೀಗ ಈ ಚಿತ್ರ ಬಿಡುಗಡೆಯಾಗುವ ಸಂದರ್ಭದಲ್ಲಿ ಸುದ್ದಿಯಲ್ಲಿದೆ.

ಕಾರಣ ಇಷ್ಟೇ: ಇತ್ತೀಚೆಗೆ ಭಾರಿ ಪ್ರಚಾರ ಪಡೆದಿರುವ 'ದಂಡುಪಾಳ್ಯ' ಚಿತ್ರದ ಕತೆ ಮತ್ತು 'ಸೈಲೆನ್ಸ್' ಚಿತ್ರದ ಕಥೆಗೆ ಅನೇಕ ಸಾಮ್ಯತೆಗಳಿವೆಯಂತೆ. ಹೀಗಾಗಿ 'ದಂಡುಪಾಳ್ಯ' ಮತ್ತು 'ಸೈಲೆನ್ಸ್' ಚಿತ್ರದ ನಿರ್ಮಾಪಕರ ನಡುವೆ ತಮ್ಮ ತಮ್ಮ ಚಿತ್ರವನ್ನು ಮೊದಲು ಬಿಡುಗಡೆ ಮಾಡಲು ಭಾರೀ ಪೈಪೋಟಿ ನಡೆದಿತ್ತು. ಈಗ ಮೊದಲು ತಮ್ಮ ಚಿತ್ರವನ್ನು ಬಿಡುಗಡೆ ಮಾಡುವಲ್ಲಿ 'ಸೈಲೆನ್ಸ್' ಚಿತ್ರತಂಡ ಯಶಸ್ವಿಯಾಗಿದೆ. ಈಗ 'ದಂಡುಪಾಳ್ಯ' ಚಿತ್ರ ಈ ಸಿನಿಮಾದ ಬೆನ್ನಿಗೇ ಬಿಡುಗಡೆಯಾಗುತ್ತದೆಯೋ? ಅಥವಾ ತಡವಾಗಿ ಬರುತ್ತದೆಯೋ? ಒಂದು ವೇಳೆ 'ಸೈಲೆನ್ಸ್' ಬಾಕ್ಸ್ ಆಫೀಸ್‌ನಲ್ಲಿ ಗೆದ್ದರೆ 'ದಂಡುಪಾಳ್ಯ'ಕ್ಕೆ ತೊಂದರೆಯಾಗುತ್ತದೆ. ಹಾಗೆಯೇ ಈ ಚಿತ್ರ ಮುಗ್ಗರಿಸಿದರೂ ಅದರ ಸೈಡ್ ಎಫೆಕ್ಟ್ 'ದಂಡುಪಾಳ್ಯ'ದ ಮೇಲಾಗುವುದು ಗ್ಯಾರಂಟಿ. ಹೀಗೆ ಒಂದೇ ಕಥೆಯ ಎರಡು ಚಿತ್ರಗಳು ಒಟ್ಟೊಟ್ಟಿಗೆ ಬಿಡುಗಡೆಯಾಗುವ ಮೂಲಕ ಒಂದು ಹೊಸ ಸಮಸ್ಯೆ ಸೃಷ್ಟಿಯಾಗುವುದಂತೂ ನಿಜ.



ಕಷ್ಟದಲ್ಲಿ ಕೋಮಲ್!



ನಟ ಕೋಮಲ್ ಈಗ ಸಂಕಷ್ಟದಲ್ಲಿದ್ದಾರೆ. ಆದ ಕಷ್ಟ ಏನೆಂದರೆ ಅವರು ನಟಿಸಿರುವ 'ಗೋವಿಂದಾಯನಮಃ', 'ಕರೋಡ್‌ಪತಿ' ಮತ್ತು 'ರಾಧಿಕಾಳ ಗಂಡ' ಎಂಬ ಮೂರು ಚಿತ್ರಗಳು ಒಮ್ಮೆಗೆ ಬಿಡುಗಡೆಗೆ ಸಿದ್ಧವಾಗಿದ್ದರೂ ತೆರೆಯನ್ನು ತಲುಪುವ ಭಾಗ್ಯವನ್ನು ಕಾಣದಿರುವುದು.

ಈ ಮೂರರಲ್ಲಿ 'ಗೋವಿಂದಾಯ ನಮಃ' ಚಿತ್ರದ 'ಪ್ಯಾರ್‌ಗೆ ಆಗ್ಬಿಟ್ಟೈತೆ' ಹಾಡು ಈಗಾಗಲೇ ಜನಪ್ರಿಯವಾಗಿದೆ. ರಿಂಗ್‌ಟೋನ್‌ಗಳಲ್ಲೂ ಆ ಹಾಡು ಗುನುಗುನಿಸುತ್ತಿದೆ. ಯು ಟ್ಯೂಬ್‌ನಲ್ಲಿ ಈ ಹಾಡನ್ನು ನೋಡಿರುವವರ ಸಂಖ್ಯೆ ಒಂದು ಲಕ್ಷ ದಾಟಿದೆ. ಈ ಎಲ್ಲ ಕಾರಣಗಳಿಂದಾಗಿ 'ಗೋವಿಂದಾಯ ನಮಃ' ಚಿತ್ರದ ಬಗ್ಗೆ ಕುತೂಹಲ ದುಪ್ಪಟ್ಟಾಗಿದೆ.

ವಾಸ್ತವವಾಗಿ ಈ ಚಿತ್ರ ಕಳೆದ ಡಿಸೆಂಬರ್ ತಿಂಗಳಲ್ಲೇ ಬಿಡುಗಡೆಯಾಗಬೇಕಾಗಿತ್ತು. ಆದರ ನಿರ್ಮಾಪಕ ಸುರೇಶ್ ಅವರು ಈಗಾಗಲೇ ಒಂಬತ್ತು ಪತ್ರಿಕಾಗೋಷ್ಠಿಗಳನ್ನು ಮಾಡಿ ಮುಗಿಸಿದ್ದಾರೂ ಆದ್ಯಾಕೋ ಅದನ್ನು ಬಿಡುಗಡೆ ಮಾತ್ರ ಮಾಡಿಲ್ಲ.

'ಗೋವಿಂದಾಯ ನಮಃ' ಚಿತ್ರ ಬಿಡುಗಡೆಯಾದ ನಂತರ 'ಕರೋಡ್‌ಪತಿ' ಮತ್ತು 'ರಾಧಿಕಾಳ ಗಂಡ' ಚಿತ್ರಗಳನ್ನು ಬಿಡುಗಡೆ ಮಾಡಲು ನಾವು ಪ್ಲ್ಯಾನ್ ಮಾಡಿಕೊಂಡಿದ್ದೇವೆ. ಈಗ ಸುರೇಶ್ ಅವರು ಈ ಚಿತ್ರವನ್ನು ಬಿಡುಗಡೆ ಮಾಡುತ್ತಿಲ್ಲದ ಕಾರಣ ಉಳಿದ ಎರಡು ಚಿತ್ರಗಳ ಬಿಡುಗಡೆಯೂ ವಿಳಂಬವಾಗುತ್ತಿದೆ. 'ಗೋವಿಂದಾಯ ನಮಃ' ಚಿತ್ರಕ್ಕೆ ಬೇಕಾದಷ್ಟು ಪಬ್ಲಿಸಿಟಿ ಸಿಕ್ಕಿದೆ. ಅದನ್ನು ಖರೀದಿಸಲು ಹಂಚಿಕೆದಾರರೂ ಮುಂದೆಬಂದಿದ್ದಾರೆ. ಆದರೂ ಯಾವ ಕಾರಣಕ್ಕಾಗಿ ನಿರ್ಮಾಪಕ ಸುರೇಶ್ ಈ ರೀತಿ ಮಾಡುತ್ತಿದ್ದಾರೆಂದು ಅರ್ಥವಾಗುತ್ತಿಲ್ಲ" ಎಂದು ಕೋಮಲ್ ಚಡಪಡಿಸುತ್ತಿದ್ದಾರೆ.

ಈ ಚಿತ್ರದಿಂದ ಭಾರಿ ಲಾಭ ಮಾಡುವ ಯೋಜನೆಯನ್ನು ಸುರೇಶ್ ಹಾಕಿಕೊಂಡಂತಿದೆ. ಇವರ ನಿರ್ಮಾಣದ ಮೊದಲ ಚಿತ್ರ 'ಎರಡನೇ ಮದುವೆ' ಅವರ ನಿರೀಕ್ಷೆಗಿಂತಲೂ ಹೆಚ್ಚು ಲಾಭವನ್ನು ತಂದುಕೊಟ್ಟಿತ್ತು. ಅಷ್ಟೇ ಅಲ್ಲ ಈ ಚಿತ್ರವನ್ನು ಪರಭಾಷೆಗೂ ಡಬ್ ಮಾಡಿ ಸುರೇಶ್ ಇನ್ನಷ್ಟು ಹಣ ಮಾಡಿದ್ದರು. ಬಹುಶಃ ಆ ಮೊದಲ ಚಿತ್ರದ ಮಾದರಿಯಲ್ಲೇ 'ಗೋವಿಂದಾಯ ನಮಃ' ಕೂಡ ಹಣ ಮಾಡುತ್ತದೆಂಬ ನಿರೀಕ್ಷೆಯಲ್ಲಿ ಸುರೇಶ್ ಇದ್ದಾರೆ. ಆದರೆ ನಾಯಕ ಕೋಮಲ್‌ಗೆ ಈ ಚಿತ್ರದ ಜೊತೆಗೆ ಇನ್ನೆರಡು ಚಿತ್ರಗಳ ಬಿಡುಗಡೆಯ ಬಗ್ಗೆಯೂ ಚಿಂತೆಯಿದೆ. ಮುಂದೆ ಏನಾಗುತ್ತದೋ ಕಾದು ನೋಡಬೇಕು.

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 28-03-2012 RNI No. KARKAN2005/1

ಯಾರಯ್ಯ ಈ ಅಲೆಮಾರಿ



ಮೊನ್ನೆಯಷ್ಟೇ 'ಚಂಗಾರಿ' ಸಿನಿಮಾದ ಪ್ರಚಂಡ ಗೆಲುವು ಕನ್ನಡ ಚಿತ್ರರಂಗಕ್ಕೆ ಗುಟುಕು ಜೀವ ನೀಡಿತ್ತು, ಈಗ ಲೂಸ್ ಮಾದ ಅಲಿಯಾಸ್ ಯೋಗೀಶನ 'ಅಲೆಮಾರಿ' ಚಿತ್ರ ಕೂಡಾ ಬಾಕ್ಸ್‌ಆಫೀಸ್‌ನಲ್ಲಿ ಭಾರೀ ಸದ್ದು ಮಾಡುವ ಮೂಲಕ ಗಾಂಧಿನಗರದಲ್ಲಿ ಆಶಾಭಾವನೆಯನ್ನು ಸೃಷ್ಟಿಸಿದೆ.

ಹಾಗೆ ನೋಡಿದರೆ ಯೋಗೀಶ್ ನಟಿಸಿದ್ದ 'ನಂದ ಲವ್ಸ್ ನಂದಿತ' ಮತ್ತು 'ಅಂಬಾರಿ' ಎಂಬ ಎರಡು ಚಿತ್ರಗಳು ಸೂಪರ್ ಹಿಟ್ ಆಗಿದ್ದರೂ ಆತ ಆನಂತರ ನಟಿಸಿದ್ದ ಎಲ್ಲಾ ಚಿತ್ರಗಳು ತೋಪೆದ್ದಿದ್ದವು. ಅಲ್ಲಿಯತನಕ 'ಮಿನಿಮಮ್ ಗ್ಯಾರೆಂಟಿ ನಟ' ಎನಿಸಿಕೊಂಡಿದ್ದ ಯೋಗೀಶನ 'ಪ್ರೀತ್ಸೆ ಪ್ರೀತ್ಸೆ', 'ಮಿ. ಪೇಂಟರ್', 'ಯೋಗಿ', 'ರಾಮಣ', 'ಹುಂಡ', 'ದೇವ್‌ದಾಸ್' 'ಯಕ್ಷ' ಮತ್ತು 'ಧೂಳ್' ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಮಕಾಡೆ ಮಲಗಿದ್ದವಲ್ಲದೆ ಆತನ ಚಿತ್ರಗಳಿಗೆ ಚಾನೆಲ್ ರೈಟ್ಸ್ ಮಾತ್ರ ಗಿಟ್ಟುತ್ತದೆ ಎಂಬ ಮಾತಿಗೆ ಕಾರಣವಾಗಿದ್ದವು. ಇದೆಲ್ಲದರಿಂದಾಗಿ ಯೋಗೀಶನಿಗೆ ಒಂದೇ ಒಂದು ಹಿಟ್ ಚಿತ್ರ ಅತ್ಯಗತ್ಯವಾಗಿತ್ತು, ಅದೀಗ 'ಅಲೆಮಾರಿ'ಯ ಮೂಲಕ ಕೈಗೂಡಿದೆ.

ಲೂಸ್ ಮಾದ ನೋಡಲು ಸೈಕಲ್ ಟ್ಯೂಬ್‌ನಂತಿದ್ದರೂ ಆತನಲ್ಲಿ ಪ್ರತಿಭೆ ಇದೆ ಎಂಬುದು 'ದುನಿಯಾ' ಸಿನಿಮಾದಲ್ಲೇ ಸಾಬೀತಾಗಿತ್ತು, ಅಷ್ಟೇ ಅಲ್ಲ, 'ಹುಡುಗರು' ಚಿತ್ರದಲ್ಲಿ ಪುನೀತ್ ರಾಜ್‌ಕುಮಾರ್ ಮತ್ತು ಕಿಟ್ಟಿಯನ್ನೇ ಸೈಡಿಗಿಕ್ಕುವಂತೆ ಲೂಸ್ ಮಾದ ನಟಿಸಿದ್ದ.

ಈ ಹಿಂದೆ 'ನಂದ ಲವ್ಸ್ ನಂದಿತ' ಚಿತ್ರದಲ್ಲಿ ಹೆಣ ಹೊರುವವನಾಗಿ, 'ಅಂಬಾರಿ'ಯಲ್ಲಿ ಚಪ್ಪಲಿ ಹೊಲಿಯುವ ಚಮ್ಮಾರನಾಗಿ, 'ಯೋಗಿ' ಚಿತ್ರದಲ್ಲಿ ಮಿಲ್ಟ್ರಿ ಹೋಟೆಲ್ ಸಪ್ಲೈಯರ್ ಆಗಿ ಕಾಣಿಸಿಕೊಳ್ಳುವ ಮೂಲಕ ಕೆಳವರ್ಗದ ಯುವಕರ ಪ್ರತಿನಿಧಿಯಂತಾಗಿದ್ದ ಯೋಗೀಶ ಈಗ 'ಅಲೆಮಾರಿ' ಚಿತ್ರದಲ್ಲಿ ಹಾಲು ಮಾರುವ ಹುಡುಗನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾನೆ.

ಯೋಗಿಗೆ ಹೊಂದುವಂತಹ ಪಾತ್ರ, ಕತೆ ಮತ್ತು ಗೆಟಪ್ಪನ್ನು ನೀಡುವ ಮೂಲಕ ಈ ಚಿತ್ರದ ಯಶಸ್ಸಿಗೆ ಕಾರಣನಾದವನು ನಿರ್ದೇಶಕ ಸಂತು.

ಈ ಸಂತು ಇನ್ನೂ ಇಪ್ಪತ್ತಾರರ ಹುಡುಗ. ಈತ ಮೂಲತಃ ಶೃಂಗೇರಿ ಹತ್ತಿರದ ಕೊಪ್ಪದವನು. ಕಲಾ ನಿರ್ದೇಶಕ ಬಾಬು ಖಾನ್ ಬಳಿ ಸಹಾಯಕನಾಗಿ ಬಹಳಷ್ಟು ವರ್ಷಗಳಿಂದ ದುಡಿಯುತ್ತಿರುವ ಥರ್ಮಾಕೋಲ್ ನಾರಾಯಣ್‌ರ ಮಗ ಈ ಸಂತು. ಸಿನಿಮಾ ಸೆಟ್‌ಗಳನ್ನು ನಿರ್ಮಿಸುವಾಗ ಬಳಸುವ ಥರ್ಮಾಕೋಲ್‌ಅನ್ನು ವಿಧವಿಧವಾಗಿ ಕತ್ತರಿಸಿಕೊಡುವುದರಲ್ಲಿ ನಾರಾಯಣ್ ಎಕ್ಸ್‌ಪರ್ಟ್. ಸೆಟ್ ಅಸಿಸ್ಟೆಂಟ್ ಒಬ್ಬರ ಮಗನಾದ ಸಂತು ಸಣ್ಣ ವಯಸ್ಸಿನಲ್ಲೇ ತಂದೆಯೊಂದಿಗೆ ಸೆಟ್‌ಗಳಿಗೆ ಬಣ್ಣ ಬಳಿಯಲು ಹೋಗುತ್ತಿದ್ದವನು. ತಂದೆ ಮಾಡಿದ ಕೆಲಸಕ್ಕೆ ನಿರ್ಮಾಪಕರು ಹಣ ನೀಡದಿದ್ದಾಗ ಅವರ ಮನೆಬಾಗಿಲಲ್ಲಿ ನಿಂತು ಅಂಗಲಾಚುವುದು ಸಂತುಗೆ ಚಿಕ್ಕವನಿದ್ದಾಗಿನಿಂದಲೂ ಅಭ್ಯಾಸವಾಗಿಹೋಗಿತ್ತು. ಆದರೂ ಅಪ್ಪನ ಸಿನಿಮಾ ವ್ಯಾಮೋಹ ಮಗನಿಗೂ ತಗುಲಿತು.

ಹತ್ತನೇ ಕ್ಲಾಸು ಮುಗಿಸಿದ ಮೇಲೆ ಮನೆಯಲ್ಲಿದ್ದ ಬಡತನದಿಂದ ಮುಂದೆ ಓದು ಮುಂದುವರೆಸಲಾಗಲಿಲ್ಲ, ತಂದೆಗೆ ಬರುವ ಆದಾಯ ಯಾತಕ್ಕೂ ಸಾಲದು. ತಾಯಿ ಗಾರ್ಮೆಂಟ್ಸ್‌ನಲ್ಲಿ ಹೆಲ್ಪರ್ ಕೆಲಸ ಮಾಡಿ ತರುತ್ತಿದ್ದ ಹಣ ಬದುಕು ಸಾಗಿಸಲು ಸಾಕಾಗುತ್ತಿರಲಿಲ್ಲ, ಅಂತಹ ಪರಿಸ್ಥಿತಿಯಲ್ಲಿ ಪತ್ರಕರ್ತ ರವಿ ಹುಂಚಾಪುರ ಎಂಬುವವರು ಸಂತುಗೆ ಆರ್ಥಿಕ ಸಹಾಯ ಮಾಡಿ ಸಹಕರಿಸಿದರು. ಆಗ ನಿರ್ದೇಶಕ ಪ್ರೇಮ್ ಅವರ ತಂಡ ಸೇರಿ 'ಜೋಗಿ', 'ಪ್ರೀತಿ ಏಕೆ ಭೂಮಿ ಮೇಲಿದೆ', 'ರಾಜ್' ಮತ್ತು 'ಜೋಗಯ್ಯ' ಚಿತ್ರಗಳಲ್ಲಿ ಸಹಾಯಕನಾಗಿ ದುಡಿದ. ಪ್ರೇಮ್ ನಿರ್ದೇಶಿಸಿದ ಈ ಎಲ್ಲಾ ಚಿತ್ರಗಳ ಶೀರ್ಷಿಕೆ ವಿನ್ಯಾಸ ಮಾಡಿದ್ದು ಕೂಡ ಇದೇ ಸಂತು.



ನಂತರ ಪ್ರೇಮ್ ಅವರ 'ಅಡ್ಡ'ದಿಂದ ಹೊರಬಂದ ಸಂತು ಸ್ವತಂತ್ರವಾಗಿ ನಿರ್ದೇಶನ ಮಾಡಲು ಮುಂದಾದ. ತಾನೇ ಕಥೆ, ಚಿತ್ರಕಥೆ ಅದಕ್ಕೆ ಮಂಜು ಮಾಂಡವ್ಯ ಎಂಬ ಮತ್ತೊಬ್ಬ ಪ್ರತಿಭಾವಂತ ಯುವಕನಿಂದ ಸಂಭಾಷಣೆ ಬರೆಸಿದ. ಆತನ ಕತೆಯನ್ನು ಮೆಚ್ಚಿ ಸಿನಿಮಾ ಮಾಡಲು ನಿರ್ಮಾಪಕರೂ ಸಿಕ್ಕರು. ಇನ್ನೇನು ಸಿನಿಮಾ ಆರಂಭವಾಗಬೇಕು ಎನ್ನುವಷ್ಟರಲ್ಲಿ "ಈ ಚಿಕ್ಕ ಹುಡುಗನನ್ನು ನಂಬಿ ಹೇಗೆ ಕೋಟಿಗಟ್ಟಲೆ ಹಣ ಹೂಡುವುದು?" ಎಂದು ಅವರು ಮೆಲ್ಲಗೆ ಹಿಂಜರಿದುಬಿಟ್ಟರು. ಇದರಿಂದ ಸಂತು ಜಿಗುಪ್ಸೆಗೊಂಡ.

ಆದರೆ ಪ್ರೇಮ್ ತಂಡದಲ್ಲಿ ಸಖತ್ ಚುರುಕಾಗಿ ಓಡಾಡಿಕೊಂಡಿದ್ದ ಸಂತುನ ಪ್ರತಿಭೆಯನ್ನು ನಿಜಕ್ಕೂ ಗುರುತಿಸಿದವರು ಅಶ್ವಿನಿ ಸಂಸ್ಥೆಯ ಕೃಷ್ಣ ಪ್ರಸಾದ್. ಮೊದಲೇ 'ಪ್ರೀತಿ ಏಕೆ ಭೂಮಿ ಮೇಲಿದೆ' ಮತ್ತು 'ಜೊತೆಗಾರ' ಚಿತ್ರಗಳ ಕೆಟ್ಟ ಸೋಲಿನಿಂದ ಕೃಷ್ಣ ಪ್ರಸಾದ್ ಕಂಗಾಲಾಗಿದ್ದರೂ ಸಂತು ಮೇಲಿನ ನಂಬಿಕೆಯಿಂದ 'ಅಲೆಮಾರಿ' ಚಿತ್ರಕ್ಕೆ ಹಣ ಹೂಡಲು ಕೃಷ್ಣಪ್ರಸಾದ್ ಮತ್ತು ರಾಮ್‌ಪ್ರಸಾದ್ ಮುಂದಾದರು. ಅವರಿಗೆ 'ಮಂದಾಕಿನಿ' ಶ್ರೀನಿವಾಸ್ ಕೂಡಾ ಸಾತ್ ನೀಡಿದರು.






ನಿರ್ಮಾಪಕರು ತನ್ನ ಮೇಲೆ ಇಟ್ಟ ವಿಶ್ವಾಸವನ್ನು ಹಾಳುಮಾಡದ ಸಂತು ತನ್ನ ಮೊದಲನೆ ಪ್ರಯತ್ನದಲ್ಲೇ ಹಿಟ್ ಚಿತ್ರವನ್ನು ನೀಡಿದ್ದಾನೆ. ಕ್ರಿಕೆಟ್ ಹಾವಳಿ, ಶಾಲಾಕಾಲೇಜುಗಳ ಪರೀಕ್ಷೆಗಳ ನಡುವೆಯೂ ಮೊದಲ ವಾರವೇ 'ಅಲೆಮಾರಿ' ಹತ್ತಿರತ್ತಿರ ಎರಡು ಕೋಟಿ ರೂಪಾಯಿಗಳಷ್ಟು ಕಲೆಕ್ಷನ್ ಕಂಡಿದೆ. ಬರುವ ನಾಲ್ಕೈದು ವಾರ ಸಿನಿಮಾ ಇದೇ ಗತಿಯಲ್ಲಿ ಸಾಗಿದರೆ ನಿರ್ಮಾಪಕರಿಗೆ ಹತ್ತಾರು ಕೋಟಿಯ ಇಡಿಗಂಟು ತರುವುದು ಗ್ಯಾರಂಟಿ.

ನಿರಂತರ ಸೋಲಿನಿಂದ ಕಳಾಹೀನನಾಗಿದ್ದ ಲೂಸ್ ಮಾದ, ಕೋಟಿ ಬಜೆಟ್ ಸಿನಿಮಾಗಳನ್ನು ನಿರ್ಮಿಸಿ ಪಾಪರ್ ಆಗಿದ್ದ ಕೃಷ್ಣಪ್ರಸಾದ್ ಮತ್ತು ರಾಮ್‌ಪ್ರಸಾದ್ ಸಹೋದರರು, 'ತೋಪು ಚಿತ್ರದ ನಿರ್ಮಾಪಕ' ಎಂದೇ ಹಣೆಪಟ್ಟಿ ಹೊಂದಿದ್ದ ಶ್ರೀನಿವಾಸ್, ಬದುಕಿನ ಕಷ್ಟಗಳಿಗೆ ಎದೆಯೊಡ್ಡಿಬಂದ ಯುವ ನಿರ್ದೇಶಕ ಸಂತು... ಎಲ್ಲರ ಅದೃಷ್ಟವೂ ಒಂದೇ ಏಟಿಗೆ ಮಗ್ಗಲು ಬದಲಿಸಿದೆ.

ಚಿತ್ರರಂಗ ಜೀವಕಳೆ ಪಡೆಯಲು ಇದಕ್ಕಿಂತ ಇನ್ನೇನು ಬೇಕು?

• ಅರುಣ್.ಜಿ

ನಿಯತ್ತಿನ ದರ್ಶನ!



ದರ್ಶನ್ ತಾನೆಷ್ಟು ನಿಯತ್ತಿನ ಮನುಷ್ಯ ಎಂಬುದನ್ನು ಮತ್ತೊಮ್ಮೆ ತೋರಿಸಿಕೊಟ್ಟಿದ್ದಾನೆ.

ನಿರ್ಮಾಪಕ ಭಾ.ಮಾ.ಹರೀಶ್ 2002ರಲ್ಲಿ ಉಲ್ಲಾಸ್ ಎಂಟರ್‌ಪ್ರೈಸಸ್ ಎಂಬ ಬ್ಯಾನರ್ ಅಡಿ 'ಮೆಜೆಸ್ಟಿಕ್' ಎಂಬ ಸಿನಿಮಾವನ್ನು ನಿರ್ಮಿಸಿದ್ದರು. ಈ ಚಿತ್ರಕ್ಕೆ ದರ್ಶನ್‌ನನ್ನು ಆಯ್ಕೆ ಮಾಡಿಕೊಂಡಾಗ ಇಡೀ ಇಂಡಸ್ಟ್ರಿಯವರು "ಈ ಲಂಬೂನ ಹಾಕ್ಕೊಂಡು ಅದೇನು ಸಿನಿಮಾ ಮಾಡ್ತಿಯೋ" ಎಂದು ಹರೀಶ್ ಕಾಲೆಳೆದಿದ್ದರು. ಆಗ ಸುದ್ದಿಯಲ್ಲಿದ್ದ ತಾರಕೇಶ್ ಪಟೇಲ್ ಎಂಬ ನಟ "ನನ್ನನ್ನೇ ಹೀರೋ ಮಾಡಿದರೆ ನಾನು ಸಿನಿಮಾದಲ್ಲಿ ಹತ್ತು ಲಕ್ಷ ರೊಪಾಯಿ ಹೂಡುತ್ತೀನಿ" ಎಂದು ಮುಂದೆ ಬಂದಿದ್ದ. ಆದರೆ ದರ್ಶನ್‌ಗೆ ಅಷ್ಟುಹೊತ್ತಿಗಾಗಲೇ ಮಾತು ಕೊಟ್ಟಿದ್ದ ಹರೀಶ್ "ಯಾರು ಏನೇ ಅಂದರೂ ನೀನೇ ನಮ್ಮ ಸಿನಿಮಾದ ಹೀರೋ ಕಣೋ..." ಎಂದು ದರ್ಶನ್‌ಗೆ ಹೇಳಿದ್ದರು. 'ಮೆಜೆಸ್ಟಿಕ್' ಸಿನಿಮಾ ಹಿಟ್ ಆಗಿ ದರ್ಶನ್ ಎಂಬ ಮಾಸ್ ಹೀರೋ ಕನ್ನಡ ಚಿತ್ರರಂಗಕ್ಕೆ ಪರಿಚಯಗೊಂಡಿದ್ದ.



ನಂತರ ನಿರ್ಮಾಪಕರೊಂದಿಗೆ ಮುನಿಸಿಕೊಂಡ ದರ್ಶನ್ ಅವರಿಂದ ದೂರಾದ. ಈಗ ದರ್ಶನ್ ಹೀರೋ ಆಗಿ ಹತ್ತು ವರ್ಷಗಳಾಗಿವೆ. ಜೊತೆಗೆ ಭಾ.ಮಾ. ಹರೀಶ್‌ರ ಬ್ಯಾನರ್‌ಗೆ ಕೂಡಾ. ಈ ಖುಷಿಯಲ್ಲಿ ಮೊನ್ನೆ ಹರೀಶ್ ಅವರು 'ದಶಕದ ದರ್ಶನ್ ಸತ್ಯ ಉಲ್ಲಾಸ' ಎಂಬ ಕಾರ್ಯಕ್ರಮವನ್ನು ಏರ್ಪಾಡು ಮಾಡಿದರು. ಈ ಸಮಾರಂಭದಲ್ಲಿ ದರ್ಶನ್ ಮತ್ತು 'ಮೆಜೆಸ್ಟಿಕ್' ಚಿತ್ರದ ನಿರ್ದೇಶಕ ಸತ್ಯ ಇಬ್ಬರನ್ನು ಸನ್ಮಾನಿಸುವುದು ಹರೀಶ್ ಅವರ ಉದ್ದೇಶವಾಗಿತ್ತು. "ಅಣ್ಣಾ ನಾನು ಒಂದು ಗಂಟೆ ಮುಂಚಿತವಾಗಿಯೇ ಬಂದು ಪ್ರೋಗ್ರಾಂನಲ್ಲಿ ಪಾಲ್ಗೊಳ್ಳುತ್ತೀನಿ" ಎಂದು ದರ್ಶನ್ ಹೇಳಿದ್ದ. ಕಾರ್ಯಕ್ರಮಕ್ಕೆ ದೊಡ್ಡ ದೊಡ್ಡ ಕಟೌಟುಗಳನ್ನು, ಬ್ಯಾನರುಗಳನ್ನೆಲ್ಲಾ ಕಟ್ಟಿ ಭಾ.ಮಾ. ಹರೀಶ್‌ರ ತಂಡ ಕಾದಿದ್ದೇ ಕಾದಿದ್ದು, ಕಡೆಗೂ ದರ್ಶನ್ ಕಾರು ಬಂತು. ಆದರೆ ಅದರಲ್ಲಿ ಆತನ ಪತ್ನಿ ವಿಜಯಲಕ್ಷ್ಮಿ ಮಾತ್ರ ಬಂದಿಳಿದರು. "ಮಧ್ಯಾಹ್ನದ ತನಕ ದರ್ಶನ್ ಫ್ರೀಯಾಗೇ ಇದ್ರು. ಸ್ವಲ್ಪ ಹೊತ್ತಿನ ಮುಂಚೆ ಸುದೀಪ್ ಜೊತೆಗೆ ಶಿವಮೊಗ್ಗಗೆ ಹೊರಟುಬಿಟ್ಟರು" ಎಂಬ ಸಬೂಬು ವಿಜಯಲಕ್ಷ್ಮಿ ಬಾಯಿಂದ ಬಂತು.



ನಿರ್ದೇಶಕ ಸತ್ಯ ಮಾತ್ರ ನಿಯತ್ತಿನಿಂದ ಸನ್ಮಾನ ಸ್ವೀಕರಿಸಿ ಕೃತಾರ್ಥರಾದರು. ವಿಜಯಲಕ್ಷ್ಮಿ ಕಾಟಾಚಾರಕ್ಕೆಂಬಂತೆ ಸನ್ಮಾನ ಮಾಡಿಸಿಕೊಂಡು ಕಾಲುಕಿತ್ತರು.

ಭಾ.ಮಾ.ಹರೀಶ್ ಅವರು ದರ್ಶನ್‌ಗೆ ಪ್ರತಿಸ್ಪರ್ಧಿಯಾಗಿ ದೀಪಕ್ ಎಂಬ ತಮ್ಮ ಶಿಷ್ಯನನ್ನು ಚಿತ್ರರಂಗಕ್ಕೆ ಪರಿಚಯಿಸಿದ್ದಾರಲ್ಲದೆ, ದೀಪಕ್ ನಟಿಸಿರುವ 'ಮಾಗಡಿ' ಎಂಬ ಚಿತ್ರ ಈ ವಾರ ತೆರೆಗೆ ಬರುತ್ತಿದೆ. ಈ ಚಿತ್ರದ ಬಗ್ಗೆ ಇಂಡಸ್ಟ್ರಿಯಲ್ಲಿ ಪಾಸಿಟೀವ್ ಟಾಕ್ ಶುರುವಾಗಿದೆ. ಹೀಗಿರುವಾಗ ತಾನು ಈ ಸಮಾರಂಭಕ್ಕೆ ಬಂದರೆ 'ಮಾಗಡಿ' ಚಿತ್ರಕ್ಕೆ ಎಲ್ಲಿ ಪ್ರಚಾರ ದೊರೆತುಬಿಡುತ್ತೋ ಎಂಬ ಸಣ್ಣತನದಿಂದ ದರ್ಶನ್ ಸಮಾರಂಭಕ್ಕೆ ಬರದೇ ನುಣುಚಿಕೊಂಡಿದ್ದಾನೆ ಎಂಬ ಮಾತು ಕೇಳಿಬರುತ್ತಿದೆ.

ಸಿನಿಮಾದಲ್ಲಿ ಒಂದು ಅವಕಾಶಕ್ಕಾಗಿ ಹರೀಶ್ ಅವರ ಮನೆ ಬಾಗಿಲು ಕಾಯುತ್ತಿದ್ದ ಅವರ ಕಾಲಿಗೆ ಅಡ್ಡ ಬೀಳುತ್ತಿದ್ದ ದಿನಗಳನ್ನು ದರ್ಶನ್ ನೆನಪಿಸಿಕೊಳ್ಳಬೇಕಿದೆ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com